# ಜಾನಪದ ಗಂಗೋತ್ರಿ



ಕರ್ನಾಟಕ ಜಾನಪದ ಮತ್ತು
ಯಕ್ಷಗಾನ ಅಕಾಡೆಮಿ
ಬೆಂಗಳೂರು. 2

# ಜಾನಪದ ಗಂಗೋತ್ರಿ

ಸಂಪುಟ : ೬ ಮಾರ್ಚ್ ೧೯೯೪ ಸಂಚಿಕೆ : ೪

ಪ್ರಧಾನ ಸಂಪಾದಕ
**ಡಾ: ಜೀ. ಶಂ. ಪರಮಶಿವಯ್ಯ**

ಸಂಪಾದಕರು
**ಹ. ಕ. ರಾಜೇಗೌಡ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ**
ಬೆಂಗಳೂರು - ೫೬೦ ೦೦೨

JANAPADA GANGOTHRI - A Folklore Quarterly, Published by Karnataka Janapada and Yakshagana Academy, Nrupatunga Road, Bangalore - 560002. Chief Editor : Dr. J. S. Paramashivaiah Editor: H. K. Raje Gowda Vol - 6 Edition - 4 March 1994.

ವಾರ್ಷಿಕ ಚಂದಾ : ಮೂವತ್ತು ರೂಪಾಯಿ
ಬಿಡಿ ಸಂಚಿಕೆ : ಎಂಟು ರೂಪಾಯಿ

ಚಂದಾ ಮತ್ತು ಪ್ರತಿಗಳಿಗೆ
**ರಿಜಿಸ್ಟ್ರಾರ್**
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

ಮುದ್ರಣ : ಮಂಡ್ಯ ಕಂಪ್ಯೂಟರ್ ಸೆಂಟರ್, ತಾವರೆಗೆರೆ, ಮಂಡ್ಯ.

## ಪ್ರಧಾನ ಸಂಪಾದಕರ ಮಾತು

ಜಾನಪದ ಅಧ್ಯಯನ ವ್ಯಾಪಕವಾಗಿ ಬೆಳೆಯುವಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟ ಪತ್ರಿಕೆಗಳು ವಹಿಸಿದ ಪಾತ್ರ ಬಹು ದೊಡ್ಡದು. ಈ ವಿಷಯ ವಿದ್ವತ್ತಿನ ಗದ್ದುಗೆಯನ್ನು ಏರುವ ಆರಂಭದ ದಿನಗಳಲ್ಲೇ ಜಾನಪದ ಪತ್ರಿಕೆಗಳು ಹುಟ್ಟಿಕೊಂಡು ಆ ಸಂಬಂಧವಾದ ಲೇಖನಗಳನ್ನು ಪ್ರಕಟಿಸುವುದರ ಮೂಲಕ ವಿದ್ಯಾವಂತರಲ್ಲಿ ಜಾನಪದಾಸಕ್ತಿಯನ್ನು ಕೆರಳಿಸುತ್ತಾ ಬಂದವು. ಕಳೆದ ಶತಮಾನದ ಆದಿಭಾಗದಿಂದಲೂ ಇಂಥ ಪತ್ರಿಕೆಗಳ ಕೊಡುಗೆ ವಿಶಿಷ್ಟವಾದುದಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಅಪಾರ ಸಂಖ್ಯೆಯ ಜಾನಪದ ಪತ್ರಿಕೆಗಳು ಪ್ರಕಟವಾಗುತ್ತಿವೆ. ಅಮೆರಿಕೆಯಲ್ಲಂತೂ ಇವುಗಳ ಸಂಖ್ಯೆ ಅತ್ಯಧಿಕ. ಯೂರೋಪಿನ ಬೇರೆ ಬೇರೆ ದೇಶಗಳಲ್ಲಿ ಆಯಾ ದೇಶಭಾಷೆಯಲ್ಲಿ ಪತ್ರಿಕೆಗಳು ಪ್ರಕಟಗೊಂಡು ಜಾನಪದ ಅಧ್ಯಯನ ರೂಪುಗೊಳ್ಳಲು ಪ್ರೇರಕವಾಗಿವೆ.

ಭಾರತದಲ್ಲಿ ಜಾನಪದ ಅಧ್ಯಯನಕ್ಕೆ ವಿಶೇಷ ಸ್ಥಾನವನ್ನು ನೀಡಿದ ಪತ್ರಿಕೆ, 'The Indian Antiquary'. ಭಾರತದ ಬೇರೆ ಬೇರೆ ಭಾಗಗಳಲ್ಲಿ ಕೆಲಸ ಮಾಡಿದ ವಿದ್ವಾಂಸರು ದಂಡಿಯಾಗಿ ತಮ್ಮ ಸುದೀರ್ಘಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದರು. Asiatic Society Journal, Mythic Society Journalಗಳೂ ಸಹ ಜಾನಪದಕ್ಕೆ ಸೂಕ್ತ ಸ್ಥಾನವನ್ನು ನೀಡಿದವು. ಹೀಗಾಗಿ ಕಳೆದ ಶತಮಾನದಲ್ಲಿ ಜಾನಪದ ಸಂಬಂಧವಾದ ಗ್ರಂಥಗಳು ಪ್ರಕಟವಾಗದಿದ್ದರೂ ಇಂಥ ಸಂಶೋಧನ ಪತ್ರಿಕೆಗಳ ಮೂಲಕ ಅಪೂರ್ವ ಬರಹಗಳು ಬೆಳಕು ಕಂಡವು.

ಭಾರತದ ಜಾನಪದ ಕ್ಷೇತ್ರದಲ್ಲಿ ವಿಶೇಷ ಪ್ರಭಾವವನ್ನು ಬೀರಿದ 'Folklore' ಪತ್ರಿಕೆ ಕಲ್ಕತ್ತಾದಿಂದ ಈ ಶತಮಾನದ ಮಧ್ಯ ಭಾಗದಲ್ಲಿ ಪ್ರಕಟಗೊಂಡಿತು. ಇದರ ಸಂಪಾದಕ ದಿ. ಶಂಕರಸೆನ್‌ಗುಪ್ತ ಅಪಾರ ಶ್ರಮದಿಂದ 3-4 ದಶಕಗಳ ಕಾಲ ಈ ಪತ್ರಿಕೆಯನ್ನು ನಡೆಸಿಕೊಂಡು ಬಂದರು. ಇದಾದ ಮೇಲೆ Folklore Fellows of India ಸಂಸ್ಥೆಯ ಅಂಗ ಪತ್ರಿಕೆ 'Journal of Indian Folk lorstics' ಮೈಸೂರಿನಿಂದ ಪ್ರಕಟಗೊಂಡಿತು. ಜಾನಪದ ಸಂಶೋಧನೆ ಅಧ್ಯಯನಗಳ ದೃಷ್ಟಿಯಿಂದ ಇದೊಂದು ಮಹತ್ವದ ಪತ್ರಿಕೆ.

ಕನ್ನಡದಲ್ಲಿ ಜಾನಪದ ಸಂಬಂಧವಾದ ಪತ್ರಿಕೆಗಳು ಬೆಳಕು ಕಂಡದ್ದು ೧೯೬೮ ರ ಈಚೆಗೆ. ಈ ಮೊದಲು ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ ಮೊದಲಾದ ಪತ್ರಿಕೆಗಳು ಜಾನಪದಕ್ಕೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಈ ಕ್ಷೇತ್ರದ ಬೆಳವಣಿಗೆಗೆ ಸಹಾಯಕವಾದವು. ಕರ್ನಾಟಕ ಜಾನಪದ ಪರಿಷತ್ತು (ಮೈಸೂರು) ಈ ಸಂಸ್ಥೆ ಆರಂಭಿಸಿದ 'ಜಾನಪದ' ಎಂಬ ಶೀರ್ಷಿಕೆಯ ಪತ್ರಿಕೆ ತುಂಬ ಪ್ರೌಢರೀತಿಯಲ್ಲಿ ಪ್ರಕಟಗೊಳ್ಳತೊಡಗಿದಾಗ ಅನೇಕ ವಿದ್ವತ್‌ಪೂರ್ಣ ಲೇಖನಗಳು ಬೆಳಕು ಕಾಣತೊಡಗಿದವು. ಇದೊಂದು ತ್ರೈಮಾಸಿಕ ಪತ್ರಿಕೆ. ಇದರ ಹತ್ತು ಸಂಚಿಕೆಗಳು ಪ್ರಕಟಗೊಂಡು ನಾನಾ ಕಾರಣಗಳಿಂದಾಗಿ ಇದು ನಿಂತಿತು. ಕರ್ನಾಟಕ ಜಾನಪದ

ಟ್ರಸ್ಟ್(ಈಗ ಕರ್ನಾಟಕ ಜಾನಪದ ಪರಿಷತ್) 'ಜಾನಪದ ಜಗತ್ತು' ಎಂಬ ಶೀರ್ಷಿಕೆಯಲ್ಲಿ ಕಳೆದ ಒಂದುವರೆ ದಶಕದಿಂದ ಪ್ರಕಟಿಸುತ್ತಿರುವ ಪತ್ರಿಕೆ ಒಂದು ಉತ್ತಮ ಪ್ರಯತ್ನವಾಗಿದೆ. ಉಡುಪಿಯ ಪ್ರಾದೇಶಿಕ ಜನಪದ ಕಲೆಗಳ ಅಧ್ಯಯನ ಕೇಂದ್ರ ಇಂಗ್ಲಿಷಿನಲ್ಲಿ ಪ್ರಕಟಿಸುತ್ತಿರುವ 'Prasanga' ಪತ್ರಿಕೆ ಕೂಡ ಹಲವಾರು ವಿಷಯಗಳ ಹಿನ್ನೆಲೆಯಲ್ಲಿ ಗಮನಾರ್ಹವಾದುದಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ತನ್ನ ಅಂಗ ಪತ್ರಿಕೆಯಾಗಿ 'ಜಾನಪದ ಗಂಗೋತ್ರಿ' ತ್ರೈಮಾಸಿಕವನ್ನು ಪ್ರಕಟಿಸುತ್ತಾ ಬಂದಿದೆ. ನಮ್ಮ ಜಾನಪ ಪತ್ರಿಕೆಗಳ ಸಾಲಿನಲ್ಲಿ ಇದಕ್ಕೆ ಒಂದು ವಿಶೇಷ ಸ್ಥಾನವಿದೆ. ಜಾನಪದ ಸಂಶೋಧನೆ, ವಿಮರ್ಶೆ ಮೂಲಸಂಗ್ರಹ, ಅಧ್ಯಯನಗಳು ಮುಂತಾದ ನಾನಾ ರೀತಿಯ ಪ್ರಬಂಧಗಳನ್ನೊಳಗೊಂ ಈ ಜಾನಪದ ಗಂಗೋತ್ರಿಯ ಸಂಚಿಕೆಗಳು ಜಾನಪದ ವಿದ್ವಾಂಸರು ಸಂಗ್ರಹಿ ಇಡಬಹುದಾದ ಉತ್ತಮ ಗುಣ ಮಟ್ಟದ ಪತ್ರಿಕೆಯಾಗಿದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ತನ್ನ ಅನೇಕ ಮುಖ್ಯವಾದ ಕಾರ್ಯಚಟುವಟಿಕೆಗಳ ನಡುವೆ ಇಂಥ ಒಂದು ಸಂಶೋಧನ ಪತ್ರಿಕೆಯ ಪ್ರಕಟಣೆಗೂ ಆದ್ಯ ಗಮನ ನೀಡಿದೆ. ಈ ಪತ್ರಿಕೆಯ ಸಂಪಾದಕರಾಗಿ ಶ್ರೀ ಹ. ಕ. ರಾಜೇಗೌಡರು ತುಂಬ ಶ್ರದ್ಧೆ. ಆಸಕ್ತಿಗಳಿಂದ ಪ್ರತಿ ಸಂಚಿಕೆಯ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಲ್ಲಿ ತುಂಬ ಆಸಕ್ತಿ ವಹಿಸಿದ್ದಾರೆ. ಆ ಸಾಲಿಗೆ ಈ ಸಂಚಿಕೆಯೂ ಸೇರುತ್ತದೆ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಜೀ. ಶಂ. ಪರಮಶಿವಯ್ಯ
ಪ್ರಧಾನ ಸಂಪಾದಕ ಮತ್ತು ಅಧ್ಯಕ್ಷ

* * * * *

# ಸಂಪಾದಕೀಯ

ಹೊಸದರ ಆಕರ್ಷಣೆಯಲ್ಲಿ ಅದರ ಪ್ರಭಾವದಲ್ಲಿ ಹಳೆಯದನ್ನು ಮರೆಯುವುದು ಮನುಷ್ಯನ ಸ್ವಭಾವ. ಕೆಲವೊಮ್ಮೆ ಅವರದೇ ಆದ ಜನರೊ ಹಿಂಬಾಲಕರೋ ಇಲ್ಲದಿದ್ದಾಗಲೂ ಇದಾಗುತ್ತದೆ. ಸಾಹಿತ್ಯ ಮತ್ತು ಕಲೆಯ ಕ್ಷೇತ್ರದಲ್ಲಿ ಇದು ಸಾಮಾನ್ಯ. ಶಿಷ್ಟರಾದರೂ ತಮ್ಮ ಕೃತಿಗಳಿಗೆ ಹೆಸರನ್ನಾದರೂ ಹಾಕಿರುತ್ತಾರೆ. ಆದರೆ ಜನಪದ ಕಲಾವಿದರು ಕವಿಗಳು ತಮ್ಮ ರಚನೆಗಳಿಗೆ ಹೆಸರು ಹಾಕಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಈ ಕವಿ ಕಲಾವಿದರು ಬಹುತೇಕ ಅನಕ್ಷರಸ್ಥರಾದುದರಿಂದ ಹೀಗಾಗುತ್ತದೆ. ಕೆಲವರು ತಮ್ಮ ಗೀತೆ, ಕತೆ, ಲಾವಣಿಗಳಲ್ಲಿ ಹೆಸರು ಸೇರಿಸುತ್ತಾರೆ. ಈ ಸಾಹಿತ್ಯ ಕಂಠಸ್ತವಾಗಿ ಮುಂದುವರಿಯುವುದರಿಂದ ಮುಂದೆ ಅದನ್ನು ಕಲಿತವರು ಮೂಲ ಕವಿ ಕಲಾವಿದರ ಹೆಸರನ್ನು ಬಿಟ್ಟು ತಮ್ಮ ಹೆಸರನ್ನು ಅದರಲ್ಲಿ ಜೋಡಿಸುವುದೂ ಉಂಟು. ಹೀಗಾಗಿ ಅನೇಕ ವೇಳೆ ಮೂಲ ರಚನೆಕಾರನ ಹೆಸರೇ ಅಳಿಸಿ ಹೋಗಿರುವುದೇ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು. ಈ ದೃಷ್ಟಿಯಿಂದ ಇಂತಹ ಮೂಲ ರಚನಕಾರರ, ಹೆಸರನ್ನು ಪತ್ತೆ ಹಚ್ಚುವುದು ಅದನ್ನು ಉಳಿಸುವುದು ಜಾನಪದ ಕ್ಷೇತ್ರದ ಸಂಶೋಧಕರ ಆದ್ಯ ಕರ್ತವ್ಯವಾಗಿದೆ.

ವಿಚಾರ ಸಂಕಿರಣಗಳು ಈ ದಿಸೆಯಲ್ಲಿ ಪ್ರಮುಖವಾದ ಪಾತ್ರವಹಿಸುತ್ತವೆ. ಮರೆತು ಹೋದ ಸಾಹಿತಿ ಕಲಾವಿದರನ್ನು ಜನರಿಗೆ ಮರು ಪರಿಚಯ ಮಾಡಿಸುವಲ್ಲಿ ಇವು ಬಹು ಮುಖ್ಯ. ಯುವಜನರಿಗೆ ನಮ್ಮ ಪ್ರಾಚೀನ ಪರಂಪರೆಯ ಅರಿವನ್ನು ವಿಚಾರ ಸಂಕಿರಣಗಳು ಮೂಡಿಸುತ್ತವೆ. ಇಂದಿನ ಯುವಕರಿಗೆ ನಮ್ಮ ಶಿಷ್ಟ ಮತ್ತು ಜಾನಪದ ಸಾಹಿತ್ಯ ಮತ್ತು ಕಲೆಗಳ ಪರಿಚಯವೇ ಇಲ್ಲ. ಕಾರಣ ನಮ್ಮ ಶಿಕ್ಷಣ ಪದ್ಧತಿ ಪಾಶ್ಚಿಮಾತ್ಯ ಶಿಕ್ಷಣದ ಅನುಕರಣೆಯಾಗಿಯೇ ಸ್ವಾತಂತ್ರ್ಯ ಬಂದ ನಂತರವೂ ಮುಂದುವರೆದಿರುವುದು. ಇಂತಹ ಅನೇಕ ತಪ್ಪುಗಳನ್ನು ವಿಚಾರ ಸಂಕಿರಣಗಳು ತಿದ್ದುತ್ತವೆ. ನಮ್ಮ ಯುವ ಜನರಿಗೆ ಅವರ ಸಾಹಿತ್ಯ, ಸಂಸ್ಕೃತಿಗಳ ಪರಂಪರೆಯ ಪರಿಚಯವೂ ಆಗುತ್ತದೆ.

ಒಂದು ದೇಶದ ಸಾಹಿತಿ ಕಲಾವಿದರ ಕಡೆಯ ಪಕ್ಷ ಹಿರಿಯರಾದವರ ಬಗ್ಗೆಯಾದರೂ ತಿಳಿದುಕೊಳ್ಳುವುದು, ಅವರ ಬಗ್ಗೆ ಹೆಮ್ಮೆ ಪಡುವುದು, ವಾಸಿಸುವ ಪ್ರತಿಯೊಬ್ಬರ ಕರ್ತವ್ಯ. ಈ ಹಿನ್ನೆಲೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಈ ಕಾಲಾವಧಿಯಲ್ಲಿ ಅನೇಕ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಜನರಿಗೆ ಈ ಕ್ಷೇತ್ರದ ಬಗ್ಗೆ ಅರಿವು ಮೂಡಿಸಿದೆಯೆಂಬುದು ಹೆಮ್ಮೆಯ ಸಂಗತಿ. ಈ ಯೋಜನೆ ಮತ್ತು ಮುಂದುವರಿಯುವುದು ಜಾನಪದ ಕ್ಷೇತ್ರದ ಬೆಳವಣಿಗೆಯ ಸಂಕೇತ.

ಹ. ಕ. ರಾಜೇಗೌಡ

## ಈ ಸಂಚಿಕೆಯಲ್ಲಿ

ಪ್ರಧಾನ ಸಂಪಾದಕರ ಮಾತು iii

ಸಂಪಾದಕೀಯ v

ಹಾಲಕ್ಕಿ ಒಕ್ಕಲಿಗರು ೧
-ಜಿ. ಎಸ್. ಭಟ್ಟ

ಗೊಂಡರು ೧೪
-ಎನ್ ಹುಚ್ಚಪ್ಪ ಮಾಸ್ತರ್

ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳು ೩೮
-ಶ್ರೀ ಅಭಯಕುಮಾರ್

ಡಾ. ಗದ್ದಿಗಿಮಠರ ಜಾನಪದ ಸಂಗ್ರಹ ಮತ್ತು ಸಂಶೋಧನಾ ವಿಧಾನಗಳು ೪೭
-ಡಾ. ಮೃತ್ಯುಂಜಯ ಹೊರಕೇರಿ

ಗೊರೂರರು ಮತ್ತು ಜಾನಪದ ಪರಿಸರ ೫೭
-ಸಿ. ಜಿ. ವೆಂಕಟಯ್ಯ

ಅಡವಿಯಲ್ಲಿ ಬಿಡದಿ ಮಾಡಿರುವ ಗೌಳಿಗರು ೭೦
-ಪ್ರಮೋದ ಹೆಗಡೆ

# ಹಾಲಕ್ಕಿ ಒಕ್ಕಲಿಗರು

ಜಿ. ಎಸ್. ಭಟ್ಟ

ನದಿ ಬೆಟ್ಟ ಗುಡ್ಡಗಳ ಮನೋಹರ ಶ್ರೇಣಿ, ಭೋರ್ಗರೆವ ಕಡಲು. ಪ್ರಕೃತಿಯ ಸುಂದರ ಪರಿಸರದಲ್ಲಿ ಬದುಕುತ್ತಿರುವ ವಿಶಿಷ್ಟ ಬುಡಕಟ್ಟು ಸಮುದಾಯ ಹಾಲಕ್ಕಿ ಒಕ್ಕಲಿಗರದು. 'ಪರುಶುರಾಮನ ಸೃಷ್ಟಿ' ಎನ್ನಲಾದ ಉತ್ತರ ಕನ್ನಡ ಜಿಲ್ಲೆಯ ಜನರ ಬದುಕು ಹೋರಾಟಮಯದ್ದಷ್ಟೇ ಅಲ್ಲ ವರ್ಣರಂಜಿತವಾದದ್ದೂ ಕೂಡ. ಈ ಜಿಲ್ಲೆಯಲ್ಲಿರುವಷ್ಟು ವೈವಿಧ್ಯಮಯ ಜನ ಸಮೂಹಗಳು ಕರ್ನಾಟಕದ ಬೇರಾವ ಜಿಲ್ಲೆಯಲ್ಲೂ ಇಲ್ಲ. ಅವರೊಂದಿಗೆ ಇತರ ಜನವರ್ಗಗಳೂ ಜನಪದ ಸಾಹಿತ್ಯ ಸಂಸ್ಕೃತಿಗೆ ನೀಡಿರುವ ಕೊಡುಗೆ ಅಪಾರ.

ಕಾರವಾರದ ಕಾಳೀ ನದಿ ತೀರದಿಂದ ಶರಾವತಿ ನದಿ ತೀರದವರೆಗೆ ವಾಸಿಸುತ್ತಿರುವ "ಹಾಲಕ್ಕಿ ಒಕ್ಕಲಿಗರು" ಕರಾವಳಿ ಪ್ರದೇಶಕ್ಕೆ ಮೊದಲಿಗೆ ಬಂದು ನೆಲೆಸಿದರು ಎನ್ನಲಾಗಿದೆ. ತಿರುಪತಿ ತಿಮ್ಮಪ್ಪ ಇವರ ಕುಲದೈವ. ಆದ್ದರಿಂದ ತಿರುಪತಿ ಕಡೆಯಿಂದ ಇವರು ಇಲ್ಲಿಗೆ ಬಂದಿರಬಹುದೆಂಬುದೂ ಒಂದು ಊಹೆ. ಹಾಲಕ್ಕಿ ಒಕ್ಕಲಿಗರ ಜನಪದ ಗೀತೆಗಳಲ್ಲಿ ಮೂಡಣ ಸಮುದ್ರವನ್ನು ಪ್ರಸ್ತಾಪಿಸಲಾಗಿದೆ. ಆದ್ದರಿಂದ ಇವರು ತಿರುಪತಿ ಮೂಲದವರೇ ಇರಬಹುದೆಂಬುದು ಸುಪ್ರಸಿದ್ಧ ವಿದ್ವಾಂಸ, ಸಂಶೋಧಕ, ಡಾ. ಎಲ್. ಜಿ. ಭಟ್ಟ ಅವರ ಅಭಿಪ್ರಾಯ. (ಡಾ. ಎಲ್. ಜಿ. ಭಟ್ಟ: ಹಾಲಕ್ಕಿ ಜನಪದ ಜೀವನ ಸಾಹಿತ್ಯ ಸಂಶೋಧನ ಪ್ರಬಂಧ ) ಇವರು ಹಾಲಿನಂತಹ ಅಕ್ಕಿ ಬೆಳೆಯುವುದರಿಂದ "ಹಾಲಕ್ಕಿ" ಎಂಬ ಹೆಸರು ಬಂದಿರಬಹುದು. ಇವರ ಪ್ರಧಾನ ಕಸುಬು ವ್ಯವಸಾಯ. ಅದರೊಂದಿಗೆ ಪಶುಪಾಲನೆಯನ್ನು ಕೈಗೊಂಡರು. ಕೃಷಿ ಮತ್ತು ಹೈನುಗಾರಿಕೆ ಇವೆರಡರಲ್ಲೂ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರಿಂದ ಹಾಲಕ್ಕಿ ಎಂಬ ಹೆಸರು ಬಂದಿರಬಹುದು. ಹವ್ಯಕರ ವಿವಾಹಗಳಲ್ಲಿ ಮದುಮಗ ವಧುವಿನ ಮನೆಗೆ ಹೊರಟಾಗ ದಿಬ್ಬಣದ ಮುಂದೆ ಹಾಲಕ್ಕಿಗಳು ಇದ್ದು ದಾರಿಯುದ್ದಕ್ಕೂ ಅಕ್ಕಿ ಚೆಲ್ಲುತ್ತಿದ್ದರು. ಇದರಿಂದ ಅವರಿಗೆ ಹಾಲಕ್ಕಿ ಎಂಬ ಹೆಸರು ಬಂತೆಂದು ಹೇಳಲಾಗಿದೆ.

ಹಾಲಕ್ಕಿ ಒಕ್ಕಲಿಗರ ಹುಟ್ಟಿನ ಬಗ್ಗೆ ದಂತ ಕಥೆಯೊಂದಿದೆ. ಶಿವ ಹಿಂದೆ ಗದ್ದೆ ಊಳುತ್ತಿದ್ದನಂತೆ. ಆತನಿಗೆ ನಿತ್ಯ ಊಟ ಒಯ್ಯುವ ಕೆಲಸ ಪಾರ್ವತಿಯದು. ಒಂದು ದಿನ ಊಟ ತೆಗೆದುಕೊಂಡು ಹೋಗುವಾಗ ಪಾರ್ವತಿ ಎಡವಿದಳು. ಅವಳು ಶಿವನಿಗೆ ತಂದಿದ್ದ ಹಾಲು ಅನ್ನ ಚೆಲ್ಲಿ ಹೋಯಿತು. ಮಣ್ಣು ಪಾಲಾದ ಈ ಹಾಲು ಅನ್ನ ಸೇರಿಸಿ ಪಾರ್ವತಿ ಎರಡು ಗೊಂಬೆಗಳನ್ನು ಮಾಡಿಟ್ಟು ಮನೆಗೆ ತೆರಳಿದಳು. ಪಾರ್ವತಿ ಊಟ ತರುವುದು ವಿಳಂಬವಾದಾಗ ಶಿವ ಅವಳನ್ನು ಅರಸಿ ಹೊರಟ- ಮಾರ್ಗಮಧ್ಯದಲ್ಲಿ ಪಾರ್ವತಿ ಮಾಡಿದ ಗೊಂಬೆಗಳು ಗೋಚರಿಸಿದವು. ಶಿವ ಅವನ್ನು ಸ್ಪರ್ಶಿಸಿದಾಗ ಅವಕ್ಕೆ ಜೀವ ಬಂತು. ಪಾರ್ವತಿ ಹಿಂದಿರುಗಿದ್ದೇಕೆಂಬುದು ಗೊಂಬೆಗಳ ಮೂಲಕ ಶಿವನಿಗೆ ತಿಳಿಯಿತು. ಶಿವ ತನಗೆ ಜೀವ

ನೀಡಿದ. ತಮ್ಮ ಬದುಕಿಗಾಗಿ ತಾವೇನು ಮಾಡಬೇಕೆಂದು ಸಜೀವ ಗೊಂಬೆಗಳು ಕೇಳಿದವು. ಶಿವ ತನ್ನ ಕೆಲಸ ವ್ಯವಸಾಯವನ್ನೇ ಮುಂದುವರೆಸುವಂತೆ ಅವಕ್ಕೆ ತಿಳಿಸಿದ. ಅಂದಿನಿಂದ ಹಾಲಕ್ಕಿಗಳು ವ್ಯವಸಾಯವನ್ನೇ ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡರು. ಹಾಲು+ಅಕ್ಕಿಗಳ ಮಿಶ್ರಣದಿಂದ ಜನಿಸಿದ್ದರಿಂದ ಇವರಿಗೆ ಹಾಲಕ್ಕಿ ಎಂದು ಹೆಸರು ಬಂತೆಂದು ಹೇಳಲಾಗಿದೆ.

ಹಾಲಕ್ಕಿ ಒಕ್ಕಲಿಗರದು ಅಂಕೋಲ, ಕಡವಾಡ, ಮಸಿಕೋಟೆ, ಹರಿಬ್ಬೆ, ಕುಂಬಾರಗದ್ದೆ ಗೋಕರ್ಣ ಚಂದಾವರ ಎಂಬ ಏಳು ಸೀಮೆಗಳಿವೆ. "ಕೊಪ್ಪ" ಎಂಬುದು ಇವರ ವಾಸ ಸ್ಥಳ. ಇವರಲ್ಲಿ ಬಳಿಗಳಿವೆ. ದೇವನ, ಶಿದಿನ, ಮುಸಗಿ, ಬದಕನ, ನೇಗಿ ಕೊಡಕನ, ಕೇಂದಣೆ, ಮಂಜಾಳ-ಇತ್ಯಾದಿ ಹಾಲಕ್ಕಿ ಒಕ್ಕಲಿಗರು ಹೆಚ್ಚು ಎತ್ತರವೂ ಅಲ್ಲದೆ ಹೆಚ್ಚು ಕುಳ್ಳರೂ ಅಲ್ಲದ ನಿಲವು. ಇವರ ಬಣ್ಣ ಸಾಮಾನ್ಯವಾಗಿ ಕಪ್ಪು.

### ಉಡುಗೆ-ತೊಡುಗೆ

ಗಂಡಸರು ಕಚ್ಚೆ, ರುಮಾಲು, ಹೆಗಲಿಗೊಂದು ಕಂಬಳಿ ಧರಿಸುತ್ತಾರೆ. ಹಾಲಕ್ಕಿ ಹೆಂಗಸರು ಕುಪ್ಪಸ ತೊಡುವುದಿಲ್ಲ. ಸೊಂಟಕ್ಕೆ ಸೀರೆ ಸುತ್ತಿ ಎದೆ ಮುಚ್ಚುವಂತೆ ಸೆರೆಗೆಳೆದುಕೊಂಡು ಕೊರಳಿಗೆ ಗಂಟು ಹಾಕಿಕೊಳ್ಳುವರು. ಹೆಂಗಸರ ಕೊರಳ ತುಂಬ ಕರಿಮಣಿ ಮತ್ತು ಇತರ ಮಣಿಸರಗಳು ಕಂಡುಬರುತ್ತವೆ. ಕತ್ತು ಬಾಗುವಷ್ಟು ಕರಿಮಣಿ ಹಾಕುತ್ತಾರೆ. ಗಾಜು, ಬೆಳ್ಳಿಯ ಬಳೆಗಳು, ತೋಳ ಕಡಗ, ಮೂಗುತಿ, ಕುಡುಕು-ಇತರ ಆಭರಣಗಳು, ವಿವಾಹಿತ ಮಹಿಳೆಯರು ಕೊರಳಿಗೆ ಬಂದಿ ಧರಿಸುವರು. ಸುಂದರವಾಗಿ ಮುಡಿಕಟ್ಟಿರುತ್ತಾರೆ. ಹಾಲಕ್ಕಿ ಹೆಂಗಸರಿಗೆ ಹೂವೆಂದರೆ ಪಂಚಪ್ರಾಣ. ನಾನಾ ಬಗೆಯ ಹೂವುಗಳನ್ನು ಮುಡಿದುಕೊಳ್ಳುತ್ತಾರೆ.

### ಆಹಾರ

ಇವರು ಮಾಂಸಾಹಾರಿಗಳು ಆದರೆ ಗೋಮಾಂಸವನ್ನು ತಮ್ಮ ಬಳಿಗೆ ಸಂಬಂಧಿಸಿದ ಪ್ರಾಣಿಗಳ(ಉದಾ:ಮಿಕ) ಮಾಂಸವನ್ನು ತಿನ್ನುವುದಿಲ್ಲ. ಅಕ್ಕಿ, ರಾಗಿ, ಮೀನು, ಇವರ ಆಹಾರ. ಖಾರದ ಬಳಕೆ ಹೆಚ್ಚು. ಮದ್ಯಪಾನವನ್ನು ಇವರು ಮಾಡುವುದಿಲ್ಲ.

### ಸಂಸ್ಕಾರ-ಸಂಪ್ರದಾಯಗಳು

ಜನನ ಮತ್ತು ನಾಮಕರಣಗಳನ್ನು ಆಚರಿಸುವರು. ಗರ್ಭಿಣಿಗೆ ಪ್ರಸವ ವೇದನೆ ಆರಂಭವಾದಾಗ ತಾಳೆಗರಿಯ ಚಾಪೆಯಿಂದ ಪಡಸಾಲೆಯಲ್ಲಿ ಒಂದು ಕೋಣೆ ಮಾಡುತ್ತಾರೆ. ಭೂತ ಪ್ರೇತಗಳ ಅಸ್ತಿತ್ವದಲ್ಲಿ ನಂಬಿಕೆ ಇರುವ ಇವರು ಪ್ರಸವ ವಿಳಂಬವಾದರೆ ಅದಕ್ಕೆ ಕಾರಣ ಭೂತದ ಪೀಡೆ ಎಂದು ಭಾವಿಸುವರು. "ಕುಮಾರ ಪೈಕ" (ಮಂತ್ರವಾದಿ) ಕರೆಸಿ ಯಂತ್ರ ಕಟ್ಟಿಸುವರು ಜನನವಾದಾಗ ಮೂರುದಿನಗಳ ಸೂತಕ ಆಚರಿಸುವರು. ಮೂರುದಿನಗಳ ಬಳಿಕ ಇದೇ ಮನೆಯನ್ನು ಸಾರಿಸಿ ಶುದ್ಧಗೊಳಿಸಿ ಧೂಪ ಹಾಕುತ್ತಾರೆ. ತಾಯಿ ಮಗುವಿಗೆ ಹೊಸ ಬಟ್ಟೆ ತೊಡಿಸುವರು. ೧೨ ನೆಯ ದಿನ ಬಾಣಂತಿ

ಬಾವಿಗೆ ಹೋಗಿ ಮೂರು ಕೊಡ ನೀರು ಸೇದಿ ಆ ನೀರನ್ನು ತೆಂಗಿನ ಗಿಡಕ್ಕೆ ಹಾಕುತ್ತಾಳೆ. ನಾಲ್ಕನೆಯ ಕೊಡದ ನೀರನ್ನು ಮನೆಯ ಒಳಗೆ ತಂದು, ಅಡುಗೆಗೆ ಬಳಸಲಾಗುತ್ತದೆ. ನಾಮಕರಣದ ದಿನ ಊರ ಗೌಡ ಬುದ್ಧವಂತಿ- ಅವರ ಪತ್ನಿಯರು ಮನೆಗೆ ಬರುತ್ತಾರೆ. ರಾತ್ರಿ ಊಟವಾದ ಬಳಿಕ ಮನೆಯ ಹಿರಿಯ ಯಜಮಾನ ಅಥವಾ ಯಜಮಾನತಿ ಮಗುವಿಗೆ ನಾಮಕರಣ ಮಾಡುತ್ತಾರೆ. ಗಂಡು ಮಗುವಿಗೆ ಬೀರಾ, ನಾಗು, ತಿಮ್ಮು, ಶುಕ್ರ, ಇಡ್ಕು ಗಣಪ, ಶಂಭು, ಹುಲಿಯ ಇತ್ಯಾದಿ ಹೆಸರಿಡುತ್ತಾರೆ. ಹೆಣ್ಣು ಮಕ್ಕಳಿಗೆ ತುಳಸಿ, ತಿಮ್ಮಿ, ಪುಟ್ಟಿ, ನಾಗಿ, ಮಾರಿ, ಇಡ್ಕಿ, ಬೊಮ್ಮಿ, ಗಂಗೆ, ಅಮ್ಮ-ಮೊದಲಾದ ಹೆಸರುಗಳನ್ನಿಡುವುದು ವಾಡಿಕೆ. ಗಂಡಸರ ಹೆಸರಿನ ಹಿಂದೆ ಗೌಡ ಎಂಬ ಉಪ ಪದದ ಬಳಕೆಯೂ ಉಂಟು. ಮಗುವಿನ ನಾಮಕರಣ ಸಮಾರಂಭಕ್ಕೆ ಆಗಮಿಸಿದ ಬಂಧು-ಬಾಂಧವರೆಲ್ಲ, ಮಗುವಿನ ಹೆಸರು ಹೇಳಿ ತಮ್ಮ ಕಾಣಿಕೆಗಳನ್ನು ತೊಟ್ಟಿಲಿನಲ್ಲಿಟ್ಟು ತೆರಳುವುದು ವಾಡಿಕೆ. ಗಂಡು ಮಗುವಿಗೆ ವರ್ಷ ತುಂಬಿದಾಗ ಮಾಡುವ ಶಾಸ್ತ್ರ "ಚೋಳಂಗಿ", ಅಕ್ಕಪಕ್ಕದ ಮಕ್ಕಳನ್ನೆಲ್ಲ ಕರೆದು ಈ ಸಂದರ್ಭದಲ್ಲಿ ಊಟ ಹಾಕುವರು. ಚೋಳಂಗಿ ಶಾಸ್ತ್ರದ ಬಳಿಕ ವಿವಾಹದವರೆಗೂ ಗಂಡು ಮಕ್ಕಳಿಗೆ ಯಾವ ಸಮಾರಂಭವೂ ಇರುವುದಿಲ್ಲ.

ಹೆಣ್ಣು ಮಕ್ಕಳಿಗೆ ೬ ಅಥವಾ ೭ ತುಂಬಿದಾಗ ಮಾಡುವ ಶಾಸ್ತ್ರ "ಬಟ್ಟು ಕುಟ್ಟುವುದು" ಕುಂಕುಮ ಹಚ್ಚುವ ಜಾಗವನ್ನು ಮುಳ್ಳಿನಿಂದ ಚುಚ್ಚಿ ಬಳಿಕ ಕಾಡಿಗೆ ಸವರುತ್ತಾರೆ ಮಗುವನ್ನು ದೇವರ ಮುಂದೆ ಕೂಡಿಸಿ ಅವಳಿಗೆ ತಲೆ ಬಾಚಿ ಹೂ ಮುಡಿಸುತ್ತಾರೆ. ಹೆಂಗಸರೆಲ್ಲ ತಮ್ಮ ಕೊರಳಿನಿಂದ ಒಂದೊಂದು ಕರಿಮಣಿ ಸರವನ್ನು ಅವಳ ಕೊರಳಿಗೆ ಹಾಕುತ್ತಾರೆ ಇದಕ್ಕೆ "ಗೇಟಿ" ಕಟ್ಟುವ ಸಂಪ್ರದಾಯವೆಂದು ಹೆಸರು. ಈ ಸಮಾರಂಭದಲ್ಲಿ ಊರಿನ ಮುತ್ತೈದೆಯರೂ ಅಧಿಕಾರಿಗಳ ಪತ್ನಿಯರೂ ಪಾಲ್ಗೊಳ್ಳುವರು ಸಮಾರಂಭದ ಬಳಿಕ ಹುಡುಗಿ ಕೊಪ್ಪದ ಎಲ್ಲ ಮನೆಗಳಿಗೂ ತೆರಳಿ ಹಿರಿಯರಿಗೆ ಹಾಗೂ ತುಳಸಿಗೆ ನಮಸ್ಕರಿಸಿ ಬರುತ್ತಾಳೆ ಅಂದಿನಿಂದ ಆ ಹೆಣ್ಣಿನ ರಕ್ಷಣೆಯ ಹೊಣೆ ಕೊಪ್ಪದವರದಾಗಿರುತ್ತದೆ.

## ಮದುವೆ

ಹಿಂದೆ ಹಾಲಕ್ಕಿ ಒಕ್ಕಲಿಗರಲ್ಲಿ ಬಾಲ್ಯವಿವಾಹವಿತ್ತು. ಇಂದು ಅದು ಕಡಿಮೆಯಾಗಿದೆ. ಹವ್ಯಕ ಬ್ರಾಹ್ಮಣರಲ್ಲಿಗೆ ತೆರಳಿ ವಿವಾಹದ ಮುಹೂರ್ತವನ್ನು ನಿರ್ಧರಿಸುವರು. ಆದರೆ ವಿವಾಹದಲ್ಲಿ ಆಚರಿಸುವುದು ತಮ್ಮದೇ ಆದ ಸಂಪ್ರದಾಯವನ್ನು ಮುಹೂರ್ತ ಕೇಳಲು ಹೋಗುವುದು ಸಾಮಾನ್ಯವಾಗಿ ವಿವಾಹಕ್ಕೆ ಎರಡು ದಿವಸ ಇರುವಾಗ ಪುರೋಹಿತರಿಗೆ ಎಲೆ-ಅಡಿಕೆ ಕಾಯಿ ದಕ್ಷಿಣೆಗಳನ್ನು ನೀಡುತ್ತಾರೆ. ಹಾಲಕ್ಕಿಗಳಿಗೆ ಪ್ರಶಸ್ತವಾದ್ದು ಗೋಧೂಳಿ ಮುಹೂರ್ತ. ವಿವಾಹಗಳು ನಡೆಯುವುದು ಆರ್ದ್ರಾ ನಕ್ಷತ್ರದಲ್ಲಿ.

ಇವರಲ್ಲಿ "ಹೆಣ್ಣಿಗೆ ಹೆಣ್ಣು" ಪದ್ಧತಿ ಇದೆ. ಹಾಲಕ್ಕಿಗಳಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆ ಒಂದು ಕುಟುಂಬಕ್ಕೆ ಗಂಡಿಗೆ ಹೆಣ್ಣು ಕೊಡುವಾಗ ಆ ಕುಟುಂಬದ ಹೆಣ್ಣೊಂದನ್ನು ತಮ್ಮ ಮನೆಗೆ ತುಂಬಿಸಿಕೊಳ್ಳುವುದೇ "ಹೆಣ್ಣಿಗೆ ಹೆಣ್ಣು" ಪದ್ಧತಿ. ಒಂದು ಹೆಣ್ಣು ಹೊರಕ್ಕೆ ಹೋದರೆ, ಇನ್ನೊಂದು ಹೆಣ್ಣು ಮನೆಗೆ ಬರಬೇಕು. ಒಂದೇ ಬಳಿಗೆ ಸಂಬಂಧಿಸಿದಂತೆ ಇವರು

ನೆಂಟಸ್ತನ ಬೆಳೆಸುವುದಿಲ್ಲ. ವಧು ದಕ್ಷಿಣೆ ಪದ್ಧತಿ ಇದೆ. ಅದು ಈಗಲೂ ಮುಂದುವರೆದಿದೆ. ಹೆಣ್ಣನ್ನು ಕೇಳಲು ಬರುವವರು ಗಂಡಿನ ಮನೆಯವರೇ ಆಗಿದ್ದಾರೆ. ಒಮ್ಮೊಮ್ಮೆ ಊರ ಗೌಡ, ಬುದವಂತ, ಮುಂದಾಗಿ ವಿವಾಹದ ಏರ್ಪಾಡು ಮಾಡಬಹುದು. ಎರಡು ಊರುಗಳ ಮಧ್ಯೆ ಏರ್ಪಡುವ ಸಂಬಂಧದಲ್ಲಿ ಅಲ್ಲಿಯ ಅಧಿಕಾರಿಗಳದೇ ಪ್ರಮುಖ ಪಾತ್ರ.

ಊರಗೌಡ, ಬುದವಂತ, ಕೋಲಕಾರ ಹೀಗೆ ಸ್ಥಳೀಯ ಅಧಿಕಾರಿಗಳ ಎದುರು ವಿವಾಹದ ಮಾತುಕತೆ ನಡೆಯುವುದು. ವಿವಾಹ ನಿಶ್ಚಿತವಾದರೆ ಅಲ್ಲಿ ಸೇರಿದವವರೆಲ್ಲ ಕಾಯಿ ಬೆಲ್ಲ ತಿನ್ನುತ್ತಾರೆ ಕಾಯಿ ಬೆಲ್ಲ ತಿಂದಿತೆಂದರೆ ವಿವಾಹ ಖಚಿತವಾದಂತೆ. ಕಾಯಿ ಬೆಲ್ಲ ತಿಂದ ಬಳಿಕ ವಿವಾಹ ಮುರಿವ ಸಂದರ್ಭಗಳಿಲ್ಲ.

ವಿವಾಹ ನಿಶ್ಚಯವಾದ ಬಳಿಕ ಊರಗೌಡನ ಮುಂದಾಳತ್ವದಲ್ಲಿ ಜವಳಿ ತರಲು ಹೋಗುತ್ತಾರೆ. ಜವಳಿ ಖರೀದಿಗೆ ಹೋಗುವವರು ಗಂಡಸರು. ಪ್ರತಿ ಮನೆಯಿಂದಲೂ ಒಬ್ಬೊಬ್ಬ ಗಂಡಸು ಜವಳಿ ತರಲು ಬರಲೇಬೇಕೆಂಬುದು ಸಂಪ್ರದಾಯ. ಬಾಸಿಂಗ ತರುವ ಜವಾಬ್ದಾರಿ ಬುದವಂತನದು. ವಿವಾಹಕ್ಕೆ ಊರಿನ ಎಲ್ಲರ ಮನೆಗೂ ತೆರಳಿ ತೆಂಗಿನ ಕಾಯಿ ಇಟ್ಟು ಕರೆದು ಬರಬೇಕು. ತುಳಸಿಗೂ ಹಿರಿಯರಿಗೂ ನಮಸ್ಕರಿಸಿಬೇಕಾಗುತ್ತದೆ. ವಿವಾಹದ ದಿನ ಬೆಳಗಿ ನಿಂದಲೇ ಉತ್ಸಾಹ-ಸಡಗರಗಳಿರುತ್ತವೆ. ಹೆಂಗಸರು ಬೆಳಗಿನಿಂದಲೇ ಹಾಡಲು ಪ್ರಾರಂಭಿಸಿರುತ್ತಾರೆ. ಬೆಳಿಗ್ಗೆ ಮಧುಮಗನ ಕೂದಲು ಕತ್ತರಿಸುವ ಶಾಸ್ತ್ರ ''ಪನ್ನೆ'' ಊರಿನ ಕ್ಷೌರಿಕನಿಗೆ ಬಾಳೆ ಎಲೆಯಲ್ಲಿ ಅಕ್ಕಿ ತೆಂಗಿನಕಾಯಿಗಳನ್ನಿಡುತ್ತಾರೆ. ಕ್ಷೌರಕ್ಕೆ ಮಧುಮಗನೊಂದಿಗೆ ವಿವಾಹಿತನೊಬ್ಬನೂ ಕುಳಿತಿರುತ್ತಾನೆ ಈತನಿಗೆ ''ಪಟ್ಗೇಪೋರ'' ಎಂಬ ಹೆಸರು. ಮಧುಮಗನ ಕೂದಲು ಕತ್ತರಿಸಿದ ಬಳಿಕ ಪಟ್ಗೇಪೋರನ ಕೂದಲು ಕತ್ತರಿಸಲಾಗುತ್ತದೆ. ಅನಂತರ ಕ್ಷೌರಿಕನಿಗೆ ಉಡುಗೊರೆ ನೀಡಲಾಗುವುದು. ವರನಿಗೆ ಅಭ್ಯಂಜನ ಸ್ನಾನದ ಏರ್ಪಡಾಗಿರುತ್ತದೆ.

ವರನಿಗೆ ಬಾಸಿಂಗ ಕಟ್ಟುವವನು ಊರಗೌಡ. ಬಳಿಕ ಬಂಧು ಬಾಂಧವರೊಂದಿಗೆ ದಿಬ್ಬಣ ವಧುವಿನ ಮನೆಗೆ ತೆರಳುವುದು. ಮದುಮಗನ ಸಹೋದರಿ ಮುಂದೆ ಬಿತ್ತರಿ ಹಿಡಿಯುವಳು. ಒಂದು ತಟ್ಟೆಯಲ್ಲಿ ಅಕ್ಕಿ ಅದರ ಮೇಲೆ ನೀರು ತುಂಬಿದ ತಂಬಿಗೆ, ಮೇಲೆ ತೆಂಗಿನ ಕಾಯಿ ಹಾಗೂ ಕನ್ನಡಿ ಬಿತ್ತರಿ ಸಾಮಾನುಗಳು. ಬಿತ್ತರಿ ಹಿಡಿದವಳಿಗೆ ''ತಳಿ ಅತ್ತಿಗೆ'' ಎಂಬ ಹೆಸರಿದೆ. ಇವಳ ಪತಿ-ಚಂಚೀಭಾವ. ಎಲೆ-ಅಡಿಕೆ-ತಂಬಾಕು ತುಂಬಿದ ಚೀಲ ಇವನಲ್ಲಿರುತ್ತದೆ. ಜೊತೆಗೆ ಕಾಣಿಕೆ ಪೆಟ್ಟಿಗೆಯೂ ಇರುವುದು. ಇದರಲ್ಲಿ ಮದುಮಗಳಿಗೂ ಅವಳ ತಾಯಿಗೂ ನೀಡುವ ಉಡುಗೊರೆ ಆಭರಣಗಳಿರುವುದು. ದಾರಿಯುದ್ದಕ್ಕೂ ಹೆಣ್ಣು ಮಕ್ಕಳು ಹಾಡುತ್ತ ತೆರಳುತ್ತಾರೆ.

**ಹೆಸ್ರೂಟ**

ಹಾಲಕ್ಕಿಗಳಿಗೇ ವಿಶಿಷ್ಟವಾದ ಪದ್ಧತಿ ಇದಾಗಿದೆ. ದಿಬ್ಬಣ ಅರ್ಧದಾರಿ ಕ್ರಮಿಸಿದಾಗ ವರನ ಕಡೆಯ ಇಬ್ಬರು ಮುಂದಾಗಿ ಹೆಣ್ಣಿನ ಮನೆಗೆ ತೆರಳುವರು. ಅಲ್ಲಿ ಹೆಣ್ಣಿನ ಮನೆಯವರಿಗೆ ದಿಬ್ಬಣ ಹೊರಟ ಸಂಗತಿ ಹೇಳುತ್ತಾರೆ. ಬಳಿಕ ಪರಸ್ಪರ ಹೆಣ್ಣು-ಗಂಡಿನ

ಹೆಸರು ಕೇಳಿಕೊಳ್ಳುತ್ತಾರೆ. ಬಳಿಕ ಅಲ್ಲಿಯೇ ಊಟ ಮುಗಿಸಿ ದಿಬ್ಬಣ ಕರೆತರುವುದಾಗಿ ಹೇಳಿ ಬಂದು ಪುನಃ ಗಂಡಿನ ದಿಬ್ಬಣ ಸೇರುತ್ತಾರೆ. ಗಂಡಿನವರು ಬೇರೆಕಡೆ ದಿಬ್ಬಣ ಒಯ್ಯಬಾರದೆಂಬ ಕಾರಣಕ್ಕಾಗಿ ಹೆಸ್ರೂಟ ಪದ್ಧತಿ ಬಂದಿರಬಹುದು.

ದಿಬ್ಬಣ ಬಂದಾಗ ವಧುವಿನ ತಾಯಿ ಮದುಮಗನನ್ನು ಪಾದ ತೊಳೆದು ಬರಮಾಡಿಕೊಳ್ಳುತ್ತಾಳೆ. ಬಳಿಕ ವಧುವಿನ ತಂದೆ ಮದುಮಗನನ್ನು ತುಳಸಿಯ ಎದುರಿಗೆ ಕೂಡಿಸುತ್ತಾನೆ. ಹೀಗೆ ಮದುಮಗನನ್ನು ಬರಮಾಡಿಕೊಳ್ಳುವುದಾಗಲಿ, ತಂದು ಕೂರಿಸುವುದರಲ್ಲಾಗಲಿ ವಿಳಂಬವಾಗಬಾರದು. ವಿಳಂಬವಾದಲ್ಲಿ ಹಾಡುಗಾರ್ತಿಯರು ಹಳಿಯುವ ಹಾಡನ್ನು ಪ್ರಾರಂಭಿಸುತ್ತಾರೆ. ವರನು ಕುಳಿತ ಬಳಿಕ ಬೀಗರಲ್ಲಿ ಪರಸ್ಪರ ಉಡುಗೊರೆ ವಿನಿಮಯ ನಡೆಯುವುದು. ಬಂದವರಿಗೆಲ್ಲ ಸಿಹಿ ಹಂಚುವ ಕಾರ್ಯವೂ ನಡೆಯುತ್ತದೆ. ಮದುಮಗನು ಮಾತ್ರ ಧಾರೆ ಆಗುವವರೆಗೂ, ಮಾವನ ಮನೆಯಲ್ಲಿ ಏನನ್ನೂ ಸೇವಿಸಬಾರದಂತೆ. ವಧುವನ್ನು ಕರೆತರುವಾತ ಸೋದರಮಾವ. ಮದುಮಕ್ಕಳ ನಡುವೆ ಅಂತಃಪಟ ಹಿಡಿದು ಪ್ರಾರ್ಥನೆ ಸಲ್ಲಿಸುವರು. ಬಳಿಕ ಅಂತಃಪಟ ತೆಗೆಯುವರು. ಗಂಡಿನ ಬಲ ಹಸ್ತದ ಮೇಲೆ ಹಾಲು-ನೀರು ತುಳಸಿ ಇಟ್ಟು ಧಾರೆ ನೀರನ್ನು ಬಿಡುವರು.

**ತಿರಿಗಟ್ಟು, ತಿಕ್ಕೋಣ**

ಮಲ್ಲಿಗೆ ಹೂ ಅರೆದು ಸಿದ್ಧಪಡಿಸಿದ ಮಿಶ್ರಣವೇ ತಿರಿಗಟ್ಟು ತಿಕ್ಕೋಣ. ಈ ಮಿಶ್ರಣವನ್ನು ಗಂಡಸು ಹೆಂಡತಿಯ ಭುಜಕ್ಕೂ ಹೆಂಡತಿ ಗಂಡನ ಭುಜಕ್ಕೂ ಬಳಿಯುತ್ತಾರೆ. ಹೆಂಡತಿಯ ಹೆಗಲಿಗೆ ಧಾರೆ ಸೀರೆ ಹಾಕಿ ಮದುಮಗ ಸಭೆಗೆ ನಮಸ್ಕರಿಸುವನು.

**ಮರಗಟ್ಟು ಶಾಸ್ತ್ರ**

ಇದು ಹಾಲಕ್ಕಿಗಳ ಉಡುಗೊರೆ ಶಾಸ್ತ್ರಕ್ಕಿರುವ ಹೆಸರು. ವಿವಾಹಕ್ಕೆ ಉಡುಗೊರೆ ತಂದವರೆಲ್ಲ ಅದನ್ನು ಕುಡಿ ಬಾಳೆಯ ಮೇಲಿಡುತ್ತಾರೆ. ಪತ್ನಿಯನ್ನು ಕರೆದುಕೊಂಡು ಹೋಗುವಾಗ ಕೆಲವು ಚಡಂಗಗಳಿವೆ. ಹೆಣ್ಣಿಗೆ ತೆಂಗು, ಅಡಿಕೆ ಸಸಿ, ಮತ್ತು ಮಣ್ಣಿನ ಪಾತ್ರೆಗಳನ್ನು ಬಳುವಳಿಯಾಗಿ ನೀಡಲಾಗುವುದು. ತೆಂಗು ಅಡಿಕೆಗಳು ಫಲ ಬಿಟ್ಟಾಗ ಮಗಳು ತವರನ್ನು ನೆನೆಯಲಿ ಎಂಬುದೇ ಇದರ ಹಿಂದಿನ ಆಶಯ. ಹಾಗೆಯೇ ಪಾತ್ರೆಗಳು ಅಕ್ಷಯವಾಗಲಿ ಎಂಬ ಹಾರೈಕೆ ಇರಬಹುದು. ಮನೆಯಲ್ಲಿಯೇ ಬೆಳೆದ ತೆಂಗಿನ ಮರಗಳಲ್ಲಿ ಒಂದೆರಡನ್ನು ಮಗಳಿಗೆ ಬಳುವಳಿ ನೀಡುವುದುಂಟು. ಆ ಮರದ ಫಲಗಳು ಅವಳಿಗೇ ಸೇರುತ್ತದೆ. "ಹೋಗೆಂಬೂಕೆ ತಂಗಿ ಮನಸಿಲ್ಲ" ಎಂದು ತುಂಬಿದ ಹೃದಯದಿಂದ ಹೆಣ್ಣನ್ನು ತಂದೆ ತಾಯಿಗಳೂ ಬಂಧು ಬಾಂಧವರು ಬೀಳ್ಕೊಡುತ್ತಾರೆ.

ಹಾಲಕ್ಕಿಗಳಲ್ಲಿ ಪುನರ್ವಿವಾಹ ಪದ್ಧತಿ ಉಂಟು ಮಕ್ಕಳಾಗುವುದರೊಳಗಾಗಿ ಪತಿ ತೀರಿಕೊಂಡಲ್ಲಿ ಊರಗೌಡನ ಅನುಮತಿ ಪಡೆದು ವಿವಾಹವಾಗಬಹುದು. ಅಂಥ ವಿವಾಹ ನಡೆಯುವುದು ನಿರಾಡಂಬರವಾಗಿ. ವಿವಾಹವಾಗ ಬಯಸುವವನು ವಸ್ತ್ರ-ಆಭರಣಗಳನ್ನು ನೀಡಿದ್ದನ್ನು ವಧು ಧರಿಸಿ ತವರು ಮನೆಯನ್ನು ಹಿಂಬಾಗಿಲಿನಿಂದ ಬಿಡುವುದು ಪದ್ಧತಿ. ಹಿಂದೆ ಬಹು ಪತ್ನಿತ್ವವಿತ್ತು.

## ಸಂಸ್ಕಾರ

ಮರಣ ಸಮೀಪಿಸಿದೆ ಎಂದು ತಿಳಿದಾಗ ಕುಟುಂಬದ ಹಿರಿಯರು ಅಥವಾ ದಾಸರು ''ಹರಿಗೋವಿಂದ ಹರಿಗೋವಿಂದ'' ಭಜನೆ ಮಾಡುವರು. ಮೃತರನ್ನು ಸುಡುವುದು ಪದ್ಧತಿ. ಮೂರು ದಿನಗಳ ಬಳಿಕ ಅಸ್ಥಿ ಸಂಚಯನ ನಡೆಯುವುದು. ತಿರುಪತಿ ಯಾತ್ರೆ ಮಾಡಿ ಬಂದು ''ದಾಸ'' ನಾದವನಿಗೆ ವಿಶೇಷ ಸಂಸ್ಕಾರ ಮಾಡುವುದು. ಸತ್ತವರ ಆತ್ಮವನ್ನು ಸ್ಮಶಾನದಿಂದ ತಂದು ಒಂದು ಸ್ಥಳದಲ್ಲಿ ನಿಲ್ಲಿಸುವ ಕೆಲಸ ತೋಟಗಾರನದು. ಸತ್ತವರ ಆತ್ಮವೆಂದು ಒಂದು ಪುಟ್ಟ ಕಲ್ಲನ್ನು ಸ್ಮಶಾನದಿಂದ ತಂದು ಅದಕ್ಕೆ ನೈವೇದ್ಯವಿಡುತ್ತಾರೆ. ೨ನೆಯ ದಿನ ಭೋಜನ.

## ಹಬ್ಬ ಹುಣ್ಣಿಮೆ

ಹೋಳಿ, ಯುಗಾದಿ, ಸಂಕ್ರಾಂತಿ ಹಬ್ಬಗಳನ್ನು ಉತ್ಸಾಹದಿಂದ ಆಚರಿಸುತ್ತಾರೆ. ಹೋಳಿ ಹಬ್ಬ ಆಚರಿಸುವುದು ಆರು ದಿನಗಳ ಪರ್ಯಂತ.

## ದೇವತೆಗಳು

ಶಿವ, ಹನುಮಂತ, ತಿರುಪತಿ ತಿಮ್ಮಪ್ಪ, ಬಲೀಂದ್ರ ಇವರು ಆರಾಧಿಸುವ ಕೆಲವು ದೇವತೆಗಳು. ತಿರುಪತಿ ವೆಂಕಟರಮಣನನ್ನು ಇವರು ಅನನ್ಯಭಾವದಿಂದ ಪೂಜಿಸುತ್ತಾರೆ. ತಿರುಪತಿ ಯಾತ್ರೆ ಇವರಿಗೆ ಅತ್ಯಂತ ಪವಿತ್ರವಾದದ್ದು. ತಿರುಪತಿಯಾತ್ರೆ ಮಾಡಿ ಬಂದವರಿಗೆ ''ದಾಸ'' ಎನ್ನುತ್ತಾರೆ. ವೆಂಕಟರಮಣ ಮೂರ್ತಿಯನ್ನು ತುಳಸಿಯಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ತಾವು ಗಳಿಸಿದ ಹಣದಲ್ಲಿ ಕೆಲಭಾಗವನ್ನು ವೆಂಕಟರಮಣನಿಗೆ ತೆಗೆದಿರಿಸುವುದು ವಾಡಿಕೆ. ಇದಕ್ಕೆ ''ಚಕ್ರ ಕಟ್ಟುವುದು'' ಎಂದು ಹೆಸರು. ಕೊನೆ ಪಕ್ಷ ನಾಲ್ಕಾಣೆಯನ್ನಾದರೂ ವೆಂಕಟರಮಣನಿಗೆ ತೆಗೆದಿರಿಸುತ್ತಾರೆ. ಬಂಡಿಯಮ್ಮ, ಹೋರಿಯಮ್ಮ, ಬಂಡಾರಮ್ಮ, ಶಿರಸಿ ಮಾಕೆಮ್ಮ ಮೊದಲಾದ ದೇವತೆಗಳನ್ನು ನಾಗ, ಗೋವು, ಹುಲಿ, ಕೆಂಡದ ಬೀರ, ಗೋಳಿಬೀರ, ಕಟ್ಟೆಬೀರ, ಬೇಟೆ ಬೀರ, ಜಟಗ ಇವನ್ನು ಪೂಜಿಸುತ್ತಾರೆ. ಚಂದಾವರ ಇವರಿಗೆ ಪವಿತ್ರ ಕ್ಷೇತ್ರ. ಅಲ್ಲಿಯ ಮಾರುತಿಯನ್ನು ಆರಾಧಿಸುವರು. ಹೊಸಳ್ಳಿ ಶಂಭುಲಿಂಗ, ದೇವರ ಬೊಳೆ ಈಶ್ವರ ಮೊದಲಾದ ದೇವರಿಗೂ ನಡೆದುಕೊಳ್ಳುವುದುಂಟು. ಹಾಲಕ್ಕಿ ಒಕ್ಕಲಿಗರಲ್ಲಿ ವೃಕ್ಷ ಪೂಜೆಯೂ ರೂಢಿಯಲ್ಲಿದೆ. ಅಶ್ವತ್ಥ, ಅತ್ತಿ, ಆಲ, ತೆಂಗು, ಅಡಿಕೆ, ಇವನ್ನೆಲ್ಲ ಪೂಜಿಸುವರು. ಎಲ್ಲರ ಮನೆಯ ಮುಂಭಾಗದಲ್ಲೂ ತುಳಸಿ ಕಟ್ಟೆಯನ್ನು ಕಾಣಬಹುದಾಗಿದೆ. ತುಳಸಿ ಅವರಿಗೆ ಪವಿತ್ರವಾದ ಗಿಡ. ತುಳಸಿ ಲಗ್ನವನ್ನು ಅತಿ ಸಂಭ್ರಮದಿಂದ ಆಚರಿಸುವರು. ಬೃಂದಾವನದಲ್ಲಿ ವೆಂಕಟರಮಣನಿದ್ದಂತೆ ಸುಲಿಯುವ ತೆಂಗಿನ ಕಾಯನ್ನು ಇವರು ಬಲೀಂದ್ರನೆಂದು ಭಾವಿಸುತ್ತಾರೆ. ಬಲೀಂದ್ರನನ್ನು ಒಳ್ಳೆಯ ಮಳೆ-ಬೆಳೆಗಾಗಿ ಪ್ರಾರ್ಥಿಸುವುದುಂಟು. ಹಬ್ಬ ಹುಣ್ಣಿಮೆ, ವಿವಾಹದ ಸಂದರ್ಭಗಳಲ್ಲಿ ಬಲೀಂದ್ರನಿಗೆ ವಿಶೇಷ ಪೂಜೆ. ಭೂತ, ವಮ್ಮಲ್ತಿ, ಅಡ್ಡಬಾಣಂತಿ, ಕೀಲು ಕೊಳ್ಳಿದೈವ ಮುಂತಾದುವನ್ನು ತೃಪ್ತಿಪಡಿಸಲು ಹಾಲಕ್ಕಿ ಒಕ್ಕಲಿಗರು ಹಾತೊರೆಯುವರು.

### ಮನೆಗಳು

ಮಣ್ಣಿನ ಗೋಡೆ ಮತ್ತು ಹುಲ್ಲಿನ ಚಾವಣಿಗಳಿಂದ ಮನೆ ಕಟ್ಟಿರುತ್ತಾರೆ. ಮನೆಯ ಹಿಂದೆ ಹಾಗೂ ಮುಂದೆ ಸ್ವಲ್ಪ ಜಾಗ ಬಿಟ್ಟಿರುತ್ತಾರೆ. ಹಾಲಕ್ಕಿ ಹೆಂಗಸರಿಗೆ ಹೂ ಮುಡಿಯುವುದು ಅತ್ಯಂತ ಪ್ರಿಯವಾದ್ದು. ಆದ್ದರಿಂದಲೇ ಮನೆಯ ಹಿಂದೆ ಅಥವಾ ಮುಂದೆ ಒಂದು ಕೈತೋಟವಿರುತ್ತದೆ. ಅಂಗಳದಲ್ಲಿ ತುಳಸಿ ಕಟ್ಟೆ ಅದರಲ್ಲಿ ವೆಂಕಟರಮಣನನ್ನು ಪ್ರತಿಷ್ಠಾಪಿಸಲ್ಪಟ್ಟಿದ್ದಾನೆ. ಪಡಸಾಲೆ, ನಡುಮನೆ, ಅಡಿಗೆ ಮನೆ ಎಂದು ಇವರ ಮನೆಯಲ್ಲಿ ಮೂರು ಭಾಗಗಳಿವೆ. ಅಂಗಳದಲ್ಲಿ ಇಲ್ಲವೇ ಪಡಸಾಲಿನಲ್ಲಿ ಭತ್ತ ಮೆರೆಯಲು ಒಂದು ವರಳು ಇರುತ್ತದೆ. ಹಾಲಕ್ಕಿ ಒಕ್ಕಲಿಗರ ಮನೆಯ ನೆಲ ನುಣುಪಾಗಿ ಹೊಳೆಯುತ್ತಿರುತ್ತದೆ.

### ಆಡಳಿತ ಪದ್ಧತಿ

ಹಾಲಕ್ಕಿ ಒಕ್ಕಲಿಗರಿಗೆ ಅವರದೇ ಆದ ಆಡಳಿತ ಪದ್ಧತಿ ಇದೆ. ಈ ಪದ್ಧತಿಯನ್ನು ಅವರು ಬಹು ಕಾಲದಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಲಕ್ಕಿ ಒಕ್ಕಲಿಗರ ಏಳು ಸೀಮೆಗಳಿವೆ. ಈ ಸೀಮೆಯಲ್ಲಿ ಮಾಗಣೆ, ಕೊಪ್ಪಗಳೆಂಬ ವಿಭಾಗಗಳೂ ಇವೆ. ಹಾಲಕ್ಕಿ ಸಮಾಜದ ಹಿರಿಯ ಊರಗೌಡ, ಹಲವು ಗ್ರಾಮಗಳ ಸಮುದಾಯದ ಹಿರಿಯ ಸೀಮೆಗೌಡ, ಇಂತಹ ಹಲವು ಸೀಮೆಗಳ ಮೇಲೆ ಅರಸು ಗೌಡನಿರುತ್ತಾನೆ, ಅರಸು ಗೌಡನಿಗೆ ಆಡಳಿತದಲ್ಲಿ ಸಹಾಯಕನಾಗಿರುವಾತನೇ ಪ್ರಧಾನಿಗೌಡ, ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಸಲಹೆಗಾರನಾಗಿ ಗುರುಗೌಡನಿರುತ್ತಾನೆ ಜನಮನ ಗೌಡ, ಸೀಮೆ ಬುದವಂತ ಸೀಮೆ ಕೋಲಕಾರ ಇವರು ಇತರ ಅಧಿಕಾರಿಗಳು.

ಹಿಂದೆ ವರ್ಷಕ್ಕೊಮ್ಮೆ ಮಹಾಸಭೆ ಸೇರುತ್ತಿತ್ತು. ಇದರ ಅಧ್ಯಕ್ಷತೆ ವಹಿಸುತ್ತಿದ್ದವ ಅರಸುಗೌಡ. ಈ ಮಹಾಸಭೆಗೆ "ಚಪ್ಪರ ಕೂಟ" ಎಂದು ಹೆಸರು. ಸಾಮಾಜಿಕ, ಧಾರ್ಮಿಕ, ವಿಷಯಗಳಿಗೆ ಸಂಬಂಧಿಸಿದಂತೆ ಇಲ್ಲಿ ಚರ್ಚೆ ನಡೆಯುತ್ತಿತ್ತು. ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಎಲ್ಲರೂ ಚಾಚೂ ತಪ್ಪದೆ ಪಾಲಿಸಬೇಕಾಗುತ್ತಿತ್ತು. ಮಹಾ ಸಭೆಯಲ್ಲಿ ಭಾಗವಹಿಸಲು ಬಂದವರಿಗೆಲ್ಲ ಊಟದ ಏರ್ಪಾಡಾಗುತ್ತಿತ್ತು, ಊರಗೌಡ, ಬುದವಂತ, ಕೋಲಕಾರ ಇವರೆಲ್ಲ ಅಧಿಕಾರಿಗಳು. ಪ್ರತಿ ಊರಿನಲ್ಲಿಯೂ ನಡೆಯುವ ಕೂಟದ ಸಭೆಗಳಲ್ಲಿ ಪ್ರತಿಯೊಬ್ಬ ವಯಸ್ಕನಿಗೂ ಭಾಗವಹಿಸುವ ಹಕ್ಕಿದೆ.

### ಜನಪದ ವೈದ್ಯ

ಹಾಲಕ್ಕಿಗಳಿದು ಪರಂಪರಾನುಗತವಾಗಿ ನಡೆದು ಬಂದ ವೈದ್ಯ ಪದ್ಧತಿ ಇವರ ಕೊಪ್ಪಗಳಲ್ಲಿ ಪಶುಗಳಿಗೆ ಔಷಧಿ ನೀಡುವ ವೈದ್ಯರೂ ಇದ್ದಾರೆ ಅವರು ಕಾಡಿನಿಂದ ವನಸ್ಪತಿ ತಂದು ಔಷಧಿ ಸಿದ್ಧ ಪಡಿಸುವರು. ಇದಕ್ಕೆ ಅವರು ಸಂಭಾವನೆ ಪಡೆಯುವುದಿಲ್ಲ.

ಅಂಕೋಲೆಯ ಬೆಳಂಬಾರದ ಬೊಮ್ಮಗೌಡ ಮನೆತನ ಪಕ್ಷವಾತಕ್ಕೆ ನೀಡುವ ಔಷಧಿ ಪ್ರಸಿದ್ಧವಾದದ್ದು. ಈ ಔಷಧಿಗೆ ಹೊರ ರಾಜ್ಯ ಮತ್ತು ಹೊರ ರಾಷ್ಟ್ರಗಳಿಂದಲೂ ಬೇಡಿಕೆ ಇದೆ. ತೋಡೂರಿನ ಹಾಲಕ್ಕಿ ಗೌಡ ಮನೆತನ ಎಲುಬಿನ ಕಾಯಿಲೆಗಳಿಗೂ ವಡಗೆರೆಕೊಪ್ಪದ

ಮನೆತನ ಮಕ್ಕಳ ಕಾಯಿಲೆಗೂ ನೀಡುವ ಔಷಧಿ ಪ್ರಸಿದ್ಧವಾದದ್ದು.

### ಭಾಷೆ

ಇವರದು ಅಪಭ್ರಂಶ ಕನ್ನಡ ''ಲ'' ಕಾರಕ್ಕೆ ಬದಲು''ನ''ಕಾರ ''ಳ'' ಕಾರದ ಬದಲಿಗೆ ''ಜ'' ಕಾರದ ಬಳಕೆ ರೂಢಿಯಲ್ಲಿದೆ. ಹಾಗೆಯೇ ''ಳ'' ಕಾರವಿದ್ದಲ್ಲಿ ''ಲ'' ಕಾರ ಬಳಸುವುದೂ ಉಂಟು. ''ಸ'' ಕಾರವನ್ನು ''ಳ'' ಕಾರವಾಗಿ ಉಚ್ಚರಿಸುವರು. ಇವರ ಭಾಷೆಯ ಕೆಲವು ಮಾದರಿಗಳು:

| | | | |
|---|---|---|---|
| ಕಂಡ್ರ್ಯಾ.............. | ಕಂಡಿರಾ | ಸಿನಿ..................... | ಶಿನಿ |
| ಹೌಂದ್ರು.............. | ಹೌದ್ರೀ | ಸುಳ್ಳು..................... | ಶುಳ್ಳು |
| ಅಪ್ಪ.................. | ಲಪ್ಪ | ಹೂವು..................... | ಹೂಗು |
| ಅಷ್ಟೊಂದು................ | ಎಷ್ಟೊಂದು | ತಗಡೆ..................... | ಪೊಗಡೆ |
| ತಿಂಟ್ರ................... | ತಿನ್ನುತ್ತಾರೆ. | ಪ್ರೀತಿ..................... | ಪಿರೂತಿ |
| ಒಡಿಯ..................... | ಒಡೆಯರು | | |

### ಸಾಹಿತ್ಯ-ಅಧ್ಯಯನ

ಹಾಲಕ್ಕಿ ಒಕ್ಕಲಿಗರಲ್ಲಿ ಜನಪದ ಸಾಹಿತ್ಯ ಸಮೃದ್ಧವಾಗಿದೆ. ಇದರಲ್ಲಿ ಹಾಡುಬಾರದ ಹೆಂಗಸರಿಲ್ಲ ಪದಬಾರದ ಗಂಡಸರಿಲ್ಲ ಎನ್ನಬಹುದು. ಜನಪದ ಕಥೆ, ಕವನ, ಗೀತೆ, ಒಗಟು, ಗಾದೆಗಳು ವಿಪುಲವಾಗಿವೆ. ಹಾಲಕ್ಕಿ ಒಕ್ಕಲಿಗರ ಕಥನ ಕವನಗಳನ್ನು ಡಾ॥ ಎಲ್. ಆರ್. ಹೆಗಡೆ ಅವರು ''ತಿಮ್ಮಕ್ಕನ ಪದಗಳು' ಮತ್ತು ''ಗುಮ್ಮನ ಪದಗಳು'' ಎಂಬ ಸಂಕಲನ ಪ್ರಕಟಿಸಿದ್ದಾರೆ. ಎಲ್ ಆರ್. ಹೆಗಡೆಯವರದೇ ಗುಮಟೇ ಹಾಡುಗಳು ಪ್ರಕಟವಾಗಿದೆ. ಡಾ. ಎಲ್. ಜಿ. ಭಟ್ಟ ಅವರು ಹಾಲಕ್ಕಿಗಳ ಸಂಪ್ರದಾಯದ ಹಾಡುಗಳು ಮದುವೆ ಸಂದರ್ಭದ ಹಾಡುಗಳು ಮತ್ತು ಲಾವಣಿಗಳನ್ನು ''ಹಾಲಕ್ಕಿ ಪಾಯಸ' ಎಂಬ ಪುಸ್ತಕದಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಲಕ್ಕಿ ಜನಪದ ಜೀವನ ಸಾಹಿತ್ಯ ಕುರಿತಂತೆಯೂ ಅವರು ಪ್ರೌಢ ಪ್ರಬಂಧ ಬರೆದು ಡಾಕ್ಟರೇಟ್ ಪಡೆದಿದ್ದಾರೆ. ಹಾಲಕ್ಕಿ ಕಥೆಗಳನ್ನು ಡಾ. ಎಲ್. ಆರ್. ಹೆಗಡೆಯವರು '' ನಮ್ಮ ಜನಪದ ಕಥೆಗಳು'' ಉತ್ತರ ಕನ್ನಡದ ಜನಪದ ಕಥೆಗಳು, ಕರಾವಳಿ ಕಥೆಗಳು-ಸಂಗ್ರಹದಲ್ಲಿ ದೊರೆಯುತ್ತವೆ. ಇದಲ್ಲದೆ ಹಾಲಕ್ಕಿ ಒಕ್ಕಲಿಗರನ್ನು ಕುರಿತಂತೆ ಐ ಬಿ ಎಚ್ ಪ್ರಕಾಶನ, ಎರಡು ಕಿರು ಹೊತ್ತಿಗೆ ಪ್ರಕಟಿಸಿದೆ. ಡಾ. ಎನ್. ಆರ್. ನಾಯಕ ಅವರ ಕಾರವಾರ ಜಿಲ್ಲೆಯ ಜನಪದ ಗೀತೆಗಳು ಸುಗ್ಗಿಯ ಪದಗಳಲ್ಲೂ ಹಾಲಕ್ಕಿ ಒಕ್ಕಲಿಗರ ಬಗ್ಗೆ ಮಾಹಿತಿ ದೊರೆಯುತ್ತದೆ.

### ಜನಪದ ಕಲೆಗಳು

ಗುಮಟೆ ಪಾಂಗು: ಹಾಲಕ್ಕಿ ಗಂಡಸರು ಗುಮಟೆ ವಾದನದೊಂದಿಗೆ ಹೇಳುವ ಪದಗಳು, ಗುಮಟೆ ಹಿಡಿದು ಸಾಮೂಹಿಕವಾಗಿ ಹಾಡು ಹೇಳುವುದೇ ಗುಮಟೆ ಪಾಂಗು ಎನಿಸಿದೆ. ಮಣ್ಣಿನ ಮಡಿಕೆಯಿಂದ ತಯಾರಿಸಿದ ವಾದ್ಯವೇ ಗುಮಟೆ. ಈ ವಾದ್ಯದ ಒಂದು ಬದಿ ತೆರೆದಿದ್ದು ಇನ್ನೊಂದು ಬದಿಗೆ ಉಡದ ಅಥವಾ ಕಾಡುಕುರಿಯ ಚರ್ಮ

ಬಿಗಿದಿರುವರು. ಹುರಿಬಳ್ಳಿಯನ್ನು ಎರಡೂ ಬದಿಗೆ ಕಟ್ಟಿ, ಕೊರಳಿಗೆ ಹಾಕಿಕೊಂಡಿರುವರು. ಹಗಲಿನಲ್ಲಿ ಹೊಲದಲ್ಲಿ ದುಡಿದು ರಾತ್ರಿ ಮನೆಗೆ ಮರಳಿದಾಗ, ಸುಗ್ಗಿಕೋಲು ಪದ ಹೇಳುವಾಗ, ಹೊಡತಲು (ಬೆಂಕಿ) ಹಾಕಿಕೊಂಡು ಗುಮಟೆ ವಾದ್ಯ ಕಾಯಿಸಿ ಬಡಿದು ಹಾಲಕ್ಕಿ ಗಂಡಸರು ಪದ ಹೇಳಲು ಆರಂಭಿಸುತ್ತಾರೆ. ತುಳಸಿ ಮದುವೆ, ಗಂಗಾಷ್ಟಾಮಿ, ವಿವಾಹ, ದೇವಕಾರ್ಯ ಸಂದರ್ಭಗಳಲ್ಲಿ ಗುಮಟೆ ಪದ ಹೇಳುವುದು ಪದ್ಧತಿ. ಸಂಕ್ರಾಂತಿಯಿಂದ ಸುಗ್ಗಿ ಹುಣ್ಣಿಮೆಯವರೆಗೆ ಗುಮಟೆ ಪದ ಹಾಡುವುದು ಹೆಚ್ಚು.

ಡಾ. ಎಲ್. ಆರ್. ಹೆಗಡೆಯವರು ಬರೆದಂತೆ "ಗುಮಟೆಯು ಉತ್ಸಾಹದ ದನಿಯನ್ನು ಹೊರ ಹೊಮ್ಮಿಸುವ ಗಂಡುವಾದನ, ಅದನ್ನು ಬಡಿಯಲಿಕ್ಕೆ ಆವೇಶವೂ ರಟ್ಟೆಯ ಬಲವೂ ಗತ್ತಿನ ಜ್ಞಾನವೂ ಮೂರೂ ಬೇಕು. ಅದು ಕೋಮಲೆಯರಿಗೆ ಹೇಳಿಕೆಯಾದ ವಾದನವಲ್ಲ. ತೀರ ದನಿಯನ್ನು ಎಳೆದು ರಾಗ ಮಾಡುವ ಹೆಂಗಳೆಯರ ಹಾಡುಗಳು ಈ ಗುಮಟೆಯ ಗತ್ತಿಗೂ ಹೊಂದುವುದಿಲ್ಲ. ಗುಮಟೆಯ ವಾದನದ ಗತ್ತಿಗೆ ಆ ಪದಗಳ ಕಥನ ಕಲೆಗೂ ಒಲಿದ ನಾರಿಯರು ಆ ಪದಗಳನ್ನು ಕೇಳಿ ಅದನ್ನು ಕಲಿತುಕೊಂಡು ಅದನ್ನು ಸುಮ್ಮನೆ ಹಾಡಿ ಸಂತೋಷಪಡುತ್ತಾರೆ".

ಗುಮಟೆ ಪದ ಹೇಳುವಾಗ ಗುಮಟೆ ಬಾರಿಸುವವರು ನಾಲ್ಕು ಜನರಿರುತ್ತಾರೆ. ಒಬ್ಬ ಕಚಾಳ ಬಾರಿಸುವಾತ, ಒಬ್ಬಾತ ಪದ ಎತ್ತುಗಡೆ ಮಾಡಿದಾಗ ಉಳಿದವರು ಆ ಸೊಲ್ಲನ್ನು ಪುನಃ ಹೇಳುತ್ತಾರೆ. ಕೆಲವು ಕಡೆ ಗುಮಟೆ ಪದ ಹೇಳುವಾಗ ಕೂಚನೊಬ್ಬ ಕುಣಿಯುವುದುಂಟು ಗುಮಟೆ ವಾದ್ಯದ ನಾದವೇ ಹಾಲಕ್ಕಿ ಒಕ್ಕಲಿಗರಿಗೆ ಅನೇಕ ಪದಗಳನ್ನು ಹೇಳಲು ಪ್ರೇರಣೆ ನೀಡುವುದು, ಗುಮಟೆ ಪದ ಪ್ರಾರಂಭವಾಗುವುದು ದೇವಸ್ತುತಿಯಿಂದ, ಪಂಚಭೂತಗಳಿಗೆ, ತುಳಸಿಗೆ, ಬಟ್ಟೆಬೀರ ಕಾನಬೀರ, ಶ್ರೀರಾಮ, ಪಾಂಡವರು, ಎಲ್ಲರಿಗೂ ಪ್ರಾರ್ಥನೆ ಸಲ್ಲಿಸುವರು. ಅನಂತರ ಕಥನ ಗೀತೆಗಳನ್ನು ಪ್ರಾರಂಭಿಸುವರು. ಜನಪದ ಭಾರತ ರಾಮಾಯಣ, ಭಾಗವತರ ಕಥೆಗಳನ್ನು ಬೆಳಗಿನವರೆಗೂ ಹೇಳುವುದುಂಟು. ಗುಮಟೆ ಪದದಲ್ಲಿ ಭಕ್ತಿ, ನೀತಿ, ಹಾಸ್ಯ ಪದಗಳೂ ಉಂಟು. ಹಲವು ಜನಪದ ಕಥೆಗಳನ್ನು ರೂಪಾಂತರಿಸಿಕೊಂಡು ಹೇಳುವುದುಂಟು. ಉದಾ: ಹುಲಿ ಕಪಿಲೆ ಕಥೆ (ಗೋವಿನ ಹಾಡು), ತೋಳ ಕುರಿಮರಿ ಕಥೆ ಇತ್ಯಾದಿ. ಪಾಂಡವರು ರಾತ್ರಿ ಬೆಳಗಾಗುವುದರೊಳಗೆ ಕಟ್ಟಿದ ಕೋಟೆ ದೇವತೆಗಳ ಕೂಟ ಮೊದಲಾದವುಗಳ ಐತಿಹ್ಯ ಕುರಿತು ಹಾಡುಗಳೂ ದೊರೆಯುತ್ತವೆ.

### ಸುಗ್ಗಿ ಕುಣಿತ

ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಸುಗ್ಗಿ ಕುಣಿತ ಆಚರಣೆಯಲ್ಲಿದೆ. ಆದರೆ ಈ ಕುಣಿತ ಹಾಲಕ್ಕಿ ಒಕ್ಕಲಿಗರಿಗೆ ಸಿದ್ಧಿಸಿದೆ. ಸುಗ್ಗಿ ಕುಣಿತಕ್ಕೆ ಸಂಬಂಧಿಸಿದಂತೆ ದಂತ ಕತೆಯೊಂದಿದೆ. ತ್ರಿಮೂರ್ತಿಗಳು ಸುಗ್ಗಿ ಕುಣಿತವನ್ನಾರಂಭಿಸುತ್ತಾರೆ. ಶಿವ ಗುಮಟೆ ವಾದ್ಯವನ್ನು ಬ್ರಹ್ಮ ಜಾಗಟೆಯನ್ನು ಬಡಿಯುತ್ತಾ ಶ್ರೀಮನ್ ನಾರಾಯಣನ ಮನೆಗೆ ಬರುತ್ತಾರೆ. ಲಕ್ಷ್ಮೀ ಶಿವ ಬ್ರಹ್ಮರನ್ನು ಊಟಕ್ಕೆ ಆಹ್ವಾನಿಸುತ್ತಾಳೆ. ಊಟಕ್ಕೆ ಕುಳಿತಾಗ ಹಾಲಕ್ಕಿ ಹುಡುಗನೊಬ್ಬ ಬಂದು ಗುಮಟೆವಾದ್ಯ ಎತ್ತಿಕೊಂಡು ಹೋಗಿ ಬಾರಿಸುತ್ತಾನೆ. ಆ ವಾದ್ಯವನ್ನು ಕೊಟ್ಟು, ನಿಮ್ಮ ಜಾತಿಯವರೇ ಪ್ರತಿ ವರ್ಷ ಸುಗ್ಗಿ ಹೊರಡಿಸಿ ಇದನ್ನು

ಬಾರಿಸಬೇಕು'' ಎಂದು ಆಶೀರ್ವದಿಸುತ್ತಾರೆ. ಈ ಕತೆ ಪಾಂಡವರಿಗೆ ಸಂಬಂಧಿಸಿದ್ದು, ಆದ್ದರಿಂದ ಏನಾದರೂ ಪ್ರಮಾದವಾದಲ್ಲಿ ಅದು ಪಾಂಡವರಿಗೆ ಎಂದು ಹೇಳುವುದಿದೆ.

ದೇವಲೋಕದಲ್ಲಿ ಮೂವತ್ಮೂರು ಕೋಟಿ ದೇವತೆಗಳು. ಸುಗ್ಗಿ ಕಟ್ಟಲು ಏಳು ರಾತ್ರಿ ಏಳು ಹಗಲು ನಿರ್ಧರಿಸಿ ಮದ್ದಳೆ ಹೊಡೆಯಲು ಮಾದೇವನಿಗೆ ದೇಮಟೆ ಹಿಡಿಯಲು ದೇವೇಂದ್ರನಿಗೆ ಹೈಲ ಹಾಕಲು ಗೋವಿಂದ ರಾಯನಿಗೆ ಆಮಂತ್ರಣವಿತ್ತರಂತೆ ಆದರೆ ಸುಗ್ಗಿ ಕುಣಿತ ಮಾಡುವುದು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಈ ಕಲೆ '' ತಮಗಲ್ಲ'' ಎಂದು ಭಾವಿಸಿದ ಅವರು ''ಹಾಲ್ಹಲ್ಲುಹುಟ್ಟಿದ ಹಾಲಕ್ಕಿ ಗೌಡಗೆ' ಈ ಸುಗ್ಗಿ ಕೊಡಬೇಕೆಂಬುದರ ನಿರ್ಣಯಕ್ಕೆ ಬಂದರು. ಹೀಗೆ ಹಾಲಕ್ಕಿಗಳಿಗೆ ಸುಗ್ಗಿ ಕೊಟ್ಟರು ಎನ್ನಲಾಗಿದೆ. ಬ್ರಿಟಿಷ್ ಅಧಿಕಾರಿಯೊಬ್ಬ ಅಂಕೋಲ ಭಾಗದ ಸುಗ್ಗಿಗೆ ಮಾರು ಹೋಗಿ ತಾಲ್ಲೂಕು ಕಛೇರಿ ಎದುರಿಗೆ ಪ್ರತಿ ವರ್ಷ ಸುಗ್ಗಿ ಕುಣಿತ ಏರ್ಪಡಿಸಬೇಕೆಂದು ಶಾಸನವನ್ನು ಮಾಡಿದನಂತೆ.

ಸುಗ್ಗಿ ಕುಣಿತ ನಡೆಯುವುದು ಸಾಮಾನ್ಯವಾಗಿ ಕಾಮನ ಹುಣ್ಣಿಮೆ ಸಂದರ್ಭದಲ್ಲಿ. ಫಾಲ್ಗುಣ ಶುದ್ಧ ದಶಮಿಯಿಂದ ಹುಣ್ಣಿಮೆಯವರೆಗೆ ಸುಗ್ಗಿಪದಗಳದೇ ಸುಗ್ಗಿ. ಸುಗ್ಗಿ ಏರ್ಪಡಿಸುವುದರ ಬಗ್ಗೆ ಊರಿನ ಮುಖಂಡರೆಲ್ಲ ಕುಳಿತು ಒಂದು ನಿರ್ಣಯ ಕೈಗೊಳ್ಳುವರು. ಸಂಕ್ರಾಂತಿ ಅಮಾವಾಸ್ಯೆರಾತ್ರಿಯಂದು ಕೋಲು ಕಡಿದು ತಂದು ಕರಿದೇವರ ತಳದಲ್ಲಿ ಕೋಲು ಹೊಡೆದು ಬರುವುದು ಸಂಪ್ರದಾಯ. ಅಂದಿನಿಂದ ಕೋಲಾಟದ ಅಭ್ಯಾಸದಲ್ಲಿ ತೊಡಗುತ್ತಾರೆ. ಸುಗ್ಗಿಯನ್ನು ಪಾಲ್ಗುಣ ಶುದ್ಧ ಏಕಾದಶಿಯಂದು ಕೆಲವು ಕಡೆ ದಶಮಿಯಂದು ಹೊರಡಿಸುವರು.

### ಸುಗ್ಗಿ ಕಟ್ಟುವ ಸ್ಥಳ

''ಕರಿಕಣ'' ಈ ಕಣದ ಮಧ್ಯದಲ್ಲಿರುವುದೇ ಸುರಗಿ ಕಂಬ. ಈ ಕಂಬಕ್ಕೆ ಹಿಂದಿನ ರಾತ್ರಿ ಕಲಾವಿದರೆಲ್ಲ ಕೋಲು ಕುಂಚಗಳನ್ನು ನೇತು ಹಾಕುವರು. ಕರಿದೇವರನ್ನು ಪ್ರತಿಷ್ಠಾಪಿಸಿ ದೀಪಹಚ್ಚಿ ನೈವೇದ್ಯವನ್ನಿಡುವರು. ಸುಗ್ಗಿ ಕುಣಿತದ ಪ್ರಾರಂಭದ ದಿನ ತಂಡದ ನಾಯಕ ''ಕರಿ ಅಕ್ಕಿ'' ಮಂತ್ರಿಸಿ ಭಾಗಾಳುಗಳಿಗೆಲ್ಲ ನೀಡುತ್ತಾನೆ. ಅನಂತರ ಕಲಾವಿದರೆಲ್ಲ ಕಾಲಿಗೆ ಗೆಜ್ಜೆ ಕಟ್ಟಿ, ಬೆಂಡು ಬೀಗಗಳಿಂದ ಅಲಂಕರಿಸಿದ ತುರಾಯಿ, ಹಾರಗಳನ್ನು ಧರಿಸುತ್ತಾರೆ. ಕೈಯ್ಯಲ್ಲಿ ಕೋಲು-ಕುಂಚಗಳನ್ನು ಹಿಡಿದಿರುತ್ತಾರೆ. ಸುಗ್ಗಿಯ ತಂಡದ ಎದುರು ಕರಡಿ ವೇಷದವನೊಬ್ಬನಿರುತ್ತಾನೆ. ಕೆಲವು ಕಡೆ ಹನುಮಂತನಿರುವುದೂ ಉಂಟು. ಇವಲ್ಲದೇ ಯಕ್ಷಗಾನದ ವೇಷಗಳು, ಕಳ್ಳ ಪೋಲಿಸ್ ಹಾಗೂ ಮರಕಾಲು ವೇಷದವರೂ ಇರುತ್ತಾರೆ. ಕಣದಿಂದ ಸುಗ್ಗಿ ಮೇಳ ಹೊರಟಿತು ಎಂಬುದನ್ನು ತಿಳಿಸಲು ವಾದ್ಯವೊಂದನ್ನು ಊದಲಾಗುವುದು-ಇದೇ ಹೆಟ್ಟುಂಡೆ ಇದನ್ನು ಮರದಿಂದ ಸಿದ್ಧಪಡಿಸಿರುತ್ತಾರೆ. ಕರಿದೇವರ ಎದುರು ''ಮಹದೇವರಾಯನ'' ಹಾಡನ್ನು ಮೊದಲಿಗೆ ಹಾಡಲೇಬೇಕು. ಅನಂತರ ಊರಗೌಡ, ಗಾಂವಂಕಾರ ತುಳಸಿ ಎದುರು ಕುಣಿದು ಸುಗ್ಗಿಯವರು ಉಳಿದ ಮನೆಗಳಿಗೆ ತೆರಳಬೇಕು. ಸುಗ್ಗಿಕುಣಿತದ ತಂಡದವರನ್ನೆಲ್ಲ ಕೊಪ್ಪದ ಒಕ್ಕಲು ಆರತಿ ಬೆಳಗಿ ಬರಮಾಡಿಕೊಳ್ಳಬೇಕು. ಮನೆಯ ತುಳಸಿ ಎದುರು ಕುಣಿದು ಯಜಮಾನನಿಂದ ಕಾಣಿಕೆ

ಪಡೆದು ಅವನಿಗೆ ಶುಭ ಹಾರೈಸಿ ತಂಡ ಮುಂದಿನ ಮನೆಗೆ ತೆರಳುವುದು.

ಸುಗ್ಗಿಯಲ್ಲಿ ಹಿರಿಸುಗ್ಗಿ ಮತ್ತು ಕಿರಿಸುಗ್ಗಿ ಎಂದು ಎರಡು ವಿಧ. ಬಣ್ಣ ಬಣ್ಣದ ಜೀಗಡಿ ಸುತ್ತಿದ ತುರಾಯಿಗಳಿಂದ ಆಕರ್ಷಕವಾಗಿರುವುದು ಹಿರಿಸುಗ್ಗಿ. ಇದಕ್ಕೆ ಖರ್ಚು ವೆಚ್ಚಗಳೂ ಅಪಾರ. ಕಿರಿಸುಗ್ಗಿಗೆ ತುರಾಯಿ-ಕೋಲು-ಕುಂಚಗಳ ಅಗತ್ಯವಿಲ್ಲ. ತಲೆಗೆ ಮುಂಡಾಸು ಇಳಿಬಿಡಲು ಹೂದಂಡೆ ಇಷ್ಟಿದ್ದರೆ ಸಾಕು. ಆದ್ದರಿಂದಲೇ ಇದಕ್ಕೆ ಬೋಳು ಸುಗ್ಗಿ ಎಂದೂ ಹೆಸರುಂಟು. ಸುಗ್ಗಿ ಕುಣಿತಕ್ಕೆ ಗುಮಟೆ ವಾದ್ಯದೊಂದಿಗೆ ತಾಳ, ಮದ್ದಳೆಗಳೂ ಇರುವುದು. ಸುಗ್ಗಿ ಕುಣಿಯುವವರು ಕಾಲಿಗೆ ಗೆಜ್ಜೆ ಕಟ್ಟಿ ಸೀರೆ ಅಥವಾ ಧೋತರವನ್ನುಡುತ್ತಾರೆ. ಹಸಿರು ಅಥವಾ ಕೆಂಪು ಬಣ್ಣದ ಅಂಗಿ ಧರಿಸುವರು. ಕೊರಳಿಗೆ ಮುತ್ತಿನ ಇಲ್ಲವೇ ಹೂವಿನ ಹಾರ ತುರಾಯಿಯನ್ನು ಇಳಿಬಿಡಲು ಬೆಂಡಿನ ಕಾಗದ ಬಳಸುವರು. ಕುಣಿತಕ್ಕೆ ಎಂಟು ಅಥವಾ ಹನ್ನೆರಡು ಜನ ನಿಲ್ಲುವರು. ಸುಗ್ಗಿಯ ಕುಣಿತಕ್ಕೆ ಗತ್ತಿಗೆ ತಕ್ಕಂತಹ ಪದ್ಯಗಳಿವೆ. ಈ ಪದಗಳಲ್ಲಿ ಹೆಚ್ಚಿನವು ದೇವರ ಸ್ತುತಿ.

ನವಿಲು ಗರಿಯ ಕುಂಚವನ್ನು ಕೈಯಲ್ಲಿ ಹಿಡಿದು "ಚೋ ಹೋ ಚೋ" "ಸೋ ಹೋ ಸೋ" "ಜಾವೋಸೋ" ಎಂದು ಕುಣಿಯುವರು. "ಚೋಹ ಚೋಹ" ಎಂದರೆ "ವೇಷ" ಎಂದು, ಡಾ. ಎಲ್. ಆರ್. ಹೆಗಡೆಯವರು ಹೇಳಿದ್ದಾರೆ. ಡಾ. ಎನ್. ಆರ್. ನಾಯಕ ಅವರು ಜೋಹೋಹೋ ಎನ್ನುವುದಕ್ಕೆ "ಎಂಥ ಸೊಗಸು" ಎಂದು ಅರ್ಥೈಸಿದ್ದಾರೆ. ಹೋಳಿ ಹುಣ್ಣಿಮೆ ರಾತ್ರಿ ಕಾಮದಹನಕ್ಕೆ ಪೂರ್ವದಲ್ಲಿ ಸುಗ್ಗಿ ಕುಣಿತದವರು ತಮ್ಮ ವೇಷ ಭೂಷಣ ಕಳಚುತ್ತಾರೆ. ಬಳಿಕ ಸಮಿಪದ ಮತ್ತು ಮಾದೇವರಾಯನನ ಪದ ಹೇಳುವರು. ಕಮಿಪದ ಹೇಳುವುದು ಸುಗ್ಗಿಯ ಆಚರಣೆ ಕುರಿತಂತೆ. ಇದಕ್ಕೆ ಪಾಂಡವರ ಕಮಿ ಮತ್ತು ಸೀತೆ ಕಮಿಗಳೆಂದು ಹೇಳುವುದುಂಟು.

ಡಾ. ಎಲ್. ಜಿ. ಭಟ್ಟರು ಸೀತೆ ಕಮಿಯನ್ನು ಪ್ರಕಟಿಸಿದ್ದಾರೆ. ಕಮಿ ಹೇಳುವವರು ಇಬ್ಬರಿರುತ್ತಾರೆ. ಉಳಿದವರು ಕುಣಿಯುತ್ತಾರೆ. ನಡುನಡುವೆ ಕಮಿ ಪದ ಹೇಳಿದ್ದ ಸೊಲ್ಲನೇ ಪುನಃ ಹೇಳುತ್ತಾರೆ.

ಅಲಾದಿ ಕುಣಿತ ಸುಗ್ಗಿಯ ಕುಣಿತದೊಂದಿಗೆ ಹಾಲಕ್ಕಿ ಒಕ್ಕಲಿಗರು ಕುಣಿಯುವ ಇನ್ನೊಂದು ಕುಣಿತ ಅಲಾದಿ. ಮುಸ್ಲೀಮರ ಪ್ರಭಾವದಿಂದ ಹಾಲಕ್ಕಿಗಳು ಈ ಪದಗಳನ್ನು ಕಲಿತಿರಬಹುದು. ಗುಮಟೆ ವಾದ್ಯದ ಗತ್ತಿನೊಂದಿಗೆ ಈ ಪದ ಹೇಳುವರು. ಅಲಾದಿ ಮೊಹರಂಗೆ ಸಂಬಂಧಿಸಿದ್ದು ಕರ್ಬಾಲಾ ಎನ್ನುವುದನ್ನೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಲಾದಿ ಎನ್ನುವುದು. ಅಲಾದಿ ಕುಣಿಯುವವರು ಒಂದು ಪೈಜಾಮ ಹಾಕಿಕೊಂಡು ಮೇಲೊಂದು ಅಂಗಿ ತೊಟ್ಟಿರುತ್ತಾರೆ. ಕಣ್ಣಿಗೆ ಕನ್ನಡಕ ಧರಿಸಿ ಎಂಟು ಜನ ವರ್ತುಲಾಕಾರವಾಗಿ ನಿಂತು ಕುಣಿಯುತ್ತಾರೆ., ಒಬ್ಬ ಪದ್ಯದ ಮೊದಲ ಸಾಲು ಹೇಳಿದರೆ ಉಳಿದವರು ಅದನ್ನೇ ಪುನರುಚ್ಚರಿಸುತ್ತಾರೆ.

**ಹಗಣ**

ಮೂಲತಃ ಜನಸಾಮಾನ್ಯರು ಅಥವಾ ಅವಿದ್ಯಾವಂತರು ಹಾಕುತ್ತಿದ್ದ ವೇಷವೇ

ಹಗಣ ಎಂದು ಡಾ. ಎಂ. ಚಿದಾನಂದಾಮೂರ್ತಿ ಅವರು ಬರೆದಿದ್ದಾರೆ. ವಿನೋದಕ್ಕಾಗಿ ಅಭಿನಯಿಸುವ ಸಂಕೀರ್ಣ ಜನಪದ ದೃಶ್ಯಗಳ ಮೆರವಣಿಗೆಯೆ "ಹಗಣ" ಎಂಬುದು. ಸುಪ್ರಸಿದ್ಧ ಜಾನಪದ ವಿದ್ವಾಂಸ ಡಾ. ಎಲ್. ಆರ್. ಹೆಗಡೆ ಅವರ ಅಭಿಪ್ರಾಯ "ಪದ್ಮಾರಾಧನೆ" ಗ್ರಂಥದಲ್ಲಿ ಹಗಣದ ಉಲ್ಲೇಖವಿದೆ. ಹಾಲಕ್ಕಿ ಹಗಣ ವಿಶಿಷ್ಟವಾದದ್ದು. ಹಗಣದ ಮೂಲೋದ್ದೇಶ ಮನರಂಜನೆ. ಜಾತ್ರೆ ಹಗಣ, ಸುಗ್ಗಿ ಹಗಣ, ವೀಳ್ಯ ನೀಡಿ ನಡೆಸುವ ಹಗಣ ಹೀಗೆ ಹಗಣದಲ್ಲಿ ಮೂರು ವಿಧ.

ಮದುವೆಯ ಮೂರನೇ ದಿನ, ಗೃಹ ಪ್ರವೇಶದ ದಿನ, ದೇವ ಕಾರ್ಯದ ದಿನ, ಹಗಣ ಏರ್ಪಡಿಸುತ್ತಾರೆ. ಗುಮಟೆ ಪದಗಳಿಂದ ಹಗಣ ಪ್ರಾರಂಭ. ಐದಕ್ಕೂ ಹೆಚ್ಚು ಜನ ಸಾಲಿನಲ್ಲಿ ನಿಂತು ಗುಮಟೆ ಬಾರಿಸುತ್ತಾರೆ. ಒಬ್ಬ ಪದ್ಯದ ಒಂದು ಸಾಲು ಹೇಳಿದ ಬಳಿಕ ಉಳಿದವರು ಅದನ್ನು ಪುನರುಚ್ಚರಿಸುತ್ತಾರೆ. ಮಧ್ಯೆ ಮಧ್ಯೆ ಹಾಸ್ಯದ ವೇಷಗಳು ಬರುತ್ತವೆ. ಅವು ಸಭಿಕರು ನಗುವಂತೆ ಹಾವ ಭಾವ ಪ್ರದರ್ಶಿಸುತ್ತವೆ. ಗುಮಟೆ ಪದಗಳ ನಡುವೆ ಅಡ್ಡವೇಷಗಳೂ ಬರುವುದುಂಟು. ಪೋಲೀಸರು ಕಳ್ಳನನ್ನು ಬಂಧಿಸುವ ದೃಶ್ಯ, ಕೋಡಂಗಿ, ಕುಡುಕ, ಸಿಂಹ, ಹುಲಿದೇವರು, ಗಾರ್ಡ್, ರೈಲು, ಬಂಡೆ, ಬಲೆ ಬೀಸುವ ಅಂಬಿಗ, ಮರಕಾಲಿನವರು. ಯಕ್ಷಗಾನ ವೇಷದವರೂ ಬಂದು ಹೋಗುವುದುಂಟು. ಒಮ್ಮೊಮ್ಮೆ ಪಾತ್ರಧಾರಿಗಳು ಸಂಭಾಷಣೆ ನಡೆಸುವುದೂ ಉಂಟು. ಹಗಣದಲ್ಲಿ ಬರುವ ಮೊದಲಿಕೆಯ ಸ್ತ್ರೀವರ್ಣನೆಯೂ ಇದೆ.

ಉದಾ:

ಉದ್ದುದ್ದ ಮೂಗ್ನವಲೇ
ಬೆಂಡೆಕಾಯ್ ಬೆರ್ಲವಲೇ
ಮೊಗೆಕಾಯ್ ಮೊಲಿಯವಲೇ
ಮೀನಿನ ಕಣ್ಣವಲೇ
ಬಾಲೆಕಂಬದ ತೊಡೆಯವಲೇ
ಕಲ್ಮರಗ್ಗಂತೆ ಕುಂಡ್ಯವಲೇ

ಹಾಲಕ್ಕಿ ಜನರ ಸಾಮಾಜಿಕ ಜೀವನ ರೂಪಿಸುವ ಪದ್ಯವೂ ಹಗಣದಲ್ಲಿ ಬರುತ್ತದೆ. ಹಗಣ ಬೆಳಗಿನವರೆಗೂ ನಡೆಯುವ ಮನರಂಜನಾ ಕಾರ್ಯಕ್ರಮ. ಕಣ್ಣಿಗೆ ಮನಮೋಹಕ ವೇಷ, ಇಂಪಾದ ಹಾಡು ಹಾಸ್ಯ ಹೀಗೆ ಅಬಾಲ ವೃದ್ಧರನ್ನು ರಂಜಿಸುವಂತಹುದು ಹಾಲಕ್ಕಿ ಹಗಣ.

**ಪುಗಡಿ ಕುಣಿತ**

ಹಾಲಕ್ಕಿಗಳು ಅಪರೂಪಕ್ಕೆ ಮಾಡುವ ಕುಣಿತವಿದು. ಕೈಯಲ್ಲಿ ಬರಿದಾದ ಕೊಡ ಹಿಡಿದು ಹೆಂಗಸರು ಹಾಡಿನ ಗತ್ತಿಗೆ ತಕ್ಕಂತೆ ಕುಣಿಯುವರು. ಕೊಡದ ಬಾಯಲ್ಲಿ "ಆಬುಸ ಎಂದು ಗಾಳಿಯಾಡುವುದು. ಖಾಲಿ ಕೊಡ ತುಂಬಲಿ ಎಂಬುದರ ಹಿನ್ನೆಲೆಯಲ್ಲಿ ಈ ಕುಣಿತವಿರಬಹುದು.

ತಾರ್ಲೆ

ಮಳಿ ಬಾರದಿದ್ದಾಗ ಹಾಲಕ್ಕಿ ಹೆಂಗಸರು ಹೇಳುವ ಹಾಡುಗಳಿವು. ಒಕ್ಕಲಗಿತ್ತಿಯರು ಎದುರು ಬದುರಾಗಿ ಕುಳಿತು ಹಾಡುತ್ತಾರೆ. ಏಳು ರಾತ್ರಿ ಏಳು ಹಗಲು ಸತತವಾಗಿ ಹಾಡಿದರೆ ಮಳೆ ಬರುತ್ತದೆಂಬುದು ಹಾಲಕ್ಕಿ ಒಕ್ಕಲಿಗರ ನಂಬಿಕೆ. ಒಂದೊಂದು ಹಾಡಿನ ಬಳಿಕವೂ "ತಾರ್ಲೆ" ಎಂದು- ಕೂಗುವರು. "ಮಳಿ ತಾರಲೇ" ಎಂಬುದೇ "ತಾರ್ಲೇ" ಎಂದಾಗಿರಬಹುದೆಂಬುದು ಡಾ. ಎನ್. ಆರ್. ನಾಯಕರ ಅಭಿಪ್ರಾಯ.

ಹಾಲಕ್ಕಿ ಒಕ್ಕಲಿಗರಲ್ಲಿ ಕಥೆ ಮತ್ತು ಬೈಠಕ್ಕುಗಳೂ ಇವೆ. ಸಂಗ್ಯಾಬಾಳ್ಯಾ, ಗಂಡೂಬರಮನ ನಾಟಕಗಳನ್ನೂ ಆಡುವುದುಂಟು ಕಥನ, ಕವನ, ಗಾದೆ, ಒಗಟು, ಜನಪದ ಕಥೆಗಳು. ಇವುಗಳ ಸಮೃದ್ಧ ಕಣಜವೇ ಹಾಲಕ್ಕಿ ಒಕ್ಕಲಿಗರಲ್ಲಿದೆ. ಮದುವೆ ಸಂದರ್ಭದಲ್ಲಿ ಬತ್ತ ಮೆರೆಯುವಾಗ, ಮಾರ್ಗಾಯಾಸ ಗೊತ್ತಾಗದಿರಲೆಂದು ಹೆಂಗಸರು ಹಾಡುತ್ತಾರೆ. ಹಾಲಕ್ಕಿ ಹೆಂಗಸರು "ಹಲಿ" ಬರೆಯುತ್ತಾರೆ. ಬೇಟೆ ಮತ್ತು ಕೋಳಿ ಅಂಕಗಳು ಇವರ ಮನರಂಜನೆಯಾಗಿದೆ.

ಹಾಲಕ್ಕಿ ಒಕ್ಕಲಿಗರು ಆರ್ಥಿಕವಾಗಿ ಇಂದೂ ಹಿಂದುಳಿದ ಜನಾಂಗವಾಗಿದೆ. ಅವರ ಬದುಕು ಬಡತನದ್ದಾದರೂ ಜಾನಪದ ಕಲೆಯಲ್ಲಿ ಅವರು ಸಿರಿವಂತರು. ಬೆಳಗಿನಿಂದ ಸಂಜೆಯವರೆಗೂ ಹಾಲಕ್ಕಿ ಸ್ತ್ರೀ ಪುರುಷರಿಬ್ಬರೂ ದುಡಿಯುವುದು. ಅವರು ಪ್ರಾಮಾಣಿಕರೂ, ನಂಬಿಕೆಗೆ ಅರ್ಹರಾದವರೂ ಆಗಿದ್ದಾರೆ. ಕೃಷಿ, ಪಶುಪಾಲನೆಯೊಂದಿಗೆ ಜೇನು ಸಂಗ್ರಹಣೆ ಇವರ ಹವ್ಯಾಸ. ಕರ್ನಾಟಕದ ಜನಪದ ಕಲೆ ಸಂಸ್ಕೃತಿಗೆ ಹಾಲಕ್ಕಿ ಒಕ್ಕಲಿಗರು ನೀಡಿರುವ ಕಾಣಿಕೆ ಅಮೂಲ್ಯವಾದದ್ದು.


೧. ತಿಮ್ಮಕ್ಕನ ಪದಗಳು — ಡಾ. ಎಲ್. ಆರ್. ಹೆಗಡೆ
೨. ಹಾಲಕ್ಕಿ ಗಾಯನ. — ಡಾ. ಎಲ್. ಜಿ. ಭಟ್ಟ
೩. ಕರ್ನಾಟಕ ಜನಪದ ಕಲೆಗಳು (ಸಂ) — ಗೊ.ರು. ಚನ್ನಬಸಪ್ಪ
೪. ಕರ್ನಾಟಕ ಕರಾವಳಿಯ ಜನಪದ ಗೀತೆಗಳು — ಡಾ. ಎಲ್ ಆರ್ ಹೆಗಡೆ
೫. ಹಾಲಕ್ಕಿ ಸುಗ್ಗಿ — ಡಾ. ಎಲ್. ಜಿ. ಭಟ್ಟ
೬. ಕಾರವಾರ ಜಿಲ್ಲೆಯ ಜನಪದ ಗೀತೆಗಳು — ಡಾ. ಎನ್. ಆರ್. ನಾಯಕ
೭. ಸುಗ್ಗಿಯ ಪದಗಳು — ಡಾ. ಎನ್. ಆರ್. ನಾಯಕ
೮. ಜನಪದ ಜೀವನ ಮತ್ತು ಕಲೆ — ಡಾ. ಎಲ್. ಆರ್. ಹೆಗ್ಗಡೆ
೯. ವಿಶ್ವ ಕನ್ನಡ ಸಂಪುಟ (೩)
೧೦. ಹಾಲಕ್ಕಿ ಜನಪದ ಜೀವನ ಸಾಹಿತ್ಯ — ಡಾ. ಎಲ್. ಜಿ. ಭಟ್ಟ
೧೧. ಪಡುವಣ ಅಜನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಾರವಾರ.
೧೨. ವೈಜಯಂತಿ ಸಂಪುಟ (೩) — ಸಂಪಾದಕ: ಜಿ. ಎಸ್. ಭಟ್ಟ
೧೩. ಜಾನಪದ ಸಂಪುಟ (೫) ಕರ್ನಾಟಕ ಜಾನಪದ ಪರಿಷತ್ತು.
೧೪. ಉತ್ತರ ಕನ್ನಡ ಜಿಲ್ಲೆ ಗೆಜೆಟರ್. ೧೯೮೫.


* * * * *

# ಗೊಂಡರು

ಎನ್ ಹುಚ್ಚಪ್ಪ ಮಾಸ್ತರ್

ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗಗಳಲ್ಲಿ "ಗೊಂಡರು" ತುಂಬಾ ಪ್ರಮುಖವಾದ ಜನಾಂಗ. ನವನಾಗರೀಕತೆಯ ಯಾವ ಸೋಂಕು ಇಲ್ಲದೆ ಸಹ್ಯಾದ್ರಿ ಶ್ರೇಣಿಗಳ ತಪ್ಪಲಿನಲ್ಲಿ ಈ ಜನಾಂಗದವರು ವಾಸವಾಗಿದ್ದಾರೆ. ಗುಡ್ಡಬೆಟ್ಟಗಳು, ಹಾಗೂ ದಟ್ಟ ಕಾಡುಗಳ ಅಂಚಿನಲ್ಲಿ ಇವರ ಬಿಡಾರ. ಇವರು ನಗರದ ನಯ ನಾಜೂಕುಗಳ ಅರಿವಿಲ್ಲದ ಮುಗ್ಧರು. ಅತ್ಯಂತ ಪ್ರಾಮಾಣಿಕ ಜನಾಂಗ.

ಗೊಂಡರು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಹಲ್ಯಾಣಿ, ಮಾರುಕೇರಿ, ಕುಂಟವಾಣಿ, ಕೋಟಗಂಡ, ಹಿದ್ಲು, ಮೂಡ್ಲುಕೇರಿ, ಸಬ್ಬತ್ತಿ, ತಲಂದ, ತಲಗೋಡು, ಜಾಲಿ, ಕಿತ್ತರಿ, ತೆಂಗಿನಗುಂಡಿ, ಹೆಗ್ಗು ಗುಳಿಮೆ, ಹದ್ಲೂರು, ಹೇರೂರು, ಬೆಳಕೆ ಅಡಿಬಾರು, ಓಣಿಬಾಗಿಲು, ಕ್ಯಾರತೂರು, ಕೊಪ್ಪ, ಶಿರಾಲಿ, ಮುಂತಾದ ಗ್ರಾಮಗಳಲ್ಲಿ ತುಂಬಾ ಹೆಚ್ಚಾಗಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ನಾಗದಳ್ಳಿ ಆರ್ಕಳ, ಹೆಗ್ಗಿನ ಮಕ್ಕಿ, ದೇವಗಾರು, ತೋಟ, ಸುಂಕದ ಮನೆಗಳಲ್ಲಿ ಸಾಧಾರಣವಾಗಿ ನೆಲಸಿದ್ದಾರೆ. ಹೊನ್ನಾವರ ತಾಲ್ಲೂಕಿನ ದಕ್ಷಿಣ ಭಾಗದ ಕೆಲವು ಗ್ರಾಮಗಳಲ್ಲೂ ಇದ್ದಾರೆ.

ಇವರು ಮೂಲತಃ ಕೃಷಿಕರು. ವ್ಯವಸಾಯವನ್ನೇ ಮೂಲ ಕಸುಬನ್ನಾಗಿ ಮಾಡಿಕೊಂಡಿರುವ ಇವರು ನಾವು "ಭೂಮಿಪುತ್ರರು" ಎಂದು ಹೇಳಿಕೊಳ್ಳುತ್ತಾರೆ. ಗೊಂಡ ಎಂಬ ಶಬ್ದದ ಮೂಲ ಗಾವುಂಡ, ಗೌಡ ಎಂಬ ಶಬ್ದದಿಂದ ಬಂದಿದೆ ಎಂದು ಹೇಳುತ್ತಾರೆ. ತೆಲುಗು ಭಾಷೆಯಲ್ಲಿ 'ಕೊಂಡ' ಎಂಬ ಪದಕ್ಕೆ ಬೆಟ್ಟ ಗುಡ್ಡ ಎಂಬ ಅರ್ಥಗಳಿವೆ. ಅದ್ದರಿಂದ ಗೊಂಡರು ಎಂದರೆ ಬೆಟ್ಟದ ಜನ, ಗುಡ್ಡಗಾಡಿನ ಜನ ಎಂದು ಕರೆಯಬಹುದು. ಗೊಂಡರ ಮೂಲ ನೆಲೆ ಆಂಧ್ರಪ್ರದೇಶವಾಗುತ್ತದೆ. ಸಂಸ್ಕೃತದಲ್ಲಿ 'ಗೊಂಡ' ಎಂಬ ಶಬ್ದಕ್ಕೆ 'ಪಟ್ಟ' ಎಂಬ ಅರ್ಥವಿದೆ. ಗೊಂಡಾರಣ್ಯ ಎಂಬ ಪದವನ್ನು ಗಮನಿಸಬಹುದು. ದಟ್ಟವಾದ ಅರಣ್ಯದಿಂದ ಬಂದ ಜನ ಎಂದೂ ಹೇಳಬಹುದು.

ಗೊಂಡರು ಆಂಧ್ರದ ಮೂಲದವರೆಂದು ಪ್ರತೀತಿ, ಒಂದು ಕಾಲದಲ್ಲಿ ಆದಿಲಾಬಾದ್‌ನ ಗೊಂಡರ ಗುಂಪಿಗೆ ಸೇರಿ, ಇವರು ರಾಜ್ಯಬಾರ ಮಾಡಿರಬಹುದು ಎಂದು ತಿಳಿಯುತ್ತದೆ. ಆದ್ದರಿಂದಲೇ ಆದಿಲಾಬಾದ್‌ನ ಗೊಂಡರಿಗೆ ರಾಜಗೊಂಡರು ಎಂದು ಕರೆಯಲಾಗುತ್ತದೆ. ಇಲ್ಲಿನ ಗೊಂಡರು ಕೂಡ ರಾಜಗೊಂಡರೆಂದೇ ಹೆಸರು ಪಡೆದಿದ್ದವರು. ಮರಾಠರ ಮತ್ತು ಮೊಗಲರ ಆಕ್ರಮಣಕ್ಕೆ ತುತ್ತಾದ ಇವರು ಆಂಧ್ರದಿಂದ ಭಟ್ಕಳದ ಕಾಡು ಪ್ರದೇಶಗಳಿಗೆ ಜಟ್ಟಿಗರ ಜೊತೆಯಲ್ಲಿ ಬಂದಿರಬಹುದು ಎಂದು ಊಹಿಸಲು ಆಧಾರಗಳು ದೊರೆಯುತ್ತವೆ. ಒಂದು ಕಾಲದಲ್ಲಿ ರಾಜಗೊಂಡರೆಂದು ಪ್ರಸಿದ್ಧವಾದ ಇವರು ಭಟ್ಕಳದ ಕಾಡು ಪ್ರದೇಶಕ್ಕೆ ವಲಸೆ ಬಂದು ಗೊಂಡರಾದರು.

ಜನಗಣತಿಯ ಪ್ರಕಾರ ಗೊಂಡರ ಸಂಖ್ಯೆ ೬೨೬೦ ಮಾತ್ರ ಇದೆ. ಗೊಂಡರು ವಾಸಿಸುವ ಪ್ರದೇಶಗಳನ್ನು ಎರಡು ಸೀಮೆಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಭಟ್ಕಳ ಹತ್ತಿರ ಶಿರಾಲಿಯ ಬಳಿ ಹರಿಯುತ್ತಿರುವ ವೆಂಕಟಾಪುರ ನದಿಯ ಉತ್ತರ ದಿಕ್ಕಿನಲ್ಲಿರುವ ಹಳ್ಳಿಗಳ ಗೊಂಡರು ಒಂದು ಸೀಮೆಯವರಾದರೆ ಆ ನದಿಯ ದಕ್ಷಿಣಕ್ಕಿರುವ ಗೊಂಡರು ಮತ್ತೊಂದು ಸೀಮೆಯವರು. ಆಯಾಯ ಸೀಮೆಗೆ ''ಸೀಮೆ ಗೊಂಡ''ನೆಂಬ ಮುಖ್ಯಸ್ಥನಿರುತ್ತಾನೆ. ವೆಂಕಟಾಪುರ ನದಿಯ ದಕ್ಷಿಣ ಭಾಗದ ಗೊಂಡರಿಗೆ 'ಮಾರುಕೇರಿ'ಯಲ್ಲಿರುವವನು ಸೀಮೆಗೊಂಡನಾದರೆ ಉತ್ತರ ಭಾಗದವರಿಗೆ ಹೆಗ್ಗದ್ದೆಯಲ್ಲಿ ಸೀಮೆಗೊಂಡನಿದ್ದಾನೆ. ಪ್ರತಿ ಊರಿನಲ್ಲಿಯೂ ಒಬ್ಬ ಮುಖ್ಯ ಗೊಂಡನಿರುತ್ತಾನೆ. ಈತ ಕೆಲವು ಪರಿಮಿತ ಅಧಿಕಾರ ಹೊಂದಿದ್ದು ಸೀಮೆಗೊಂಡನಿಗೆ ಅಧೀನನಾಗಿ ಕೆಲಸ ಮಾಡುತ್ತಾನೆ. ಏಳು ಊರು ಗೊಂಡರ ಮೇಲೆ ಒಬ್ಬ ಏಳೂರಗೊಂಡನಿರುತ್ತಾನೆ. ಸೀಮೆಯ ಗೊಂಡ ಅರಸನಿದ್ದನಂತೆ. ಗೊಂಡರಲ್ಲಿ ಬರುವ ಸಾಮಾಜಿಕ ವಿವಾದಗಳನ್ನು ತೀರ್ಮಾನಿಸಿ ನ್ಯಾಯ ನಿರ್ಣಯ ಮಾಡುವ ಅಧಿಕಾರ ಸೀಮೆಗೊಂಡನಿಗಿರುತ್ತದೆ. ಜಾತಿ ನಿಯಮಗಳನ್ನು ಮುರಿದವರಿಗೆ 'ಕಟ್ಟು' (ಬಹಿಷ್ಕಾರ) ದಂಡ ವಿಧಿಸುವ ಅಧಿಕಾರ ಸೀಮೆಗೊಂಡನಿಗಿರುತ್ತದೆ.

ಗೊಂಡರಲ್ಲಿ ವಿಧಿ, ನಿಷೇಧಗಳು ಹಲವಾರಿವೆ. ಗೊಂಡರು ಸೈಕಲ್ ಹತ್ತಬಾರದು, ಕ್ರಾಪ್ ಬಿಡಬಾರದು, ಕಳ್ಳು, ಸರಾಯಿ ಮಾದಕಪೇಯಗಳನ್ನು ಸೇವಿಸಬಾರದು, ಹಂಚು, ಸಿಮೆಂಟು, ಸುಣ್ಣವನ್ನು ತಲೆಯ ಮೇಲೆ ಹೊರಬಾರದು. ಮೇಲ್ಜಾತಿಯ (ಬ್ರಾಹ್ಮಣರು) ವರ ಬಚ್ಚಲು ಮನೆ ಹೊರಿಸಬಾರದು, (ಅಡಿಗೆ, ಕಬ್ಬಿನ ಸೋಕಿಗೆ ಹಚ್ಚಬಾರದು) ಮೇಲ್ಜಾತಿಯವರ ಮನೆಗಳಲ್ಲಿ ಸತ್ತ ಜಾನುವಾರುಗಳನ್ನು ತೆಗೆಯಬಾರದು. ಇತರೆ ಜನಾಂಗದವರ ಮನೆಗಳಲ್ಲಿ ಯಾರಾದರೂ ಸತ್ತರೆ ಅವರ ಮನೆಯ ದಣಪೆಯೊಳಗೆ ಹೋಗಬಾರದು ಬೇರೆಯವರ ಮನೆಯಲ್ಲಿ ನೆಲವನ್ನು ಸಗಣಿಯಿಂದ ಸಾರಿಸಬಾರದು. ಪಾತ್ರೆ ತೊಳೆಯಬಾರದು. ಕಸ ಗುಡಿಸಬಾರದು. ಹೆಂಗಸರು ರವಿಕೆಯನ್ನು ತೊಡಬಾರದು. ಇತ್ಯಾದಿ ವಿಧಿ ನಿಷೇಧಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಈ ರೀತಿಯ ಕಟ್ಟು ಕಟ್ಟಳೆಗಳನ್ನು ತಮ್ಮ ಜನಾಂಗದ ಮೇಲೆ ಹೇರಿಕೊಂಡಿರುವುದರಿಂದ ಈ ಜನಾಂಗದವರು ತಮ್ಮ ಸ್ವಾಭಿಮಾನವನ್ನು ಉಳಿಸಿಕೊಂಡು ಸ್ವಾವಲಂಬನೆಯ ಜೀವನ ನಡೆಸಲು ಅನುಕೂಲವಾಗಿವೆ ಎಂದು ಹೇಳಬಹುದು.

ಇತ್ತೀಚೆಗೆ ಗೊಂಡರು ಕೆಲವು ನಿಯಮಗಳನ್ನು ಸಡಿಲಿಸಿದ್ದಾರೆ. ಹಳ್ಳಿಯಲ್ಲಿ ಸೈಕಲ್ ತೀರ ಅಗತ್ಯವಾದ ವಾಹನವಾದ್ದರಿಂದ ಕೆಲವರು ಉಪಯೋಗಿಸುತ್ತಿದ್ದಾರೆ. ಕ್ರಾಪ್ ಬಿಡುವುದನ್ನು ಕಲಿತಿದ್ದಾರೆ, ಗೊಂಡರು ತಾವು ಅತ್ಯಂತ ಶ್ರೇಷ್ಠ ಜಾತಿಯವರು ಎಂಬ ನಂಬಿಕೆಯನ್ನು ಹೊಂದಿದ್ದಾರೆ.

**ಗೊಂಡರ ಕಾಲಗಣನೆ ಮತ್ತು ಅಳತೆಯ ಮಾಪನಗಳು**

ಗೊಂಡರ ಕ್ಯಾಲೆಂಡರ್ ಪ್ರತ್ಯೇಕವಾಗಿದೆ. ಅವರ ವರ್ಷ ಪ್ರಾರಂಭವಾಗುವುದು ದೀಪಾವಳಿಯಲ್ಲಿ, ನೀರನ್ನು ಎರೆದುಕೊಳ್ಳುವ ದಿನದಿಂದ. ದೀಪಾವಳಿಯ ಹಿಂದಿನ ''ಕೊಡಿ''

ತಿಂಗಳು ಮುಗಿಯುವಾಗ ಅವರ ಒಂದು ವರ್ಷ ಮುಗಿಯುತ್ತದೆ. ಅವರ ತಿಂಗಳುಗಳಿಗೆ ಮೂವತ್ತು ದಿವಸಗಳು, ತಿಂಗಳುಗಳ ಹೆಸರುಗಳು ಈ ರೀತಿ ಇವೆ. ದೀವಳ್ಳಿ (ದೀಪಾವಳಿ) ತಿಂಗಳು, ಹಂಚೋಳ ತಿಂಗಳು, ಭಾರತ ತಿಂಗಳು, ಹಿರಿ ಸುಗ್ಗಿ ತಿಂಗಳು, ಕಿರಿಸುಗ್ಗಿ ತಿಂಗಳು, ಹಗ್ಲು ತಿಂಗಳು, ಬ್ಯಾಸಿ ತಿಂಗಳು, ಕಾರು ತಿಂಗಳು, ಆಷಾಡಿ ತಿಂಗಳು, ಶೋಣೆ ತಿಂಗಳು, ಮಾಘ ತಿಂಗಳು, ಕೊಡಿ ತಿಂಗಳು.

ಗೊಂಡರು ಧಾನ್ಯಗಳನ್ನು ಅಳತೆ ಮಾಡುವಾಗ ಇತರೆಯವರು ಬಳಸುವ ಕೆ. ಜಿ. ಕಲ್ಲುಗಳನ್ನು ಬಳಸುವುದಿಲ್ಲ. ಅವರವೇ ಆದ ಅಳತೆ ಮಾಪನಗಳಿವೆ, ಇವರು ಅಳೆಯುವ ಸಾಧನಗಳಿಗೆ 'ಸಿದ್ದೆ', 'ಹಾನೆ', 'ಕೊಳಗ' ಎಂದು ಕರೆಯುತ್ತಾರೆ. ಇವರಿಗೆ ಲೀಟರಿನ ಲೆಕ್ಕವಾಗಲಿ, ನಯ ಪೈಸೆಯ ಲೆಕ್ಕವಾಗಲಿ ತಿಳಿಯುವುದಿಲ್ಲ. ಹಾಲನ್ನು ಸಿದ್ದೆ, ಅಳ್ಳದಲ್ಲಿ ಅಳತೆ ಮಾಡುತ್ತಾರೆ. ಹಣವನ್ನು ಪಾವಲಿಗಳ ಲೆಕ್ಕದಲ್ಲಿ ಎಣಿಸುತ್ತಾರೆ. ಒಂದು ರೂಪಾಯಿಗೆ ನಾಲ್ಕು ಪಾವಲಿಗಳೆಂದು ಹೇಳುತ್ತಾರೆ. ಅವರ ಅಳತೆ ಮಾಪನದ ಕೋಷ್ಟಕ ಈ ಕೆಳಕಂಡಂತೆ ಇದೆ.

| | | |
|---|---|---|
| ೪ ಸಿದ್ದೆ | - | ೧ ಹಾನೆ ೧ ಹಾನೆ - ೧ ಕೆ. ಜಿ, (ಸುಮಾರು) |
| ೩ ಹಾನೆ | - | ೧ ಕೊಳಗ |
| ೪೦ ಹಾನೆ | - | ೧ ಮುಡಿ |
| ೬೦ ಹಾನೆ | - | ೧ ಚೀಲ (೭೦ ಕೆ. ಜಿ. ಇರುತ್ತದೆ) |
| ೩೦ ಹಾನೆ | - | ೧ ಮಾನೆ ಒಂದು ಮಾನಿಗೆ -೩೩ ಕೆ. ಜಿ. ಭತ್ತ |
| | | ಒಂದು ಮಾನಿಗೆ -೪೨ ಕೆ. ಜಿ. ಅಕ್ಕಿ |
| ೧ ಸೇರು | - | ೧ ಸಿದ್ದೆ |
| ೧/೨ ಸೇರು | - | ಅಳ್ಳ |
| ೧/೪ ಸೇರು | - | ೧ ಸೊಲ್ಲಿಗೆ |

**ಉಡುಗೆ -ತೊಡುಗೆ**

ಗೊಂಡರ ಬಣ್ಣ ಎಣ್ಣೆಕಪ್ಪು, ಮೊಳಕಾಲ ಮೇಲೆ ಪಂಚೆ, ತಲೆಗೊಂದು ಯಲವಸ್ತ್ರ. ಮೈಗೊಂದು ನಿಲವಂಗಿ ಧರಿಸುತ್ತಾರೆ. ಹೊರ ಹೋಗುವಾಗ ಬಾಕಿ ಬಣ್ಣದ ಕ್ಲೋಸ್ ಕಾಲರ್‌ನ ಕೋಟು ತೊಡುತ್ತಾರೆ. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ಬರಿ ಲಂಗೋಟಿಯಲ್ಲಿರುತ್ತಾರೆ. ಒಮ್ಮೊಮ್ಮೆ ಕಪ್ಪು ಬಣ್ಣದ ಕೋಟು ಹಾಕಿಕೊಳ್ಳುತ್ತಾರೆ. ಇದಕ್ಕೆ "ಖಂಡಿ ಅಂಗಿ" ಅನ್ನುತ್ತಾರೆ. ಮುಂಡು ಅನ್ನುತ್ತಾರೆ. ಗೊಂಡರಲ್ಲಿ ಎಲೆ ಅಡಿಕೆ ಜಗಿಯದವರು ಅಪರೂಪ. ಎಲ್ಲರ ಹತ್ತಿರ ಎಲೆ ಅಡಿಕೆ ಚೀಲ ಇರುತ್ತದೆ. ಇದರಲ್ಲಿ ವೀಳಿದೆಲೆ, ಸಿಪ್ಪೆ ತೆಗೆಯುವ ಹಣ್ಣಡಿಕೆ ಸುಣ್ಣದ ಪಬ್ಬಿ, ತಂಬಾಕು, ಮತ್ತು ಅಡಿಕೆ ಸುಲಿಯಲು

ಒಂದು ಚಿಕ್ಕ ಚಾಕು ಇರುತ್ತದೆ. ಕಿವಿಗೆ ಗಾಲಿವಂಟಿಯನ್ನು ಕೈಗೆ ಬೆಳ್ಳಿಯ ಬಳೆಯನ್ನು ಹಾಕಿಕೊಳ್ಳುತ್ತಾರೆ. ಇವರು ತಲೆ ಬೋಳಿಸಿ, ಜುಟ್ಟು ಬಿಡುತ್ತಾರೆ ಇತ್ತೀಚಿನ ಯುವಕರು ಕ್ರಾಪ್ ಮಾಡಿಸಿಕೊಳ್ಳುತ್ತಿದ್ದಾರೆ.

ಹೆಂಗಸರು ರವಿಕೆ ತೊಡುವುದು ಇವರಲ್ಲಿ ನಿಷಿದ್ಧ, ಈಗೀಗ ಯುವತಿಯರು ಅದನ್ನು ಮೀರುತ್ತಿದ್ದಾರೆ. ಹಿರಿಯ ಗೊಂಡತಿಯರು ಕೆಂಪು ಮತ್ತು ನೀಲಿ ಬಣ್ಣದ ಕಂಬಿ ಸೀರೆಯನ್ನು ಉಟ್ಟು ಸೆರಗನ್ನು ಕೊರಳಲ್ಲಿ "ಕೊಳ್‌ನುಗ್ಲು" ಎಂಬ ದಾರಕ್ಕೆ ತ್ರಿಕೋನಾಕಾರವಾಗಿ ಸಿಕ್ಕಿಸಿ ಎದೆಯ ಭಾಗವನ್ನು ಮುಚ್ಚಿಕೊಳ್ಳುತ್ತಾರೆ. ಹೆಂಗಸರು ಜಡೆ ಹಾಕದೆ ವಿಶಿಷ್ಟವಾದ ಓರೆ ತುರುಬು ಕಟ್ಟುತ್ತಾರೆ. ಕೈಗೆ ಗಾಜಿನ ಬಳೆ ಮತ್ತು ಕೈಕಡಗ ಕಾಲಿಗೆ ಕಾಲುಂಗರ ಮತ್ತು ಕಾಲ್ಕಡಗವನ್ನು ಕಿವಿಗೆ ಭುಗುಡಿ ಸರಪಳಿ, ಗಾಲಿವಾಲೆ ಬುರುಬು ಹಾಕಿರುತ್ತಾರೆ. ಕೊರಳಿಗೆ ಮದುವೆಯಾದವರು ಕೊಳ್‌ನೂಗ್ಲು ಎಂಬ ಕರಿದಾರವನ್ನು ಇಲ್ಲವೆ ದಾರೆ ಗುಂಡು ಎಂಬ ಕರಿಮಣಿ ಸರವನ್ನು ಧರಿಸುತ್ತಾರೆ. ಕರಿಮಣಿ ಸರದಲ್ಲಿ ತಾಳಿಯಿಲ್ಲದೆ ಮಣಿಗಳು ಮಾತ್ರ ಇರುತ್ತವೆ. ಹೆಂಗಸರು ಚಪ್ಪಲಿ ಹಾಕುವುದು ಅವರಲ್ಲಿ ನಿಷೇದ ಗಂಡಸರೂ ಚಪ್ಪಲಿ ತೊಡುವುದು ತುಂಬಾ ಅಪರೂಪ.

**ಮನೆ ಕಟ್ಟುವ ಕ್ರಮ**

ತಮ್ಮ ತಮ್ಮ ಹೊಲ-ಗದ್ದೆಗಳ ಮಧ್ಯೆ ಗೊಂಡರ ಮನೆಗಳಿರುತ್ತವೆ. ಮಣ್ಣಿನ ಗೋಡೆ ಹಾಕಿ ಭತ್ತದ ಹುಲ್ಲು ಹೊದಿಸಿರುತ್ತಾರೆ. ಹುಲ್ಲಿನ ಹೊದಿಗೆಯ ಮನೆ ಮಳೆಗಾಲದಲ್ಲಿ ಬೆಚ್ಚಗಿದ್ದು ಬೇಸಿಗೆಯಲ್ಲಿ ತಂಪಾಗಿರುತ್ತವೆ ಎಂಬುದು ಕಾರಣವಾಗಿದೆ. ಮನೆಯ ಮೇಲ್ಭಾಗದ ಹುಲ್ಲನ್ನು ಪ್ರತಿವರ್ಷ ಬದಲಾಯಿಸಿ ಹೊಸ ಹುಲ್ಲು ಹಚ್ಚುತ್ತಾರೆ.

ಸರ್ಕಾರದಿಂದ ಅಲ್ಲಲ್ಲಿ ಜನತಾ ಮನೆಗಳು ಎದ್ದಿವೆ. ಆದರೆ ಜನತಾ ಮನೆಯ ವಿಸ್ತೀರ್ಣ ಸಾಕಾಗದೆಯಿರುವುದರಿಂದ ಮೂಲ ಮನೆಯ ಸುತ್ತಲು ಕಡಿಮಾಡಿ ತೆಗೆದುಕೊಂಡು ಹುಲ್ಲು ಹೊಚ್ಚಿರುತ್ತಾರೆ.

ಮನೆಯ ಮುಂಭಾಗದಲ್ಲಿ ವಿಶಾಲವಾದ ಕಣವಿದ್ದು. ಅದರಲ್ಲಿ ಮೇಟಿಕಂಬ ಮತ್ತು ತುಳಸಿಕಟ್ಟೆ ಇರುತ್ತದೆ. ಮನೆಯ ಹೊರಬಾಗಿಲ ಬಲಬದಿಯಲ್ಲಿ ಜಗಲಿ, ಎಡಭಾಗದಲ್ಲಿ ಕೋಳಿಗೂಡು ಇರುತ್ತದೆ. ಮನೆಯ ಒಳಾಂಗಣವನ್ನು ಮೂರು ಭಾಗಗಳನ್ನಾಗಿ ಮಾಡಿಕೊಂಡಿರುತ್ತಾರೆ. ಮೊದಲಿಗೆ ಸಿಗುವುದು ಚೌಕಿ. ಇದು ಗೊಂಡರ ಸಂಪ್ರದಾಯ ಕೆಡದಂತೆ ರಕ್ಷಿಸುವಂತಹ ಕೋಣೆ. ಈ ಕೋಣೆಯಲ್ಲಿ ಯಾವ ಮಂಗಳ ಕಾರ್ಯವನ್ನು ಮಾಡುವುದಿಲ್ಲ. ಚೌಕಿಯ ಒಂದು ಮೂಲೆಯಲ್ಲಿ ಒಂದು ಒಲೆಯಿರುತ್ತದೆ. ಅದಕ್ಕೆ ಅವರು "ಗೌಲು ಒಲೆ" ಎನ್ನುತ್ತಾರೆ. ಅದರಲ್ಲಿ ಮೀನು, ಮಾಂಸ ಮೊದಲಾದ ಗವಲು ಪದಾರ್ಥಗಳನ್ನು ಬೇಯಿಸುತ್ತಾರೆ. ಅದಕ್ಕಾಗಿಯೇ ಪ್ರತ್ಯೇಕವಾದ ಮಡಕೆ, ಸೌಟು, ತಟ್ಟೆಗಳಿರುತ್ತವೆ. ಮಾಂಸಾಹಾರಿ ಊಟವನ್ನು ಚೌರಿಯಲ್ಲಿ ಮಾತ್ರ ಮಾಡುತ್ತಾರೆ. ಚೌರಿಯ ಮತ್ತೊಂದು ಮೂಲೆಯಲ್ಲಿ, ಮರದ ಅಗಲ ಪಚ್ಚಿಗಳಿಂದ ಮಾಡಿದ "ಹಡಿಮಂಚ" ಇರುತ್ತದೆ. ಇದು ಗೊಂಡರ ಮನೆಯ "ಗೌರವದ" ವಸ್ತು. ಮನೆಯ ಯಜಮಾನ ಅದರ

ಮೇಲೆ ಮಲಗುತ್ತಾನೆ. ಮದುವೆಯಾದರೆ ಗಂಡು ಹೆಣ್ಣುಗಳನ್ನು ಆದ ಮೇಲೆ ಕೂರಿಸಿ ಧಾರೆ ಎರೆಯುತ್ತಾರೆ. ಸುಗ್ಗಿಯ ಸಂದರ್ಭದಲ್ಲಿ ಅದನ್ನು ಭತ್ತ ಬಡಿಯಲು ಬಳಸುತ್ತಾರೆ. ಹಡಿಮಂಚವಿಲ್ಲದ ಗೊಂಡರ ಮನೆಯೇ ಇಲ್ಲ.

ಚೌರಿಯನ್ನು ದಾಟಿ ಹೋದಾಗ ಸಿಗುವ ಕೋಣೆ ಗೊಂಡರ ಪವಿತ್ರ ಕೋಣೆ, ಇದನ್ನು ಊಟದ ಕೋಣೆ, ದೇವರ ಕೋಣೆ ಎಂದೆಲ್ಲಾ ಹೇಳುತ್ತಾರೆ. ಅಲ್ಲಿ ಮನೆಯ ಛಾವಣಿಗೆ ಒಡಿದಿರುವ ಪ್ರಮುಖ ಕಂಬವಿರುತ್ತದೆ. ಅದಕ್ಕೆ ಅವರು "ಮುಡಿ ಕಂಬ" ಎನ್ನುತ್ತಾರೆ. ಆ ಕಂಬದ ಎದಿರು ಅಕ್ಕಿಯ ಮುಡಿ ಇಟ್ಟಿರುತ್ತಾರೆ. ಕಂಬದ ಪಕ್ಕದ ಗೋಡೆಯಲ್ಲಿ ದೇವರ ಪಟಗಳಿರುತ್ತವೆ. ಈ ಕೋಣೆಯಲ್ಲಿ ಮಾಂಸದ ಊಟವನ್ನು ಮಾಡುವುದಿಲ್ಲ. ಮೂರನೇ ಕೋಣೆ, ಅಡಿಗೆ ಕೋಣೆ. ಅಡಿಗೆ ಕೋಣೆಯಲ್ಲಿ ಮಣ್ಣಿನಿಂದ ಹಾಕಿದ ಒಲೆಗಳಿದ್ದು ಶಾಖಾಹಾರಿ ಅಡಿಗೆಯನ್ನು ಮಾತ್ರ ಇಲ್ಲಿ ಮಾಡುತ್ತಾರೆ. ಮಡಕೆಗಳು, ಪಾತ್ರೆಗಳನ್ನು ಅಡಿಗೆ ಮನೆಯಲ್ಲಿ ಇಟ್ಟುಕೊಂಡಿರುತ್ತಾರೆ.

## ಉದ್ಯೋಗ

ಗೊಂಡರ ಮುಖ್ಯವಾದ ಉದ್ಯೋಗ ವ್ಯವಸಾಯ ಮತ್ತು ಪಶುಪಾಲನೆ ಜಮೀನು ಇಲ್ಲದ ಗೊಂಡರು ತುಂಬಾ ಕಡಿಮೆ. ಪ್ರತಿಯೊಬ್ಬರಿಗೂ ಸ್ವಲ್ಪವಾದರೂ ಜಮೀನು ಇದ್ದೇ ಇರುತ್ತದೆ. ಜಮೀನು ಇಲ್ಲದೆ ಇರುವವರು ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಇವರು ತಮ್ಮ ಜಮೀನಿನಲ್ಲಿ ಮುಖ್ಯವಾಗಿ ಭತ್ತ ಅಡಿಕೆ ತೆಂಗು, ಉದ್ದು, ಹೆಸರು, ಶೇಂಗಾ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಕೆಲವರು ಅಡಿಕೆ ತೋಟ, ತೆಂಗಿನ ತೋಟ ಹೊಂದಿದ್ದು, ತುಂಬಾ ಅನುಕೂಲ ಸ್ಥಿತಿಯಲ್ಲಿದ್ದಾರೆ. ಕಾಡಿನಿಂದ ಬೆತ್ತವನ್ನು ತಂದು ಸೀಳಿ, ಬುಟ್ಟಿ, ಕಣಜ, ಗೊಬ್ಬರ ಹೊರುವ ಮಂಕರಿ, ತಟ್ಟಿಗಳನ್ನು ತುಂಬಾ ಕಲಾತ್ಮಕವಾಗಿ ಮಾಡುತ್ತಾರೆ. ಬೆಟ್ಟದಿಂದ ಸೌದೆ ಸೊಪ್ಪು ತರಗೆಲೆ, ಕರಡ ಮುಂತಾದುವುಗಳನ್ನು ಕೊಟ್ಟಿಗೆಗೆ ಹಾಕಿ ಗೊಬ್ಬರ ತಯಾರಿಸಲು ತಂದುಕೊಳ್ಳುತ್ತಾರೆ. ಮಳೆಯಿಂದ ರಕ್ಷಣೆ ಪಡೆಯಲು ತಾಳಿ ಮರದ ಎಲೆಗಳಿಂದ ಗೊರಬುಗಳನ್ನು ತಯಾರಿಸುತ್ತಾರೆ. ಮಹಿಳೆಯರು ಮುಂಡಿಗೆ ಹುಲ್ಲಿನಿಂದ ಅಂದವಾದ ಚಾಪೆಗಳನ್ನು ಹೆಣೆಯುತ್ತಾರೆ.

ಗೊಂಡರು ಸುಗ್ಗಿಯ ನಂತರ ಭತ್ತವನ್ನು ಕಣದಲ್ಲಿಯೇ ಭತ್ತದ ಹುಲ್ಲಿನಿಂದ ದೊಡ್ಡದಾದ ಹೆಮ್ಮುಡಿಯನ್ನು ಕಟ್ಟಿ ಇಡುತ್ತಾರೆ. ಒಂದು ಮುಡಿಯಲ್ಲಿ ಇಪ್ಪತ್ತು ಕ್ವಿಂಟಾಲ್ ಭತ್ತವನ್ನು ತುಂಬಬಹುದು. ಮಳೆಗಾಲ ಪ್ರಾರಂಭವಾಗುವಾಗ ಕಿತ್ತಲೆ ಹಣ್ಣಿನಾಕಾರದಲ್ಲಿ ಅಕ್ಕಿ ಮುಡಿಯನ್ನು ಕಟ್ಟಿ ಅದರಲ್ಲಿ ಅಕ್ಕಿ ಇಡುತ್ತಾರೆ. ದಿನನಿತ್ಯದ ಬಳಕೆಯ ಅಕ್ಕಿಯನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಕೊಂಡಿರುತ್ತಾರೆ. ಈ ಪೆಟ್ಟಿಗೆಯಲ್ಲಿ ಅವರ ಮಾಪನಗಳಾದ ಕೊಳಗ, ಹಾನೆ, ಸಿದ್ದೆ, ಅಳ್ಳಗಳಿರುತ್ತವೆ.

ಭತ್ತದ ಹೆಮ್ಮಡಿ ಮತ್ತು ಅಕ್ಕಿ ಮುಡಿಯನ್ನು ಕಟ್ಟುವ ವಿಧಾನ ಗೊಂಡರ ಕಲಾಭಿಜ್ಞತೆಗೆ ಸಾಕ್ಷಿಯಾಗಿವೆ. ಈ ಮುಡಿಗಳ ರಚನೆ, ಜನಪದ ಕಲಾಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ಎಂದು ಹೇಳಬಹುದು.

ಗೊಂಡರಲ್ಲಿ ವಿದ್ಯಾವಂತರು ತುಂಬಾ ಕಡಿಮೆ ಇತ್ತೀಚಿನ ದಿವಸಗಳಲ್ಲಿ ಗೊಂಡರ ಯುವಕರು ಶಾಲೆ - ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮೆಟ್ರುಕ್ಯುಲೇಶನ್ ಆದವರು ಹತ್ತು ಹನ್ನೆರಡು ಜನರಿದ್ದು ಕೆಲವರು ಸಣ್ಣ- ಪುಟ್ಟ ಸರ್ಕಾರಿ ಉದ್ಯೋಗಕ್ಕೆ ಸೇರಿಕೊಂಡಿದ್ದಾರೆ. ಕುಂಟುವಾಣಿಯ ಸೋಮಯ್ಯಗೊಂಡ (ಎಸ್. ಎಸ್. ಗೊಂಡ) ಎಂಬುವರು ಭೂನ್ಯಾಯ ಮಂಡಳಿಯ ಸದಸ್ಯರಾಗಿ ಮತ್ತು ಮಾರುಕೇರಿ ಮಂಡಲ ಪಂಚಾಯತಿಯ ಉಪಪ್ರಧಾನರಾಗಿ ಸೇವೆಸಲ್ಲಿಸಿದ್ದಾರೆ. ಪದವೀಧರರು ಮೂರು ಮಂದಿ ಇದ್ದಾರೆ. ಅತಿ ಹೆಚ್ಚು ವಿದ್ಯಾಭ್ಯಾಸ ಮಾಡಿದವರೆಂದರೆ ಜೋರಾ ಮಂಗಳಗೊಂಡ ಎಂಬುವರು. ಇವರು ಬಿ. ಇ. ಪದವೀಧರರಾಗಿದ್ದು, ಸುರತ್ಕಲ್ ಇಂಜಿನಿಯರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.

**ಆಹಾರ**

ಗೊಂಡರು ಮುಖ್ಯವಾಗಿ ಕೃಷಿಕರಾದ್ದರಿಂದ ಕೆಲಸಕ್ಕೆ ಹೋಗುವ ಮುಂಚೆ ಅವಲಕ್ಕಿ, ಬೆಲ್ಲ, ಚಹಾವನ್ನು ಬೆಳಗಿನ ತಿಂಡಿಗೆ ತಿನ್ನುತ್ತಾರೆ ಮಧ್ಯಾಹ್ನ ರಂಗಿ ಗಂಜಿ, ಮೀನು, ಕುಚ್ಚಲಕ್ಕಿ ಅನ್ನವನ್ನು ಊಟಕ್ಕೆ ಉಪಯೋಗಿಸುತ್ತಾರೆ. ರಾತ್ರಿ ಊಟಕ್ಕೆ ಕುಚ್ಚಲಕ್ಕಿ ಅನ್ನ, ಮೀನು ಅಥವಾ ತರಕಾರಿ ಸಾರು ಊಟ ಮಾಡುತ್ತಾರೆ. ಕಾಡು ಹಂದಿಯ ಮಾಂಸ ಗೊಂಡರಿಗೆ ತುಂಬಾ ಪ್ರಿಯವಾದುದು. ಗೊಂಡರು ಮಾಂಸದ ಅಡಿಗೆ ತುಂಬಾ ರುಚಿಕಟ್ಟಾಗಿ ತಯಾರಿಸುತ್ತಾರೆ. ಯಾವುದೇ ರೀತಿಯ ಮಸಾಲೆ ವಸ್ತುಗಳನ್ನು ಬಳಸದೆ ಬರೀ ತೆಂಗಿನಕಾಯಿ ನುಣ್ಣಗೆ ತಿರುವಿಹಾಕಿ ಮಾಂಸವನ್ನು ಬೇಯಿಸುತ್ತಾರೆ. ಪಟ್ಟಣದ ಹೋಟೆಲ್‌ಗಳಲ್ಲಿ ಮಸಾಲೆಮಯ ಅಡಿಗೆಯನ್ನು ತಿಂದವರಿಗೆ ಇವರ ಅಡಿಗೆ ವಿಶೇಷ ರುಚಿಯನ್ನುಂಟು ಮಾಡುತ್ತದೆ.

ಗೊಂಡರು ಅಡಿಗೆಯಲ್ಲಿ ಎಣ್ಣೆಯನ್ನು ಉಪಯೋಗಿಸುವುದು ತುಂಬಾ ಕಡಿಮೆ ಎಲ್ಲಾ ತಿಂಡಿ, ಕಜ್ಜಾಯ ಪದಾರ್ಥಗಳನ್ನು ಆವಿಯಲ್ಲಿ ಬೇಯಿಸುತ್ತಾರೆ. ''ದೋಸೆ'' ಇವರ ಮುಖ್ಯವಾದ ತಿಂಡಿ. ಕಾಡು ಪ್ರಾಣಿಗಳಾದ ಮೊಲ, ಕಡ, ಮಿಕ, ಬರ್ಕ, ಹಾರಬೆಕ್ಕು, ಮುಳ್ಳುಹಂದಿ, ಕಾಡು ಹಂದಿ ಮುಂತಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಮೀನು ಇವರ ಮುಖ್ಯವಾದ ಆಹಾರ ಪ್ರತಿ ದಿವಸದ ಊಟದಲ್ಲಿ ಹಸಿ ಅಥವಾ ಒಣಗಿದ ಮೀನನ್ನು ಉಪಯೋಗಿಸುತ್ತಾರೆ. ಕಾಡುಕೋಳಿ, ಹುರ್ಸಾನ ಹಕ್ಕಿ ಚುಟಕೋಳಿಗಳ ಮಾಂಸವನ್ನು ತಿನ್ನುತ್ತಾರೆ. ಗೊಂಡರು ಮೀನು ಹಿಡಿಯಲು ನಿರ್ಭಂದವಿದೆ. ಹಾಗಾಗಿ ಬಲೆ ಅಥವಾ ಗಾಳಹಾಕಿ ಮೀನು ಹಿಡಿಯುವುದಿಲ್ಲ. ಸಮುದ್ರದಲ್ಲಿ ದೊರೆಯುವ ಮೀನುಗಳಿಂದ ಬಂಗಡೆ, ಕಂದ್ಲ, ಅರಕಲು ಎಂಬ ದೊಡ್ಡಮೀನು, ತೋಡಿ, ಬೀಡಿನ ಮೀನು, ದೀವನ ಮೀನು, ಅಡಮೀನು, ಸಾಡಿ, ಸಿಗಡಿ, ಏಡಿ ಇವುಗಳನ್ನು ತಿನ್ನುತ್ತಾರೆ. ಗಂಜಿ ಕುಡಿಯುವಾಗ ಉಪ್ಪಿನಕಾಯಿ ಇರಲೇಬೇಕು. ತೆಂಗಿನ ಕಾಯಿ ಚಟ್ನಿಯನ್ನು ಮಾಡುತ್ತಾರೆ.

## ಜನನ-ಮರಣ

**ಜನನ**

ಗೊಂಡರು ಗರ್ಭಿಣಿಗೆ ಎಂಟನೇ ತಿಂಗಳಿಗೆ ಗಂಡನ ಮನೆಯಲ್ಲಿ ''ಬಯಕೆ

ಹಾಕುವುದು'' ಶಾಸ್ತ್ರ ಮಾಡುತ್ತಾರೆ. ಆ ದಿನ ಆಕೆಯ ತವರು ಮನೆಯಿಂದ ಅಣ್ಣ-ತಮ್ಮಂದಿರು ಅಕ್ಕತಂಗಿಯರು, ಸಂಬಂಧಿಕರು ಮತ್ತು ಊರಿನವರು ಸುಮಾರು ೨೫- ೩೦ ಜನ ಬರುತ್ತಾರೆ. ಗಂಡನ ಕಡೆ ಸಂಬಂಧಿಕರು ಆಪ್ತರು ಸೇರುತ್ತಾರೆ. ಗಂಡನ ಮನೆಯವರು ಗರ್ಭಿಣಿಗೆ ಹೊಸ ಸೀರೆ ತಂದು ಗರ್ಭಿಣಿಯನ್ನು ಸಿಂಗರಿಸಿ ಹೊಸ ಸೀರೆ ಉಡಿಸಿ ಅಕ್ಕಿ ಮುಡಿಗೆ ನಮಸ್ಕರಿಸುತ್ತಾರೆ ನಂತರ ಎಲ್ಲರೂ ಸೇರಿ ಪಾಯಸ, ಅನ್ನ, ಸಾರು, ಊಟ ಮಾಡುತ್ತಾರೆ.

ಗೊಂಡರು ಹೆರಿಗೆ ಆದ ನಂತರ ಬಾಣಂತಿಯನ್ನು ಮನೆಯ ಚೌಕಿಯಲ್ಲಿ ಇಡುತ್ತಾರೆ. ಹೆರಿಗೆಯಾಗಿ ಮೂರು ಮತ್ತು ಹನ್ನೊಂದನೆ ದಿವಸಗಳಲ್ಲಿ ಸೂತಕ ಕಳೆದುಕೊಳ್ಳುತ್ತಾರೆ. ಈ ದಿವಸಗಳಲ್ಲಿ ಪಂಚಗವ್ಯ ಹಾಕಲು ಮಡಿವಾಳ ಬರಬೇಕು. ಮೂರನೇ ಸೂತಕದ ದಿವಸ ಮನೆಯನ್ನೆಲ್ಲಾ ಸಾರಿಸಿ, ಸ್ವಚ್ಛ ಮಾಡಿ ಎಲ್ಲರೂ ಸ್ನಾನ ಮಾಡಿ ಶುಚಿಯಾಗುತ್ತಾರೆ. ಭಟ್ಕಳದಿಂದ ಮಡಿವಾಳ ಬರಬೇಕು ಆತ ಬರುವಾಗ ಕಾರಬೂದಿ ತರುತ್ತಾನೆ. ಹಲಸಿನ ಚಕ್ಕೆ ಮಾವಿನ ಚಕ್ಕೆ ತೆಗೆದುಕೊಂಡು ಚೆನ್ನಾಗಿ ಜಜ್ಜಿ ನೀರಿಗೆ, ಕಾರಬೂದಿ ಮತ್ತು ಚಕ್ಕೆಗಳ ಜಜ್ಜಿದ ಪುಡಿಯನ್ನು ಸೇರಿಸಿ ಮಿಶ್ರಣ ಮಾಡಿಕೊಳ್ಳುತ್ತಾನೆ. ಇದಕ್ಕೆ ''ಬಣ್ಣೀರು' ಎನ್ನುತ್ತಾರೆ. ಈ ಬಣ್ಣೀರನ್ನು ಮನೆಯ ಒಳಗೆ ಹೊರಗೆ ಚಿಮಿಕಿಸುತ್ತಾನೆ. ಹನ್ನೊಂದನೇ ದಿವಸವೂ ಇದೇ ರೀತಿಯಾಗಿ ಮನೆಯನ್ನೆಲ್ಲಾ ಶುಚಿಗೊಳಿಸಿ, ಮಡಿವಾಳ ಬಂದು ಮನೆಯ ಒಳ- ಹೊರಗೆಲ್ಲ ಬಣ್ಣೀರು ಚಿಮಿಕಿಸಿ ಶುದ್ಧಿಗೊಳಿಸುತ್ತಾನೆ. ನಂತರ ಬಿಳಿಬಣ್ಣದ ವಸ್ತ್ರ ಕೊಡುತ್ತಾನೆ. ಈ ವಸ್ತ್ರವನ್ನು ಶಿಶುವಿನ ತೊಟ್ಟಿಲಿಗೆ ಹಾಸಿ ಶಿಶುವನ್ನು ಮಲಗಿಸುತ್ತಾರೆ. ಮಡಿವಾಳ ಎರಡು ದಿವಸ ಬಂದು ಶುದ್ಧ ಮಾಡಿದ್ದಕ್ಕೆ ೫ ಹಾನೆ ಅಕ್ಕಿ ೧ ಕಾಯಿ ೧ ಸೇರು ಬೆಲ್ಲ, ವೀಳ್ಯಾದಪಟ್ಟಿ ಊಟದ ಪಡಿಯಾಗಿ ೧ ಸೇರು ಅಕ್ಕಿ ಕೊಡುತ್ತಾರೆ. ಹನ್ನೊಂದನೇ ದಿವಸ ಮಗುವಿಗೆ ಹೆಸರಿಡುತ್ತಾರೆ. ಗೊಂಡರಲ್ಲಿ ಮಕ್ಕಳಿಗೆ ವಾರಗಳ ಹೆಸರುಗಳನ್ನು ಇಡುವ ಪದ್ಧತಿಯಿದೆ. ಮಂಗಳವಾರ ಹುಟ್ಟಿದರೆ ಗಂಡಿಗೆ ಮಂಗಳ ಹೆಣ್ಣಿಗೆ ಮಂಗಳಿ, ಶುಕ್ರವಾರ ಹುಟ್ಟಿದರೆ ಗಂಡಾದರೆ ಶುಕ್ರ ಹೆಣ್ಣಾದರೆ ಶುಕ್ರಿ, ಸೋಮವಾರ ಹುಟ್ಟಿದವರಿಗೆ ಸೋಮಯ್ಯ, ಸೋಮಿ, ಶನಿವಾರ ಹುಟ್ಟಿದರೆ ಶಣ್ಣು ಹೆಣ್ಣುಮಗುವೆಂದರೆ ಸಣ್ಣಿ ಆದಿತ್ಯವಾರ ಹುಟ್ಟಿದರೆ ಗಂಡಾದರೆ ಮಾಸ್ತಿ ಹೆಣ್ಣಾದರೂ ಮಾಸ್ತಿ ಎಂದು ಹೆಸರಿಡುತ್ತಾರೆ. ಕೆಲವರು ಅಜ್ಜನ ಹೆಸರನ್ನು ಇಡುವುದರ ಜೊತೆಗೆ ದೇವರ ಹೆಸರುಗಳಾದ ತಿಮ್ಮಪ್ಪ, ಗೋವಿಂದ, ನಾರಾಯಣ, ದ್ಯಾವಯ್ಯ, ದುರ್ಗಯ್ಯ, ಸಂಕಯ್ಯ ಇತ್ಯಾದಿಯಾಗಿ ಹೆಸರುಗಳನ್ನು ಇಡುತ್ತಾರೆ.

ಮೂರು ಮತ್ತು ಹನ್ನೊಂದನೇ ಸೂತಕ ಕಳೆದುಕೊಂಡರೂ ಬಾಣಂತಿ ಒಳಗೆ ಹೋಗುವ ಹಾಗಿಲ್ಲ. ಮನೆಯ ಚೌಕಿಯಲ್ಲಿಯೇ ಇರಬೇಕು. ಅಡಿಗೆ ಮಾಡುವ ಹಾಗಿಲ್ಲ. ಬಡಿಸುವ ಹಾಗಿಲ್ಲ. ಒಂದು ತಿಂಗಳವರೆಗೆ ಸೂತಕವಿರುತ್ತದೆ. ಜನನವಾಗಿ ಒಂದು ತಿಂಗಳಿಗೆ 'ತಿಂಗಳು ಮಾಡುವುದು'' ಎಂದು ಮೂರನೇ ಸಾರಿ ಸೂತಕ ಕಳೆದುಕೊಳ್ಳುತ್ತಾರೆ. ತಿಂಗಳು ಮಾಡುವವರೆಗೆ ಬಾಣಂತಿ ಬಿಚ್ಚಿದ ತಲೆಕೂದನ್ನು ಕಟ್ಟುವುದಿಲ್ಲ ಕೊರಳಿಗೆ ಕಿವಿಗೆ ಆಭರಣ ಹಾಕುವ ಹಾಗಿಲ್ಲ. ಆದರೆ ಸ್ನಾನ ಮಾಡಬಹುದು. ಕೂದಲಿಗೆ ಎಣ್ಣೆ ಹಾಕಿಕೊಳ್ಳಬಹುದು. ಮಗು ಹುಟ್ಟಿದ ದಿವಸ ಅಡಿಕೆ ಹಾಳೆಯಲ್ಲಿ ಹಾಕುತ್ತಾರೆ. ಮೂರನೇ ದಿವಸ ಸೂತಕ ಕಳೆದ ನಂತರ ಒಂದು ಗೆರಸಿ (ಮೊರ)ಯನ್ನು ಸಗಣಿಯಿಂದ ಸಾರಿಸಿ ಶೇಡಿ ಬರೆದು ಗೆರಸಿಗೆ

ವಸ್ತ್ರಹಾಸಿ ಮಲಗಿಸುತ್ತಾರೆ. ಹನ್ನೊಂದನೆ ದಿವಸಕ್ಕೆ ತೊಟ್ಟಿಲಿಗೆ ಹಾಕುತ್ತಾರೆ.

ಗರ್ಭಿಣಿ ಹೆಂಗಸರನ್ನು ತವರು ಮನೆಗೆ ಕರೆದುಕೊಂಡು ಹೋದ ದಿವಸದಿಂದ ತಿಂಗಳು ತುಂಬುವುದರೊಳಗೆ, ಬೆಸನ (ಹೆರಿಗೆ) ಆದರೆ, ಅದೇ ತಿಂಗಳಲ್ಲಿ ಬಾಲಿ ಬಾಣಂತಿಯನ್ನು ಗಂಡನ ಮನೆಗೆ ಕರೆತರುತ್ತಾರೆ.

**ಮರಣ**

ಗೊಂಡರಲ್ಲಿ ಸತ್ತವರನ್ನು, ಸುಡುವ ಮತ್ತು ಹುಗಿಯುವ ಎರಡೂ ಪದ್ಧತಿಗಳೂ ಉಂಟು ಯಾರಾದರು ಸತ್ತರೆ ಹೆಣವನ್ನು ಹೊರಗಡೆ ಮನೆಯ ಚೌಕಿಗೆ ತಂದು ನೆಲಕ್ಕೆ ಮಲಗಿಸಿ ಅನ್ನದ ತಿಳಿ, ತುಳಸಿ ನೀರು ಬಾಯಿಗೆ ಬಿಟ್ಟು ಶವದ ಮೇಲೆ ಬಿಳಿ ವಸ್ತ್ರವನ್ನು ಮುಚ್ಚಿಬಿಡುತ್ತಾರೆ. ಸತ್ತವರು ಹೆಂಗಸಾದರೆ, ಸೀರೆಯನ್ನು ಮುಚ್ಚುತ್ತಾರೆ. ಅಂಗಳದಲ್ಲಿ ಬೇರೆ ಒಲೆ ಮಾಡಿ ಮಡಕೆಯಲ್ಲಿ ನೀರು ಕಾಯಿಸುತ್ತಾರೆ. ಊರಿನ ಜನರಿಗೆ, ಕಂಬಳಿ ಕೊಪ್ಪೆ ಹಾಕಿಕೊಂಡು ಕೈಯಲ್ಲಿ ಒಂದು ಕತ್ತಿ ಹಿಡಿದುಕೊಂಡು ಮೌನವಾಗಿ ಮನೆಯ ಮುಂದೆ ಹಾಸಿ ಹೋಗುವುದರ ಮೂಲಕ ಸುದ್ದಿ ಕೊಡುತ್ತಾರೆ. ಶವ ಸಂಸ್ಕಾರಕ್ಕೆ ಬರುವ ಗೊಂಡರು ಕಂಬಳಿಕೊಪ್ಪೆ ಹಾಕಿ ಕೊಂಡು ಕೈಯಲ್ಲಿ ಒಂದು ಕತ್ತಿಯನ್ನು ಹಿಡಿದು ಬರುತ್ತಾರೆ. ಶವಕ್ಕೆ ಎಣ್ಣೆ, ಅರಶಿನ, ಸೀಗೆಕಾಯಿ ಪುಡಿ ಹಾಕಿ ಮಿಶ್ರಣ ಮಾಡಿಕೊಂಡು ಹಚ್ಚುತ್ತಾರೆ. ಹೆಣವನ್ನು ಹೊರಕ್ಕೆ ತೆಗೆದುಕೊಂಡು ಹೋಗಿ ಮಡಕೆಯಲ್ಲಿ ಕಾಯಿಸಿದ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಕೆಲವರು ಸೌದೆ ಮಾಡಲು ಸ್ಮಶಾನಕ್ಕೆ ಹೋಗಿರುತ್ತಾರೆ. ಎರಡು ಎಳೆಗಳಿಗೆ ಅಡ್ಡ ಎಳೆಗಳನ್ನು ಕಟ್ಟಿ ಚಟ್ಟ ತಯಾರಿಸುತ್ತಾರೆ. ಚಟ್ಟದ ಮೇಲೆ ದೊಡ್ಡದಾದ ಬಾಳೆ ಎಲೆಯನ್ನು ಹಾಸಿ ಹೆಣವನ್ನು ಬೆತ್ತಲೆಯಾಗಿ ಮಲಗಿಸುತ್ತಾರೆ. ಸತ್ತವನು ಉಪಯೋಗಿಸಿದ ಬಟ್ಟೆಗಳನ್ನೆಲ್ಲ ಶವದ ಮೇಲೆ ಹಾಕಿ ಕಟ್ಟುತ್ತಾರೆ.

ತಿರುಪತಿಗೆ ಹೋಗಿ ಬಂದವರು ಸತ್ತರೆ ಅವರು ಬಳಸುತ್ತಿದ್ದ ಮಡಿಬಟ್ಟೆ ತುಳಸಿ ಮಣಿಸರವನ್ನು ಶವದ ಮೇಲೆ ಹಾಕುತ್ತಾರೆ. ಭತ್ತ, ರಾಗಿ, ಗೋಧಿ, ಜೋಳ, ಇತ್ಯಾದಿ ಐದು ಜಾತಿಯ ಧಾನ್ಯಗಳನ್ನು ಸೇರಿಸಿ ಅದಕ್ಕೆ ಒಂದು ಪಾವಲಿ ಹಾಕಿ ವಸ್ತ್ರದಲ್ಲಿ ಗಂಟುಕಟ್ಟಿ ಶವದ ಸೆರಗಿಗೆ ಕಟ್ಟುತ್ತಾರೆ. ಶವದ ತಲೆಯ ಹಿಂದೆ ಒಂದು ತೆಂಗಿನಕಾಯಿ ಇಟ್ಟಿರುತ್ತಾರೆ. ಹೆಣವನ್ನು ಎತ್ತುವಾಗ ಒಂದೇ ಕೈಯಿಂದ ಕತ್ತಿಯಿಂದ ಕಾಯಿ ಒಡೆದು, ಹೋಳುಗಳನ್ನು ಹೆಣದ ವಸ್ತ್ರದ ಸೆರಗಿಗೆ ಕಟ್ಟುತ್ತಾರೆ. ನಂತರ ಶವವನ್ನು ಸ್ಮಶಾನಕ್ಕೆ ಹೊತ್ತು ಒಯ್ಯುತ್ತಾರೆ. ಮನೆಯಲ್ಲಿ ಸಾಕಷ್ಟು ಜನರಿದ್ದಾರೆ. ಅವರೇ ಶವವನ್ನು ಹೊತ್ತುಕೊಳ್ಳುತ್ತಾರೆ. ಇಲ್ಲವಾದರೆ ಊರಿನವರು ಹೊರುತ್ತಾರೆ. ನೀರು ಕಾಯಿಸಿದ ಮಡಕೆಗೆ ಬೆಂಕಿಯ ಕೆಂಡ ಹಾಕಿ ಒಂದು ಕೋಲಿಗೆ ಕಟ್ಟಿಕೊಂಡು ಒಬ್ಬರು, ಹಿಡಿದುಕೊಳ್ಳುತ್ತಾರೆ. ಇನ್ನೊಂದು ಮಡಕೆಯಲ್ಲಿ ಅನ್ನ ತಿಳಿ- ಹಾಕಿ ಉಗ್ಗ ಹಾಕಿಕೊಂಡು ಹಿಡಿದುಕೊಳ್ಳುತ್ತಾರೆ. ಇದಕ್ಕೆ "ತಿಳಿಕೂಳು" ಎನ್ನುತ್ತಾರೆ. ಹೆಣದ ಮೇಲೆ ಹೊದಿಸಿದ ಬಟ್ಟೆ ಬರೆಗಳನ್ನು ತೆಗೆದು ಶವವನ್ನು ಬೆತ್ತಲೆ ಮಾಡಿ ಈಸು ಕಟ್ಟಿದ ಸೌದೆ ರಾಶಿಯ ಮೇಲೆ ಇಡುತ್ತಾರೆ. ತಿಳಿಕೂಳಿನ ಮಡಕೆಯನ್ನು ಶವದ ತಲೆಯ ಭಾಗದಲ್ಲಿ ಒಡೆಯುತ್ತಾರೆ. ನಂತರ ಶವಕ್ಕೆ ಬೆಂಕಿಯನ್ನು ಹಚ್ಚುತ್ತಾರೆ. ಬೆಂಕಿ ಹಚ್ಚುವವರು ಸತ್ತವನ ಮಕ್ಕಳು ಅಥವಾ ಅಣ್ಣ ತಮ್ಮಂದಿರು ಆಗಿರಬೇಕು. ಶವಪೂರ್ಣ ಸುಡುವವರೆಗೆ ಅಲ್ಲಿಯೇ

ಇದ್ದು ಸುಟ್ಟ ನಂತರ ವಾಪಾಸಾಗುತ್ತಾರೆ. ಶವಯಾತ್ರೆಗೆ ಹೋದವರು ಎಲ್ಲರೂ ಹೊಳೆಯಲ್ಲಿ ಸ್ನಾನ ಮಾಡಿ ನಂತರ ಆಕಳು ಸಗಣಿ, ಹಲಸಿನಚಕ್ಕೆ, ಮಾವಿನ ಚಕ್ಕೆ, ತುಳಸಿಕುಡಿ, ಕಲ್ಲು ಮೇಲಿಟ್ಟು ಕುಟ್ಟಿ 'ಪಂಚಗವ್ಯ' ತಯಾರಿಸುತ್ತಾರೆ. ಪಂಚಗವ್ಯವನ್ನು, ಸ್ನಾನ ಮಾಡಿದವರು ಸಿಂಪಡಿಸಿಕೊಳ್ಳುತ್ತಾರೆ. ಹಾಗೂ ಕತ್ತಿ ಕೊಡ್ಲಿ ಮುಂತಾದ ಆಯುಧಗಳ ಮೇಲೂ ಸಿಂಪಡಿಸುತ್ತಾರೆ. ಶವ ಸಂಸ್ಕಾರಕ್ಕೆ ಬಂದ ಊರಿನವರು ತಮ್ಮ ತಮ್ಮ ಮನೆಗೆ ಹೋಗುತ್ತಾರೆ. ಮನೆಯವರು ಮನೆಯ ಮುಂಭಾಗದಲ್ಲಿ ಇವರು ಬರುತ್ತಿರುವುದನ್ನು ನೋಡಿ ಬೆಂಕಿ ಕೆಂಡ, ಒಂದು ತಂಬಿಗೆ ನೀರು ತುಳಸಿ ಕುಡಿ ಇಡುತ್ತಾರೆ. ಶವಯಾತ್ರಿಗಳು ಬೆಂಕಿ ಕೆಂಡಕ್ಕೆ ತಮ್ಮ ಅಂಗಾಲು ತಾಕಿಸಿ, ತುಳಸಿ ನೀರಿನಿಂದ ಮುಖತೊಳೆದುಕೊಂಡು ಗೋಮಯ ಹಾಕಿಕೊಂಡು ಮನೆಗೆ ಹೋಗುತ್ತಾರೆ. ಬಿಸಿ ನೀರಿನಿಂದ ಮತ್ತೊಮ್ಮೆ ಸ್ನಾನ ಮಾಡುತ್ತಾರೆ. ಹನ್ನೊಂದನೆ ದಿವಸದ "ತಲೆಕಟ್ಟು ಕರ್ಮ" ಆಗುವವರೆಗೆ ಸ್ಮಶಾನಕ್ಕೆ ಹೋದವರು ತಮ್ಮ ತಮ್ಮ ಮನೆಯಲ್ಲಿ ಒಳಗಡೆ ಹೋಗುವ ಹಾಗಿಲ್ಲ. ಬಾಳೆ ಎಲೆಯಲ್ಲಿ ಊಟ ಮಾಡಬೇಕು. ಗವಲು ತಿನ್ನಬಾರದು. ಮರಣ ಹೊಂದಿದವರ ಮನೆಯಲ್ಲಿ ರಾತ್ರಿ ಒಂದು ಬತ್ತಿ ಕದಿರು ಮಾಡಿ ಕೊಬ್ರಿ ಎಣ್ಣೆಯಲ್ಲಿ ಅದ್ದಿ ಬತ್ತಿಯ ಎರಡು ಕಡೆಗೂ ಬೆಂಕಿಹಚ್ಚಿ ಶವವನ್ನು ಮಲಗಿಸಿದ ಜಾಗದಲ್ಲಿಟ್ಟು ಬುಟ್ಟಿ ಮುಚ್ಚುತ್ತಾರೆ. ಬತ್ತಿ ಪೂರ್ಣ ಸುಟ್ಟು ಹೋದರೆ ಆಯಸ್ಸು ತುಂಬಿ ಮರಣ ಹೊಂದಿದ ಎಂದು ಭಾವಿಸುತ್ತಾರೆ. ಬತ್ತಿ ಸುಡದೆ ಅರ್ಧಕ್ಕೆ ಉಳಿದರೆ ಆಯಸ್ಸು ಇದ್ದ ಹಾಗೆಯೇ ಮರಣನಾದ ಎಂದು ತಿಳಿಯುತ್ತಾರೆ. ಮರಣದ ಮೂರನೆ ದಿವಸ ಮನೆಯನ್ನು ಸಾರಿಸಿ, ಪ್ರತಿಯೊಬ್ಬನು ಸ್ನಾನ ಮಾಡಿ ಶುಚಿಯಾಗುತ್ತಾರೆ. ಒಂದು ಸೇರು ಅಕ್ಕಿಯಿಂದ ಅನ್ನ ತಯಾರಿಸುತ್ತಾರೆ. ಬಾಳೆ ದಿಂಡು ಬಾಳೆ ಕಾಯಿ ಒಂದು ತೆಂಗಿನಕಾಯಿಯನ್ನು ಹಾಕಿ ಪಲ್ಯಾ ತಯಾರಿಸುತ್ತಾರೆ. ಒಂದು ವಸ್ತ್ರದ ಮೇಲೆ ಬಾಳೆ ಎಲೆಯಿಟ್ಟು, ತಯಾರಿಸಿದ ಅನ್ನ ಪಟ್ಟೆಯನ್ನು ವಸ್ತ್ರದಿಂದ ಕಟ್ಟಿಕೊಂಡು, ತೆಂಗಿನ ಮರದ ಹೆಡೆಯಿಂದ ನೇಯ್ದ ಮಡ್ಲನ್ನು ತೆಗೆದುಕೊಂಡು ಶವ ಸುಟ್ಟ ಸ್ಥಳಕ್ಕೆ ಹೋಗುತ್ತಾರೆ. ಹೆಣ ಸುಟ್ಟಲ್ಲಿ ಬೆಂಕಿಯಿದ್ದರೆ ನೀರು ಹಾಕಿ ನಂದಿಸಿ ಬೂದಿಯನ್ನೆಲ್ಲಾ ಒಟ್ಟು ಮಾಡಿ, ಲಕ್ಕಿಗಿಡದ ಮೂರು ಗೂಟವನ್ನು ಸುಟ್ಟ ಸ್ಥಳದಲ್ಲಿ ನಿಲ್ಲಿಸಿ ತೆಂಗಿನ ಮಡ್ಲನ್ನು ಹೊಚ್ಚುತ್ತಾರೆ. ಎಡೆಯನ್ನು ಶವದ ತಲೆಯಿಟ್ಟ ಭಾಗದಲ್ಲಿಟ್ಟು ಒಂದು ತುಳಸಿ ಗಿಡವನ್ನು ನೆಟ್ಟು ಬರುತ್ತಾರೆ.

ಹನ್ನೊಂದನೇ ದಿವಸಕ್ಕೆ ತಲೆ ಕಟ್ಟುವ ಕರ್ಮ ನಡೆಯುತ್ತದೆ. ಶವ ಸಂಸ್ಕಾರಕ್ಕೆ ಹೋದವರು ಎಲ್ಲರೂ ಒಂದೊಂದು ಕಂಬಳಿ ತೆಗೆದುಕೊಂಡು ಮರಣ ಹೊಂದಿದವರ ಮನೆಗೆ ಹೋಗುತ್ತಾರೆ. ಎಲ್ಲಾ ತರದ ಕಜ್ಜಾಯ ಅನ್ನ ಸಾರು, ಶ್ಯಾವಿಗೆ ಪಾಯಸ, ದೋಸೆ ಕೊಟ್ಟೆಕಡುಬು ಸಕೀಟು ತಯಾರಿಸುತ್ತಾರೆ. ಎಲ್ಲಾ ಪದಾರ್ಥಗಳನ್ನು ಹಾಕಿ ಎರಡು ಎಡೆ ಮಾಡುತ್ತಾರೆ. ನೆಲದ ಒಂದು ಪಂಚೆಯನ್ನು ಹಾಸಿ ಎಡೆಗಳನ್ನು ಇದರ ಮೇಲೆ ಇಡುತ್ತಾರೆ. ಒಂದು ಎಡೆಯಲ್ಲಿರುವ ಎಲ್ಲಾ ಪದಾರ್ಥಗಳನ್ನು ಕಲಸಿ ಚಿಕ್ಕಿಚಿಕ್ಕ ಉಂಡೆ ಮಾಡುತ್ತಾರೆ. ಒಂದು ತಂಬಿಗೆ ನೀರು ಪಂಚೆಯನ್ನು ಹಾಸಿ ಎಡೆಗಳನ್ನು ಇದರ ಮೇಲೆ ತುಳಸಿಕುಡಿ, ಒಂದು ಬುಟ್ಟಿಗೆ ವಸ್ತ್ರ ಹಾಸಿ ಇಡುತ್ತಾರೆ. ಸೇರಿರುವವರೆಲ್ಲರೂ ತುಳಸಿ ಕುಡಿಯನ್ನು ತಂಬಿಗೆಯ

ನೀರಿನಲ್ಲಿ ಮುಳುಗಿಸಿ ಒಂದು ಉಂಡೆಯನ್ನು ತೆಗೆದುಕೊಂಡು ತುಳಸಿ ನೀರನ್ನು ಹಾಕಿ ಬುಟ್ಟಿಗೆ ಹಾಕಬೇಕು. ಇದಕ್ಕೆ ಪಿಂಡ ಹಾಕುವುದು, ತಲಿ ಕಟ್ಟುವುದು ಎನ್ನುತ್ತಾರೆ. ಎಲ್ಲರು ಪಿಂಡ ಹಾಕಿದ ನಂತರ ಮನೆಯಿಂದ ಸ್ವಲ್ಪ ದೂರದಲ್ಲಿ ಬುಟ್ಟಿಯನ್ನು ಇಟ್ಟು ಬರುತ್ತಾರೆ.

ಇನ್ನೊಂದು ಎಡೆಯನ್ನು ವಾಸದ ಮನೆಯ ಕೋಳು ಮೇಲೆ ಇಡುತ್ತಾರೆ. ನಂತರ ಎಲ್ಲರೂ ಸೇರಿ ಊಟ ಮಾಡುತ್ತಾರೆ. ಊಟಕ್ಕೆ ಕೂತಾಗ ಶವವನ್ನು ಹೊತ್ತವರ ಎಡ ಬಗಲಿಗೆ ಓಡಿಯುವಾಗ ಅಥವಾ ಅಣ್ಣ ತಮ್ಮಂದಿರು ಯಾರಾದರೂ ಕೊಬ್ರಿಎಣ್ಣೆ ಹಚ್ಚುತ್ತಾರೆ. ಆ ದಿವಸ ಎಲ್ಲರೂ ಶುದ್ಧರಾಗಿ ಮನೆಯ ಒಳಗೆ ಪ್ರವೇಶ ಮಾಡುತ್ತಾರೆ.

ಮದುವೆಯಾಗದವರು, ಗರ್ಭಿಣಿಯರು ಸತ್ತರೆ ಹೂಳುತ್ತಾರೆ. ಗಂಡ ಸತ್ತರೆ ಹೆಂಡತಿ ಸೂತಕದ ಸಂದರ್ಭದಲ್ಲಿ ಬಿಳಿ ಸೀರೆ ತೊಡುತ್ತಾಳೆ. ಮೂಗುತಿಯನ್ನು ಮೂರು ದಿವಸಗಳವರೆಗೆ ಬಾಳೆಯ ಗಿಡಕ್ಕೆ ಕಟ್ಟಿಟ್ಟು ಆನಂತರ ಧರಿಸುತ್ತಾಳೆ. ವಿಧವೆಯಾದರೂ ಆಕೆ ತನ್ನ ಪತಿ ಸ್ವರ್ಗಲೋಕದಲ್ಲಿ ವಾಸಿಸುತ್ತಾನೆ ಎಂದು ನಂಬಿರುವುದರಿಂದ ಮಂಗಳ ಆಭರಣಗಳಿಂದ ಮೂಗುತಿ, ಬಳೆ, ಕೊಳ್‌ನೂಗ್ಲುಗಳನ್ನು ಧರಿಸಿಯೇ ಇರುತ್ತಾಳೆ. ವಿಧವೆ ಯಾದ ನಂತರ ಸಿಂಗಾರದ ಕೊನೆ, ಹೂವು ಮುಡಿಯುವ ಹಾಗಿಲ್ಲ ಮಂಗಳ ಕಾರ್ಯಗಳಲ್ಲಿ ಕೈಗೂಡಿಸುವಂತಿಲ್ಲ.

## ಮದುವೆ ಸಂಪ್ರದಾಯಗಳು

ಸರ್ಕಾರ ಬಾಲ್ಯವಿವಾಹದ ಪದ್ಧತಿಯನ್ನು ನಿಷೇಧಿಸಿದರೂ ಸಹ ಗೊಂಡರಲ್ಲಿ ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿದೆ. ಹತ್ತು ಹನ್ನೆರಡು ವರ್ಷದ ಹೆಣ್ಣು ಹದಿನೈದು ವರ್ಷದ ಗಂಡುಗಳಿಗೆ ಮದುವೆ ಮಾಡುತ್ತಾರೆ. ಈ ವಯಸ್ಸು ಮೀರಿದವರು ಮದುವೆ ವಯಸ್ಸು ಮೀರಿ ಬಲಿತವರು.

ಮದುವೆ ನಿಶ್ಚಯ ಮಾಡುವಂತಹವರು ಹೆಣ್ಣಿನ ಮತ್ತು ಗಂಡಿನ ಊರುಗಳ ಆಡಳಿತ ನೋಡಿಕೊಳ್ಳುವ ಊರು ಗೊಂಡರು. ಅವರು ಒಪ್ಪಿಗೆ ಕೊಟ್ಟರೆ ಮದುವೆ ಮಾಡಲು ಅಡ್ಡಿಯಿಲ್ಲ. ನಿಶ್ಚಯವಾದ ಐದು ಅಥವಾ ಏಳು ದಿವಸಗಳಲ್ಲಿ ಮದುವೆ ಮುಗಿಸಿ ಬಿಡುತ್ತಾರೆ. ಆದ್ದರಿಂದ ನಿಶ್ಚಯಕ್ಕೆ ಮುಂಚೆ ಮದುವೆ ಸಿದ್ಧತೆ ಮಾಡಿಕೊಂಡಿರುತ್ತಾರೆ.

ನಿಶ್ಚಯವಾದ ನಂತರ ಹೆಣ್ಣಾಗಲಿ, ಗಂಡಾಗಲಿ ಮಾಂಸಾಹಾರದ ಊಟವನ್ನು ಮಾಡುವ ಹಾಗಿಲ್ಲ. ಗೊಂಡರ ಮದುವೆಗಳು ಏಪ್ರಿಲ್ ಮೇ ತಿಂಗಳಲ್ಲಿ ನಡೆಯುತ್ತವೆ. ಈ ತಿಂಗಳುಗಳ ಅವಧಿಯನ್ನು ಅವರು ಹಗ್ಗು ಮತ್ತು ಬ್ಯಾಸಿ ತಿಂಗಳುಗಳೆಂದು ಕರೆಯುತ್ತಾರೆ. ಗೊಂಡರು ಮದುವೆ ಮಾಡುವ ಮುಂಚೆ ಹೆಣ್ಣಿನ ಬಳಿ ಯಾವುದೆಂದು ನೋಡುತ್ತಾರೆ. ಇವರಲ್ಲಿ ನೂರಾ ಒಂದು ಬಳಿಗಳಿವೆ ಎಂದು ಹೇಳುತ್ತಾರೆ. ಆದರೆ ಮುಖ್ಯವಾಗಿ ಅಜ್ಜಬಳಿ, ಅಮ್‌ನಾಥಬಳಿ, ಆನ್‌ಬಳಿ, ಕಾಯಿಬಳಿ, ತೊಳಾರ್‌ಬಳಿ, ಹಾಲ್‌ಬಳಿ, ದ್ಯಾವತರ ಬಳಿ, ಶೆಟ್‌ಬಳಿ, ಚಂದಿಬಳಿ, ಗಂಗಾರಬಳಿ ಹೀಗೆ ಹದಿನೈದು ಬಳಿಗಳು ಪ್ರಚಲಿತವಾಗಿವೆ. ಹೊನ್‌ಬಳಿ ಎಲ್ಲಕ್ಕಿಂತ ಶ್ರೇಷ್ಠ ಬಳಿಯಾದರೆ ತೊಳಾರ್‌ಬಳಿಯು ಎಲ್ಲಕ್ಕಿಂತ ಕೀಳು ಬಳಿಯಾಗಿದೆ. ಅದ್ದರಿಂದ ತೊಳಾರ್‌ಬಳಿಯ ಹೆಣ್ಣನ್ನು ಮದುವೆ ಮಾಡಿಕೊಂಡು ಹೋಗುವುದು ಕಷ್ಟವಾಗುತ್ತದೆ. ಇವರಲ್ಲಿ ತಂದೆಯ ಬಳಿ ಗಂಡು ಮಕ್ಕಳಿಂದ ತಾಯಿಯ

ಬಳಿ ಹೆಣ್ಣು ಮಕ್ಕಳಿಂದ ಮುಂದುವರಿಯುತ್ತಾ ಹೋಗುತ್ತವೆ. ನಾಗರೀಕರು ಗೋತ್ರವೆಂದು ಕರೆಯುವುದನ್ನು ಗೊಂಡರು ಬಳಿಗಳೆಂದು ಕರೆಯುತ್ತಾರೆ. ಒಂದೇ ಬಳಿಯ ಹೆಣ್ಣು ಗಂಡು ಮದುವೆಯಾಗುವ ಹಾಗಿಲ್ಲ. ಭಿನ್ನ ಬಳಿಯವರಾಗಿರಬೇಕು. ಮದುವೆಗೆ ಮುಂಚೆ ಹೆಣ್ಣುಗಂಡಿನ ಹೆಸರಿನ ಬಲದ ಮೇಲೆ ನಡಾವಳಿ ಕೂಡಿ ಬರಬೇಕು. ತಂದೆ ಬಳಿಯ ಹೆಣ್ಣನ್ನು ಮಗನಿಗೆ ಮದುವೆ ಮಾಡಿಕೊಳ್ಳಬಹುದು ತಾಯಿಯ ಬಳಿ ಆಗುವುದಿಲ್ಲ. ಭಟ್ಟರ ಹತ್ತಿರ ಸಾಲವಳಿ ಕೇಳಿ ಹೆಣ್ಣು ನಿಶ್ಚಯ ಮಾಡಿಕೊಳ್ಳುತ್ತಾರೆ.

ಗೊಂಡರಲ್ಲಿ ವರೋಪಚಾರದ ಪದ್ಧತಿಯಿಲ್ಲ. ಹೆಣ್ಣಿನ ಕಡೆಯವರಿಗೆ ಮೂರು ಮಾನಿಗೆ ಕುಚ್ಚಲಕ್ಕಿ ಎರಡು ಮಾನಿಗೆ ಬೆಣತಕ್ಕಿ, ನೂರಾಐವತ್ತು ತೆಂಗಿಕಾಯಿ, ಮೂರು ಮಣ ಬೆಲ್ಲ ಒಂದು ನೂರಾಐವತ್ತು ರೂಪಾಯಿಗಳು ಇವುಗಳನ್ನು ಗಂಡಿನ ಮನೆಯವರು ಹೊತ್ತು ಕೊಂಡು ಹೋಗಿ ಹೆಣ್ಣಿನ ಮನೆಯವರಿಗೆ ಕೊಟ್ಟು ಬರಬೇಕು.

ಬಟ್ಟೆ, ಸೀರೆ ಮತ್ತು ಪಂಚೆ ಹೆಣ್ಣಿನವರು ಹೇಳಿದ್ದಷ್ಟನ್ನು ಗಂಡಿನವರು ಕೊಡಬೇಕು. ಗಂಡಿನವರು ದಾರೆ ಸೀರೆ, ಅತ್ತೆ ಸೀರೆ, ಹೆಣ್ಣಿನ ತಂದೆಗೆ ಹದಿನಾರು ಮೊಳದ ದೋತ್ರ ಮತ್ತು ಜನ್ನಾರದಟ್ಟೆ (ಪಾಣಿ ಪಂಚೆ) ಇವಲ್ಲದೆ ನಾಲ್ಕುವರ (ಹದಿನಾರು ರೂಪಾಯಿಗಳು ತೆರಕೊಡಬೇಕು.)

ಮದುವೆಯ ಮಾತುಕತೆಗಳೆಲ್ಲಾ ಮುಗಿದ ಮೇಲೆ "ಬಾಯಿಸಿಹಿ" ಶಾಸ್ತ್ರ ನಡೆಯುತ್ತದೆ. ಗಂಡಿನ ಕಡೆಯವರು ಹೆಣ್ಣಿನ ಮನೆಗೆ ತಮ್ಮ ಬಂಧು ಬಾಂದವರು ಊರಿನ ಹಿತೈಷಿಗಳನ್ನು ಕರೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಹೆಣ್ಣಿನ ಕಡೆಯವರು ಐದು ವೀಳ್ಯಾ, ಗಂಡಿನ ಕಡೆಯವರು ಐದು ವೀಳ್ಯಾ ಮಡಿ, ಗಂಡಿನವರು ಹೆಣ್ಣಿನ ಹೆಸರು ಹೇಳಿ, ಹೆಣ್ಣಿನವರು ಗಂಡಿನ ಹೆಸರು ಹೇಳಿ ವೀಳ್ಯಾ ಬದಲಾಯಿಸಿಕೊಳ್ಳುತ್ತಾರೆ. ಈ ಶಾಸ್ತ್ರಕ್ಕೆ "ಕೈಯಿಳ್ಳಿ" ಎನ್ನುತ್ತಾರೆ. ನಂತರ ಎಲ್ಲರೂ ಸೇರಿ ಮುಖ್ಯವಾಗಿ ಪಾಯಸ, ಅನ್ನ ಸಾರು ಊಟ ಮಾಡುತ್ತಾರೆ. ಕೈಯಿಳ್ಳಿ ಶಾಸ್ತ್ರ ಮುಗಿನ ನಂತರ ಗಂಡು ಹೆಣ್ಣಿನ ಕಡೆಯವರು ಬದಲಾಗುವ ಹಾಗಿಲ್ಲ.

ಮದುವೆಗೆ ಐದು ಅಥವಾ ಮೂರು ದಿವಸಗಳ ಮುಂಚೆ ಹೆಣ್ಣೊಪ್ಪಿಸುವ ಶಾಸ್ತ್ರ ನಡೆಯುತ್ತದೆ. ಗಂಡಿನ ಮನೆಯಿಂದ ವರನ ಅಣ್ಣ ಅಥವಾ ವರನ ಬಳಿಗೆ ಸೇರಿದವರು ಊರಿನ ಎರಡು ಜನರನ್ನು ಕರೆದುಕೊಂಡು ಬಂದು ತೆಂಗಿನಕಾಯಿ, ಒಂದು ಕೊಟ್ಟೆ ಹಿಂಗಾರ, ಐದು ವೀಳ್ಯಾದೆಲೆ ಪಟ್ಟಿ, ಐದು ಎಸಳು ಹೊಗೆಸೊಪ್ಪು ಒಂದು ಬೆಳ್ಳಿ ಉಂಗುರ ತೆಗೆದುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ನಂತರ ಹೆಣ್ಣಿನ ತಂದೆ ತಮ್ಮ ಅಥವಾ ಅಣ್ಣ ಒಂದು ಸಿದ್ದೆ ಬೆಣತಕ್ಕಿ ತೆಗೆದುಕೊಂಡು ಹೆಣ್ಣು- ಗಂಡಿನ ಕಡೆಯವರು ಸೇರಿ, ಭಟ್ಟರ ಮನೆಗೆ ಹೋಗುತ್ತಾರೆ. ಗಂಡಿನವರು ತಂದ ತೆಂಗಿನ ಕಾಯಿ ದೇವರಿಗೆ ಒಡೆದು ಪೂಜೆ ಮಾಡಿ ಹೆಣ್ಣಿನವರು ತೆಗೆದುಕೊಂಡು ಹೋದ ಒಂದು ಸಿದ್ದೆ ಅಕ್ಕಿಯನ್ನು "ಸಾಸಿ" ತಯಾರಿಸಿಕೊಡುತ್ತಾರೆ. ಭಟ್ಟರಿಗೆ ಐದು ರೂಪಾಯಿ ಕೊಡಬೇಕು. ಸಾಸಿಯನ್ನು ಗಂಡಿನ ಮನೆಯವರೇ ತೆಗೆದುಕೊಂಡು ಬರಬೇಕು. ಹೆಣ್ಣಿನ ಮನೆಯವರ ಅಕ್ಕಿಯ ಮುಡಿಯ ಮೇಲೆ ಸಾಸಿ ಇಟ್ಟು, ಹೆಣ್ಣಿಗೆ ತಲೆಬಾಚಿ ಬಿಳೀ ಪಂಚೆ ಉಡಿಸಿ, ಹಸಗಾರು ಗೋಡೆಯ ಕೆಳಗೆ

ಹಸೆಹಾಸಿ ಎರಡು ಮಣೆಯಿಟ್ಟು ಒಂದರಲ್ಲಿ ಮದುವೆಯಾಗಲಿರುವ ಹೆಣ್ಣನ್ನು ಕೂರಿಸುತ್ತಾರೆ. ಇನ್ನೊಂದು ಮಣೆಯಲ್ಲಿ ಹೆಣ್ಣಿನ ತಾಯಿಯನ್ನು ಕೂರಿಸಿ, ಅವಳ ಕೈಯಲ್ಲಿ ಒಂದು ಹರಿವಾಣವನ್ನು ಕೊಡುತ್ತಾರೆ. ಗಂಡಿನ ಕಡೆಯವರು ತಂದೆ ಐದು ವೀಳ್ಯಾಪಟ್ಟಿ, ಐದು ಎಸಳು ಹೊಗೆ ಸೊಪ್ಪು ಹರಿವಾಣಕ್ಕೆ ಹಾಕುತ್ತಾರೆ. ಹೆಣ್ಣಿಗೆ ಬೆಳ್ಳಿ ಉಂಗುರವನ್ನು ತೊಡಿಸುತ್ತಾರೆ. ಸಾಸಿಯನ್ನು ತಾಯಿ ಮತ್ತು ಮಗಳ ನೊಸಲಿಗೆ ಹಚ್ಚುತ್ತಾರೆ. ನಂತರ ಸಾಸಿಯನ್ನು ಸಮ ಎರಡು ಭಾಗ ಮಾಡಿ ಒಂದು ಭಾಗವನ್ನು ಗಂಡಿನ ಕಡೆಯವರಿಗೆ ಕೊಡುತ್ತಾರೆ.

ನಂತರ ಎಲ್ಲರೂ ಸೇರಿ ಊಟ ಮಾಡುತ್ತಾರೆ. ಗಂಡಿನ ಮನೆಯಲ್ಲಿ ಗಂಡೊಪ್ಪುವ ಶಾಸ್ತ್ರ ನಡೆಯುತ್ತದೆ. ಗಂಡಿನ ತಾಯಿ ಮದುವೆಯಾಗುವ ಮಗನನ್ನು ಹಸಗಾರು ಗೋಡೆಯ ಕೆಳಗೆ ಕೂಡಿಸಿ ಬೆಳ್ಳಿ ಉಂಗುರ ತೊಡಿಸಿ ದೃಷ್ಟಿ ಸರಹಾಕಿ ಸಾಸಿಯನ್ನು ನೊಸಲಿಗೆ ಹಚ್ಚುತ್ತಾಳೆ.

ಹೆಣ್ಣು ಮತ್ತು ಗಂಡೊಪ್ಪುವ ಶಾಸ್ತ್ರದ ನಂತರ ಮದುಮಗ ಪ್ರಥಮವಾಗಿ ಆತನ ಅಕ್ಕಳ ಮನೆಗೆ ಹೋಗಿ ವೀಳ್ಯಾ ಕೊಟ್ಟು ಮದುವೆ ಕರೆಯಬೇಕು. ಗಂಡು ಬಂಧುಗಳನ್ನು ಕರೆಯಲು ಹೋಗುವಾಗ ಬೆತ್ತದ ಕೋಲು ಸೀತಾಳೆ ಕೊಡೆ ಹಿಡಿದು ಕಾಲಿಗೆ ಚಪ್ಪಲಿ ಹಾಕದೆ ಹೋಗಬೇಕು.

ಮದುವೆ ದಿವಸ ಊರಿನವರೆಲ್ಲಾ ಸೇರಿ ಮನೆಯ ಮುಂದಿನ ಅಂಗಳದಲ್ಲಿ ತಳಿರು-ತೋರಣಗಳಿಂದ ಕೂಡಿದ "ಮಳಮನೆ" ತಯಾರಿಸುತ್ತಾರೆ. ಮದುಮಗ ಕೂರಲು ಮಳಮನೆಯಲ್ಲಿ ಹಡಿಮಂಚವನ್ನು ಇಡುತ್ತಾರೆ. ಅರಶಿನವನ್ನು ಕುಟ್ಟಿ ಪುಡಿ ಮಾಡಿ ಒಂದು ಬಟ್ಟೆಯಲ್ಲಿ ಹಾಕಿ ಗಂಟು ಕಟ್ಟುತ್ತಾರೆ. ಮದುಮಗವನ್ನು ಹಡಿಮಂಚದ ಮೇಲೆ ಕೂಡಿಸಿ ಹಿರಿ ಅಕ್ಕ ತಾಯಿ ಮತ್ತು ಐದು ಅಥವಾ ಏಳು ಜನ ಮುತ್ತೈದೆಯವರು ವರನ ಮುಖಕ್ಕೆ ಗಂಟಿನಲ್ಲಿರುವ ಅರಶಿನವನ್ನು ಹಚ್ಚುತ್ತಾರೆ. ಅಂಗಳದಲ್ಲಿ ಮಣ್ಣನ್ನು ಕಲಸಿ ಮೂರು ಮುದ್ದೆಗಳನ್ನು ಮಾಡಿಟ್ಟು ಮೂರು ನೇರ್ಲು ಜಾತಿಯ ಮರದ ಗೂಟವನ್ನು ಮಣ್ಣಿನ ಮುದ್ದೆ ಮೇಲೆ ನೆಟ್ಟು ಮೇಲೆ ಎಳೆ ಹಾಕಿ ಚಪ್ಪರ ಮಾಡಿ ಆಲದ ಹೆರೆಯನ್ನು ಮಧ್ಯೆ ನೆಡುತ್ತಾರೆ. ಹೊಸ ಮಡಕೆಗಳನ್ನು ಒಂದರ ಮೇಲೊಂದು ಇಟ್ಟು ಚಪ್ಪರದ ಮುಂದೆ ಎರಡು ಮಣೆಗಳನ್ನು ಇಡುತ್ತಾರೆ. ಮದುಮಗನಿಗೆ ಕೈಯಲ್ಲಿ ವೀಳ್ಯಾಪಟ್ಟಿ ಕೊಟ್ಟು ಮಣೆಯ ಮೇಲೆ ಕೂರಿಸಿ ಅಕ್ಕ ತಾಯಿ ಮತ್ತು ಐದು ಜನ ಮುತ್ತೈದೆಯರು ಸೇರಿ ಮೀಯಿಸುತ್ತಾರೆ. ಮದುಮಗನ ಕೈಯಲ್ಲಿರುವ ವೀಳ್ಯಾ ಪಟ್ಟಿಯನ್ನು ಮಡಕೆಗೆ ಹಾಕಿಸುತ್ತಾರೆ. ಸುತ್ತಿಕೊಂಡ ಹಳೆಯ ಬಟ್ಟೆಯನ್ನು ಬಿಚ್ಚಿಸಿ ಹೊಸ ಬಟ್ಟೆ ತೊಡಿಸುತ್ತಾರೆ. ಈ ಶಾಸ್ತ್ರಕ್ಕೆ ಬೋಳು ಮೀಯುವ ಶಾಸ್ತ್ರ ಎನ್ನುತ್ತಾರೆ.

ಈ ದಿನ ಬೆಳಿಗ್ಗೆ ಮದುಮಗ ಅಡಿಕೆ ಮರಹತ್ತಿ ಎರಡು ಅಡಿಕೆ ಸಿಂಗಾರದ ಕೊಟ್ಟೆಯನ್ನು ಮತ್ತು ಎರಡು ಹಾಳೆಯನ್ನು ತೆಗೆಯಬೇಕು. ಎರಡು ಸಿಂಗಾರದ ಕೊಟ್ಟೆ ಒಡೆದು ದಾರೆ ಸೀರೆ ಮೇಲಿಟ್ಟು ಗಂಧ, ಸಾಸಿ, ಕಾಡಿಗಿ, ಐದು ಅಥವಾ ಏಳು ಮೊಳ ಮಲ್ಲಿಗೆ ಹೂವು, ಐದು ವೀಳ್ಯಾಪಟ್ಟಿ, ಐದು ಹೊಗೆಸೊಪ್ಪಿನ ಎಸಳು ಹಾಳೆಯಲ್ಲಿಟ್ಟು ಬಣ್ಣದ ವಸ್ತ್ರದಲ್ಲಿ ಕಟ್ಟಿ ಅಕ್ಕಿ

ಮುಡಿಯ ಮೇಲೆ ಇಡುತ್ತಾರೆ. ಇದಕ್ಕೆ "ಹೂಗು ಸಿಂಗಾರ" ಎನ್ನುತ್ತಾರೆ.

ಮದುಮಗನಿಗೆ ತಲೆಗೆ ಮುಂಡಾಸು ಪಂಚಿ ಉಡಿಸಿ, ಹೆಗಲಮೇಲೆ ಒಂದು ಶಲ್ಯ ಹಾಕುತ್ತಾರೆ. ಕೊರಳಿಗೆ ಚಾವುಜಗಿ ಸರಪಳಿ, ಬಂಗಾರದ ಅಡ್ಡಿಕಿ, ಬಂಗಾರದ ಮಣಿ ಸರ ತೋಳಿಗೆ ಬಂಗಾರದ ತೋಳು ಕಡಿ, ಕೈಗೆ ಬೆಳ್ಳಿ ಬಳಿ ಕಾಲಿಗೆ ಬೆಳ್ಳಿ ಗೆಜ್ಜೆ ಪಾಡಂಗ ಕಿವಿಗೆ ಒಂಟಿ ಮುಂತಾದ ಆಭರಣಗಳನ್ನು ಹಾಕಿ ಅಕ್ಕನ ಗಂಡ ಭಾವ ಅಥವಾ ತಂದೆ ಬಾಸಿಂಗ ಕಟ್ಟುತ್ತಾರೆ. ನಂತರ ಮದುಮಗನನ್ನು ಭಾವನಾದವನು ಮನೆಯ ಬಾಗಿಲವರೆಗೆ ಕರೆದುಕೊಂಡು ಹೋದ ತಕ್ಷಣ ಮೂರು ಜನ ಮುತ್ತೈದೆಯರು ಆರತಿ ಬೆಳಗಿ ಹಸಗಾರು ಗೋಡೆಯ ಕೆಳಗೆ ಮಣಿ ಹಾಕಿ ಅದರ ಮೇಲೆ ಪಂಚಿ ಹಾಸಿ ಕೂರಿಸುತ್ತಾರೆ.

ಈ ದಿನ ಹೆಣ್ಣಿನ ಮನೆಯಿಂದ ಮದುಮಗಳ ಅಣ್ಣ ಅಥವಾ ತಮ್ಮ ಗಂಡಿನ ಮನೆಗೆ ಬರಲೇಬೇಕು ದಿಬ್ಬಣ ಹೊರಡುವ ಮೊದಲು ಮದುಮಗಳ ಅಣ್ಣ ಹೂಗು ಸಿಂಗಾರ ಹಿಡಿದು ವರನಕಿಂತ ಮುಂದೆ ಹೊರಡಬೇಕು. ಹೊರಗೆ ತುಳಸಿಕಟ್ಟೆಯ ಬುಡದಲ್ಲಿ ಹಸೆಹಾಕಿ ಜವಳಿಪಿಂಡಿ ತಂದು ಇಡುತ್ತಾರೆ. ಮದುಮಗ ಒಳಗಡೆಯಿಂದ ಹೊರಬಂದು ಸಂಬಂಧಿಕರಿಗೆ ಉಡುಗೊರೆ ಮಾಡುತ್ತಾನೆ. ತಾಯಿ- ತಂದೆಗೆ ನಮಸ್ಕರಿಗೆ ಲಗ್ನಕ್ಕೆ ಹೋಗಿ ಬರುತ್ತೇನೆಂದು ಹೇಳುತ್ತಾನೆ. ತಾಯಿ ಹಾಲು ಹಣ್ಣು ತಿನ್ನಿಸುತ್ತಾಳೆ. ಜವಳಿಪಿಂಡಿಯನ್ನು ಮಡಿವಾಳ ಹೊತ್ತುಕೊಳ್ಳುತ್ತಾನೆ. ಹೂಗು ಸಿಂಗಾರ ಹೊತ್ತವನು ಮುಂದೆ ಜವಳಿಪಿಂಡಿ ಹೊತ್ತವನು ಅವನ ಹಿಂದೆ ನಂತರ ಮದುಮಗ ಮತ್ತು ಚತ್ರಗಾರ ಹೀಗೆ ದಿಬ್ಬಣ ಹೊರಡುತ್ತದೆ

ದಿಬ್ಬಣ ಹೆಣ್ಣಿನ ಮನೆಯ ಹತ್ತಿರ ಹೋದಾಗ ಮದುಮಗನಿಗೆ ಕುರ್ಚಿ ತಂದು ಹಾಕಿ ಕೂರಿಸುತ್ತಾರೆ. ದಿಬ್ಬಣದವರೆಲ್ಲ ಅಲ್ಲಿಯೆ ಇರುತ್ತಾರೆ. ಹೂಗು ಸಿಂಗಾರ ಹೊತ್ತು ತಂದವನು ಹೆಣ್ಣಿನ ಮನೆಗೆ ಹೋಗಿ ಕೊಡುತ್ತಾನೆ. ಹೂಗು ಸಿಂಗಾರದ ಗಂಟಿನಲ್ಲಿರುವ ಕಾಡಿಗಿ, ಗಂಧ, ವಧುವಿಗೆ ಹಚ್ಚಿ ಹೂವು ಸಿಂಗಾರ ಮುಡಿಸುತ್ತಾರೆ. ಮದುಮಗನನ್ನು ಮಳಮನೆಗೆ ಕರೆದುಕೊಂಡು ಹೋಗಿ ಹಡಿ ಮಂಚದ ಮೇಲೆ ಕೂರಿಸುತ್ತಾರೆ. ಹೆಣ್ಣಿನ ಕಡೆಯ ಮುತ್ತೈದೆ ಹೆಣ್ಣೊಬ್ಬಳು ದೀಪ ತೆಗೆದುಕೊಂಡು ಒಂದು ದಿಬ್ಬಣದ ಜೊತೆಗೆ ಬಂದಿರುವ ಗಂಡಿನ ಕಡೆಯ ಮಹಿಳೆಯರನ್ನು ಕರೆದೊಯ್ಯುತ್ತಾಳೆ. ದಾರೆ ಸೀರೆಯನ್ನು ದೀಪ ತಂದಿರುವ ಮಹಿಳೆಯ ಹತ್ತಿರ ಕೊಡುತ್ತಾರೆ. ವಧುವಿಗೆ ಅದೇ ಸೀರೆಯನ್ನು ಉಡಿಸಿ ಮಳಮನೆಗೆ ಕರೆದುಕೊಂಡು ಬಂದು ವರನ ಜೊತೆಯಲ್ಲಿ ಹಡಿ ಮಂಚದ ಮೇಲೆ ಕೂಡಿಸುತ್ತಾರೆ. ವಧುವಿನ ತಂಗಿ ಅಥವಾ ತಮ್ಮ ಬಂದು ವಧೂವರರ ಕಾಲು ತೊಳೆಯುತ್ತಾರೆ. ಹೆಣ್ಣಿನ ತಂದೆಗೆ ಗಂಡಿನ ಕಡೆಯವರು ನಾಲ್ಕು ವರ ತೆರಕೊಡುತ್ತಾರೆ.

ವಧುವಿನ ತಂದೆ. ತೋಳು ಕಡಿ, ಕೈಗೆ ಬೆಳ್ಳಿಬಳಿ, ದಿಟ್ಟಸರ, ಮುಂತಾದ ಆಭರಣಗಳನ್ನು ಧರಿಸಿಕೊಳ್ಳುತ್ತಾನೆ. ತಲೆಗೆ ಮುಂಡಾಸನ ಸುತ್ತಿ ಮಡಿಪಂಚಿ ಉಟ್ಟುಕೊಂಡು ಹೆಗಲಮೇಲೆ ಶಲ್ಯೆ ಹಾಕಿಕೊಳ್ಳುತ್ತಾನೆ. ಒಂದು ಗಿಂಡಿಯಲ್ಲಿ ಹಾಲು ಹಾಕಿ. ಗಿಂಡಿಯನ್ನು ಹೊತ್ತು ಒಳಗಿಂತ ಹೊರಗೆ ಬಂದು ಗಂಡಿನ ಕೈಮೇಲೆ ಹೆಣ್ಣಿನ ಕೈಯಿಟ್ಟು ಹೆಣ್ಣಿನ ಕೈ ಮೇಲೆ ಒಂದು ಚಿಕ್ಕದಾದ ಬಂಗಾರದ ನಾಣ್ಯ ಇಡುತ್ತಾರೆ. ಗಿಂಡಿಯಿಂದ ನಾಣ್ಯದ

ಮೇಲೆ ಹಾಲು ಮೂರು ಸಾರಿ ಹಾಕಿ ಧಾರೆ ಎರೆಯುತ್ತಾನ. ನಂತರ ಹೆಣ್ಣಿನ ಕೈ ಮೇಲಿರುವ ನಾಣ್ಯವನ್ನು ಗಂಡು ನಿಧಾನವಾಗಿ ತನ್ನ ಕೈಗೆ ಜಾರಿಸಿಕೊಳ್ಳುತ್ತಾನೆ. ಧಾರೆ ಶಾಸ್ತ್ರ ಮುಗಿಯುತ್ತದೆ.

ನಂತರ ಮಡಿವಾಳ ಹೊತ್ತು ತಂದ ಜವಳಿಪಿಂಡಿಯಲ್ಲಿರುವ ವಸ್ತ್ರಗಳನ್ನು ಹೆಣ್ಣಿನ ಕಡೆಯವರು ಉಡುಗೊರೆ ಮಾಡುತ್ತಾರೆ. ಧಾರೆ ಎರೆದ ವಧುವಿನ ತಂದೆಗೆ ಹದಿನಾರು ಮೊಳದ ಧಾರೆ ಹಚ್ಚಡ ಜನ್ನಾರದ ದಟ್ಟಿಗಳನ್ನು ಉಡುಗೊರೆ ಮಾಡುತ್ತಾರೆ ನಂತರ ಊಟ ಆಗುತ್ತದೆ.

**ಋತುಮತಿ**

ಗೊಂಡರಲ್ಲಿ ಏಳು ಮತ್ತು ಹನ್ನೆರಡು ವರ್ಷಗಳ ಹೆಣ್ಣು ಮಕ್ಕಳನ್ನು ಮದುವೆ ಮಾಡುತಿದ್ದರಿಂದ ಮದುವೆಯಾಗುವುದರೊಳಗೆ ಹೆಣ್ಣು ಮಕ್ಕಳು ಋತುಮತಿಯಾಗುವುದು ತುಂಬಾ ಅಪರೂಪ ಮದುವೆಗೆ ಮುಂಚಿ ಋತು ಆದರೆ ಯಾವ ರೀತಿಯ ಶಾಸ್ತ್ರವನ್ನು ಮಾಡುವುದಿಲ್ಲ. ಮದುವೆಯ ನಂತರ ಋತುಮತಿ ಆದರೆ ದಿಂಡಿಗೆ ಶಾಸ್ತ್ರ (ದಿಂಡು ಮಾಡುವುದು) ಮಾಡುತ್ತಾರೆ. ತಾಯಿ ಮನೆಯವರು ಹೂವು ಒಡವೆ ಸೀರೆ ತಂದು ಹುಡುಗಿಗೆ ತೊಡಿಸಿ ಸಿಂಗರಿಸಿ ಕೂಡಿಸಿ ಆರತಿ ಮಾಡುತ್ತಾರೆ. ಅನ್ನ, ಸಾರು, ಶ್ಯಾವಿಗೆ ಪಾಯಸ ಮಾಡಿ ಊಟ ಮಾಡುತ್ತಾರೆ.

**ಪುನರ್ವಿವಾಹ**

ಪುನರ್ವಿವಾಹಕ್ಕೆ ಗೊಂಡರು 'ಬಿಡ್‌ದಾರಿ' ಮದುವೆ ಅನ್ನುತ್ತಾರೆ. ಈ ಮದುವೆಗೆ ಗಂಡಸತ್ತ ಹೆಂಗಸಾಗಿರಬೇಕು. ಹೆಂಡತಿ ಕಳೆದುಕೊಂಡ ವಿದುರನಾಗಿರಬೇಕು. ವಿದವೆ ಮತ್ತು ವಿದುರರ ಪರಸ್ಪರ ಒಪ್ಪಿಗೆಯಿಂದ ಎರಡು ಕಡೆಯ ಮನೆಯವರು ಮಾತಾಡಿ ಮದುವೆ ಮಾಡುತ್ತಾರೆ. ಗಂಡು ಒಂದು ಸೀರೆ, ಬಳೆ, ಕರೀಮಣಿ ತೆಗೆದುಕೊಂಡು ರಾತ್ರಿ ಹೊತ್ತು ವಿಧವೆಯ ಮನೆಗೆ ಹೋಗುತ್ತಾನೆ, ಮಹಿಳೆಯರು ಮದುವೆಯಾಗಲಿರುವವಳಿಗೆ ಸೀರೆ ಉಡುಸಿ ಬಳೆಯಿಟ್ಟು ಕರಿಮಣಿ ಹಾಕಿ ವಿದವೆ- ವಿಧುರರನ್ನು ಕೂಡಿಸಿ ಸಾಸಿ ಹಾಕುತ್ತಾರೆ. ಸೇರಿದವರೆಲ್ಲರಿಗೂ ಊಟದ ವ್ಯವಸ್ಥೆಯಿರುತ್ತದೆ. ಈ ಮದುವೆಗೆ ಊರಿನವರು, ಮುತ್ತೈದೆ ಮಹಿಳೆಯರು ಯಾರೂ ಭಾಗವಹಿಸುವುದಿಲ್ಲ.

## ಗೊಂಡರ ಹಬ್ಬ-ಹರಿದಿನಗಳು

ಗೊಂಡರು ಮುಖ್ಯವಾಗಿ ದೀಪಾವಳಿ ಸಂಕ್ರಾಂತಿ, ಶಿವರಾತ್ರಿ, ಕೊಡಿನಮವಾಸೆ, ಗಡಿಭೋಗ, ಹರಿದಿನದ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ವ್ಯವಸಾಯವೇ ಉಸಿರಾಗಿರುವ ಗೊಂಡರಿಗೆ ಹೊಸ್ತು ಮತ್ತು ಶಿವರಾತ್ರಿ ಹಬ್ಬಗಳು ತುಂಬಾ ವಿಶಿಷ್ಟ ಹಬ್ಬಗಳಾಗಿವೆ. ತಾವು ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲವಾಗಿ ಬರುವ ಬೆಳೆಗೆ ತೋರುವ ಗೌರವವು ಹೊಸ್ತು ಹಬ್ಬವಾಗಿದೆ. ಭತ್ತದ ತೆನೆ ಹಣ್ಣಾಗುವ ಸಂದರ್ಭದಲ್ಲಿ ಯಜಮಾನ ಗದ್ದೆಗೆ ಪೂಜೆ ಮಾಡಿ ಕೆಲವು ತೆನೆಗಳನ್ನು ತಂದು ಅವುಗಳೊಡನೆ ಹಲಸಿನ ಎಲೆ, ವೀಳ್ಯೆದೆಲೆ ಅಡಿಕೆ ಅಣ್ಣೆಸೊಪ್ಪಿನ ಹೂವು ಮೊದಲಾದವುಗಳನ್ನು ಸೇರಿಸಿ ಬಾಗಿಲು, ಕಿಟಕಿಗಳಿಗೆ ಕಟ್ಟುತ್ತಾರೆ.

ಅದಕ್ಕೆ ಅವರು ''ಕದಿರುಕಟ್ಟೋದು'' ಎನ್ನುತ್ತಾರೆ. ಮನೆಯ ಮುಂದಿನ ಮೇಟೆಕಂಬಕ್ಕೆ ಮೊಗೆಕಾಯಿ ಮತ್ತು ಭತ್ತದ ತೆನೆಯಿಂದ ಕೂಡಿದ ಇತರೆ ವಸ್ತುಗಳನ್ನೆಲ್ಲಾ ಕೂಡಿಸಿಕಟ್ಟಿ ಪೂಜೆ ಸಲ್ಲಿಸುತ್ತಾರೆ. ಆ ದಿನ ಗದ್ದೆಯಿಂದ ತಂದ ಭತ್ತವನ್ನು ಕುಟ್ಟಿ ಮನೆಯಲ್ಲಿರುವ ಅಕ್ಕಿಯೊಡನೆ ಹೊಸ ಅಕ್ಕಿಯನ್ನು ಸೇರಿಸಿ ಪಾಯಸ ಮಾಡಿ ಊಟ ಮಾಡುತ್ತಾರೆ. ಮನೆಯ ಒಳಗೆ ಹಾಗೂ ಮೇಟೆಕಂಬದ ಸುತ್ತಾ ಶೇಡಿ ಬರೆಯುತ್ತಾರೆ.

**ದೀಪಾವಳಿ**

ಗೊಂಡರ ತಿಂಗಳ ಲೆಕ್ಕ ದೀಪಾವಳಿಯಿಂದ ಪ್ರಾರಂಭವಾಗುತ್ತದೆ. ಈ ಹಬ್ಬ ನಡೆಯುವ ತಿಂಗಳಿಗೆ ದೀವಳ್ಗಿ ತಿಂಗಳು ಎನ್ನುತ್ತಾರೆ. ಕೊಡಿ ತಿಂಗಳ ನಂತರ ಬರುವ ತಿಂಗಳು ದೀವಳ್ಗಿ. ದೀಪಾವಳಿ ಹಬ್ಬಕ್ಕೆ 'ಹಾಲ ಹಬ್ಬ' ವೆಂದೂ ಕರೆಯುತ್ತಾರೆ. ಹಬ್ಬದ ಮೊದಲನೆಯ ದಿವಸ ಎಣ್ಣೆ ಹಚ್ಚಿಕೊಂಡು ಬೂರೆ ನೀರನ್ನು ಮೀಯುವ ಪದ್ಧತಿ ಬೇರೆ ಜನಾಂಗದಲ್ಲಿರುವಂತೆ ಇವರಲ್ಲೂ ಇದೆ. ಆ ನೀರನ್ನು ಹಬ್ಬದ ಹಿಂದಿನ ದಿನ ರಾತ್ರಿ ಮಣ್ಣಿನ ಹರಿವೆ ಅಥವಾ ಹಂಡೆಯಲ್ಲಿ ತುಂಬಿರುತ್ತಾರೆ. ಅದಕ್ಕೆ ಕೆಂಪು ಜಾಜನ್ನು (ಕಲ್ಲಿನ ಬಣ್ಣ) ಹಚ್ಚಿ ಶೇಡಿಯಿಂದ ಅಡಿಕೆಯ ಸಿಂಗಾರ ಮುಂತಾದ ಚಿತ್ರಗಳನ್ನು ಬರೆದಿರುತ್ತಾರೆ.

ಇವರು ತ್ರಯೋದಶಿ ರಾತ್ರಿಯೇ ಬಲೀಂದ್ರವನ್ನು ತರುವುದು. ಕುಂಬಾರನ ಮನೆಯಿಂದ ಹೊಸ ಸಣ್ಣ ಕೊಡವನ್ನು ತಂದಿರುತ್ತಾರೆ. ಹೊಳೆಗೆ ಅಥವಾ ಬಾವಿಗೆ ವೀಳ್ಯಾಪಟ್ಟೆ, ಅಕ್ಷತೆ ಕರಕಯನ್ನು ತೆಗೆದುಕೊಂಡು ಹೋಗಿ ಪೂರ್ವದಿಕ್ಕಿಗೆ ಮುಖ ಮಾಡಿ ನಿಂತು ಬಾಳಿ ಎಲೆಯಲ್ಲಿ ಅಕ್ಕಿ ವೀಳ್ಯಾಪಟ್ಟೆಯನ್ನಿಟ್ಟು ಪೂಜೆ ಮಾಡಿ ಕೊಡವನ್ನು ತೊಳೆದು ನೀರನ್ನು ತುಂಬುತ್ತಾರೆ.

ಬಲೀಂದ್ರವನ್ನು ಕೂಡಿಸುವ ಜಾಗಕ್ಕೆ 'ಕಣ' ಅಥವಾ''ದೀವಳ್ಗಿ ಬಿಳು''ಎನ್ನುತ್ತಾರೆ. ಸ್ನಾನ ಮಾಡಿ ಅಡಿಕೆ ಮಾವಿನ ಎಲೆ, ಹಲಸಿನ ಎಲೆಗಳನ್ನು ಕಟ್ಟುತ್ತಾರೆ. ಈ ಫಲಾವಳಿಯ ಕೆಳಗೆ ಕೊಡವನ್ನು ಇಡುತ್ತಾರೆ. ಅದಕ್ಕೆ ಮಲ್ಲಿಗೆ ಜಾಜಿ ಹೂವು ಮುಡಿಸಿ ಕೊಡದ ಮುಂಭಾಗದಲ್ಲಿ ಮಣೆಯಿಟ್ಟು ಒಂದು ಮೊಗೆಕಾಯಿ ಮತ್ತು ತೆಂಗಿನಕಾಯಿ ಇಟ್ಟು ಮೂರು ಹಣತೆಯಲ್ಲಿ ಮೂರು ದೀಪ ಹಚ್ಚಿ ಊದುಬತ್ತಿ ಲೋಭಾನ ಹಚ್ಚಿ ಬೆಳಗಿ ಪೂಜೆ ಮಾಡುತ್ತಾರೆ. ನೀರುಬ್ಬೆ ಮತ್ತು ಕೊಟಗಿ ಎಂಬ ಅಕ್ಕಿಯ ಕಜ್ಜಾಯ ದೋಸೆಗಳನ್ನು ಮಾಡಿ ಊಟ ಮಾಡುತ್ತಾರೆ.

ಅಮವಾಸ್ಯೆಯ ರಾತ್ರಿ ಬಲೀಂದ್ರನಿಗೆ ಪೂಜೆ ಸಲ್ಲಿಸಿ ಆರತಿ ಮಾಡಿ ಕಳುಹಿಸುತ್ತಾರೆ. ಅಮವಾಸ್ಯೆಯ ನಂತರ ಪಾಡ್ಯದ ದಿವಸ ಗಂಟಿ ಹಬ್ಬ, ಮನೆಯಲ್ಲಿರುವ ಎತ್ತು, ಆಕಳ, ಎಮ್ಮೆ, ಕೋಣಗಳನ್ನು ಸ್ನಾನ ಮಾಡಿಸಿ ಶೇಡಿ ಬಳಿದು, ಹೂವು ಹಾಕಿ ಸಿಂಗರಿಸಿ, ಪೂಜೆ ಮಾಡಿ ಬಟ್ಟೆಗೆ ಬಿಟ್ಟು ಓಡಿಸುತ್ತಾರೆ. ರಾತ್ರಿ ತುಳಸಿ ಪೂಜೆ ಕಾಯಿಗಳಿರುವ ನೆಲ್ಲಿಕೊಂಬೆಗಳು ಮತ್ತು ಹುಣಿಸೆಕೊಂಬುಗಳನ್ನು ತಂದು ತುಳಸಿಕಟ್ಟೆಯ ಮುಂದೆ ನೆಟ್ಟು, ಅವಲಕ್ಕಿ, ಮಂಡಕ್ಕಿಗಳನ್ನು ನೈವೇದ್ಯ ಮಾಡಿ ಪೂಜೆ ಮಾಡುತ್ತಾರೆ. ಗೊಂಡರು ವೈಷ್ಣವ ಸಂಪ್ರದಾಯದವರಾದ್ದರಿಂದ ಮತ್ತು ಪ್ರತಿಯೊಬ್ಬ ಗೊಂಡರ ಮನೆಯ ಮುಂದೆ ತುಳಸಿಕಟ್ಟೆ ಇರುವುದರಿಂದ ತುಳಸಿ ಪೂಜೆ

ಬೇರೆ ಜನಾಂಗದವರ ಪ್ರಭಾವದಿಂದ ಬಂದಿರಲಾರದು. ಮೂಲತಃ ಈ ಜನಾಂಗದವರೇ ತುಳಸಿ ಪೂಜೆಯನ್ನು ರೂಢಿಸಿಕೊಂಡದ್ದಾಗಿದೆ ಎಂದು ಹೇಳಬಹುದು.

**ಶಿವ ರಾತ್ರಿ**

ಶಿವರಾತ್ರಿ ಗೊಂಡರ ಪ್ರಮುಖವಾದ ಸುಗ್ಗಿ ಹಬ್ಬ . ಈ ಹಬ್ಬವನ್ನು ಹಿರಿ ಸುಗ್ಗಿ ತಿಂಗಳಲ್ಲಿ(ಫೆಬ್ರವರಿ) ಆಚರಿಸುತ್ತಾರೆ. ಶಿವರಾತ್ರಿ ಉಪವಾಸದ ದಿವಸ ರಾತ್ರಿಯವರೆಗೆ ಉಪವಾಸ ಇದ್ದು ರಾತ್ರಿ ಬಾಳೆಹಣ್ಣು ಸೀಕರಣೆ ಕಾಯಿ ಹಾಲು ದೋಸೆಯನ್ನು ಫಲಾಹಾರ ಮಾಡಿ ಹಣ್ಣುಕಾಯಿ. ಹೂವು ಹೋಳಿ ಹಳುಬು ಕುಣಿತದ ಎಲ್ಲಾ ವೇಷ ಭೂಷಣಗಳನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋಗುತ್ತಾರೆ. ಭಟ್ಟರಿಂದ ದೇವಕಿಗೆ ಹಣ್ಣುಕಾಯಿ ಸಲ್ಲಿಸಿ ಮಂಗಳಾರತಿ ಮಾಡಿಸಿ. ವೇಷಭೂಷಣಗಳನ್ನು ತೊಟ್ಟುಕೊಳ್ಳುತ್ತಾರೆ. ದೇವರ ದೀಪದಿಂದ ಒಂದು ಕದಿರು ಬತ್ತಿಯನ್ನು ಹಚ್ಚಿಕೊಂಡು ದೇವಸ್ಥಾನದ ಎದಿರು ಸ್ವಲ್ಪ ದೂರದಲ್ಲಿ ಭತ್ತದ ಹುಲ್ಲು ಹಾಕಿ ಬತ್ತಿಯಿಂದ ಹುಲ್ಲಿಗೆ ಬೆಂಕಿ ಹೊತ್ತಿಸಿ. ಭಟ್ಟರಿಂದ ತೆಂಗಿನಕಾಯಿ ಒಡಿಸಿ ಪೂಜೆ ಮಾಡಿಸಿ. ಹುಲ್ಲಿನ ಬೆಂಕಿಯ ಸುತ್ತ ಪ್ರದಕ್ಷಿಣೆ ಹಾಕುತ್ತಾ "ದುಮ ಸಾಲೆ" ಹೊಡಿಯುತ್ತಾರೆ. ಮುಮ್ಮೇಳದವನು ದುಮಸಾಲೆನ್ನಿರೂ ಇಲ್ಲಿಯ ಅಮ್ಮನವರಿಗೆ ಎಂದ ಕೂಡಲೆ ಹಿಮ್ಮೇಳದವರು ದುಮಸಾಲೊ ಎನ್ನುತ್ತಾರೆ.

ದುಮ ಸಾಲೆನ್ನಿರೊ ಇಲ್ಲಿ ಅಮ್ಮನವರಿಗೆ ದುಮ ಸಾಲೋ
ದುಮ ಸಾಲೆನ್ನಿರೋ ಜಟ್ಟಿಗಾ ಮಹರಾಯಗೆ - ದುಮಸಾಲೋ
ಮಮ ಸಾಲೆ ನ್ನಿರೊ ಚೌಡಮ್ಮ ತಾಯಿಗೆ - ದುಮಸಾಲೋ
ದುಮ ಸಾಲೆ ನ್ನಿರೋ ನಾಗಾ ದೇವಿಗೆ - ದುಮಸಾಲೋ
ದುಮ ಸಾಲೆನ್ನಿರೋ ನಾಗಾ ದೇವಿಗೆ - ದುಮಸಾಲೋ
ದುಮ ಸಾಲೆನ್ನಿರೊ ಭೂಮಿದೇವಿಗೆ ದುಮಸಾಲೋ
ದುಮ ಸಾಲೆನ್ನಿರೊ-'- ಮಾಸ್ತಿಯಮ್ಮಗೆ ದುಮಸಾಲೋ

ಹೀಗೆ ಎಲ್ಲಾ ದೇವತೆಗಳಿಗೂ ದುಮಸಾಲೆ ಹೊಡೆದು ಪುನಃ ದೇವಸ್ಥಾನಕ್ಕೆ ಬಂದು ದೇವಸ್ಥಾನದ ಮುಂದೆ ಕುಣಿತ ಮಾಡಿ ಅಲ್ಲಿಂದ ಹೊರಟು ರಾತ್ರಿ ಬೆಳಗಿನ ತನಕ ಎಲ್ಲರ ಮನೆಗಳಿಗೂ ಹೋಗಿ ಕುಣಿತ ಮಾಡಿ ಮಾರನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಎಲ್ಲರೂ ಒಂದು ಕಡೆ ಸೇರಿ ಕುಣಿತದ ವೇಷಭೂಷಣಗಳನ್ನು ಬಿಚ್ಚಿ ಒಂದು ಕಡೆಯಿಟ್ಟು ಅವರವರ ಮನೆಗಳಿಗೆ ತೆರಳುತ್ತಾರೆ. ಆ ದಿನ ಮನೆಯಲ್ಲಿ ಅನ್ನ ಸಾರು ಪಾಯಸ ತಯಾರು ಮಾಡುತ್ತಾರೆ. ಕುಣಿತದವರು ಊಟ ತೀರಿಸಿಕೊಂಡು ಮೂರು ಗಂಟೆಗೆ ಎಲ್ಲರೂ ಕುಣಿತಕ್ಕೆ ಪುನಃ ಸೇರುತ್ತಾರೆ. ತಮ್ಮ ಊರಿನ ಸುತ್ತಮುತ್ತಲಿನ ಗ್ರಾಮಗಳ ಪ್ರತಿಯೊಬ್ಬರ ಮನೆಗೂ ಹೋಗಿ ಕುಣಿತ ಮಾಡುತ್ತಾರೆ. ಹೋಳಿ ಮಕ್ಕಳಿಗೆ ಪ್ರತಿ ಕುಟುಂಬದವರು ಐದರಿಂದ ಇಪ್ಪತ್ತೈದು ರೂಪಾಯಿಗಳವರೆಗೆ ಮತ್ತು ತೆಂಗಿನ ಕಾಯಿಗಳನ್ನು ಕೊಡುತ್ತಾರೆ. ಕಾಮನ ವೇಷದವರಿಗೆ ಪ್ರತ್ಯೇಕ ಹಣ ಕೊಡುತ್ತಾರೆ. ಮೂರನೇ ದಿವಸ ಹನ್ನೊಂದು ಗಂಟೆಯವರೆಗೆ ಎರಡು ರಾತ್ರಿ ಒಂದು ಹಗಲು ನಿರಂತರವಾಗಿ ಹೋಳಿ ಮಕ್ಕಳ ಕುಣಿತ ಸಾಗುತ್ತದೆ. ಗ್ರಾಮಸ್ಥರಿಂದ ಒಂದು ಸಾವಿರದ ಐನೂರು ರೂಪಾಯಿಗಳವರೆಗೆ ಮತ್ತು ನೂರಾರು

ತೆಂಗಿನ ಕಾಯಿಗಳು ಸಂಗ್ರಹವಾಗುತ್ತವೆ.

ಒಂದು ಒಳ್ಳೆಯ ದಿವಸವನ್ನು ಗೊತ್ತು ಮಾಡಿ, ಸಂಗ್ರಹವಾದ ಹಣದಿಂದ ಚೀಲಗಟ್ಟಲೆ ಅವಲಕ್ಕಿ ಬೆಲ್ಲ ತಂದು ದೇವಸ್ಥಾನಕ್ಕೆ ಹೋಗಿ ದೇವರಿಗೆ, ಅಭಿಷೇಕ ಮಾಡಿಸಿ ಪೂಜೆ ಸಲ್ಲಿಸಿ, ಅವಲಕ್ಕಿ ಬೆಲ್ಲ ಸೇರಿಸಿ ತೆಂಗಿನಕಾಯಿ ತಂದು ಹಾಕಿ ಊರಿನವರೆಲ್ಲ ಸೇರಿ ತಿನ್ನುತ್ತಾರೆ. ಹೆಚ್ಚಾದ ಅವಲಕ್ಕಿಯನ್ನು ಪಾಲು ಮಾಡಿ ಹಂಚಿಕೊಳ್ಳುತ್ತಾರೆ.

**ಸಂಕ್ರಾಂತಿ ಹಬ್ಬ**

ಗೊಂಡರು ಶೋಣೆ (ಶ್ರಾವಣ)ತಿಂಗಳಲ್ಲಿ ಸಂಕ್ರಾಂತಿ ಹಬ್ಬವನ್ನು ಆಚರಿಸುತ್ತಾರೆ. ಸಂಕ್ರಾಂತಿ ದಿವಸ ಸಂಜೆ ಗೊಂಡರು ಹಳ್ಳಿಗಳ ಅಕ್ಕ ಪಕ್ಕದಲ್ಲಿ ಬೆಳೆಯುವ ಮುಂಡಿಗೆ (ಮುಂಡಿರೆ)ಯನ್ನು ಕಡದು ಒಂದು ಕಡೆ ಇಟ್ಟುಕೊಳ್ಳುತ್ತಾರೆ. ಸಂಕ್ರಾಂತಿಯ ಮರುದಿವಸ ಬೆಳಗಿನ ಜಾವ ನಾಲ್ಕು ಗಂಟೆಗೆ ಹೊಲಕ್ಕೆ ಹೋಗಿ ಕಡಿದಿಟ್ಟ ಮುಂಡಿಗೆಯ ಕೋಲನ್ನು ಎಕ್ರೆಗೆ ಒಂದೊಂದರಂತೆ ಗದ್ದೆಯ ಹಾಳಿಯ ಮೇಲೆ ನೆಡುತ್ತಾರೆ. ಮಲೆನಾಡು ಭಾಗದ ವ್ಯವಸಾಯ ಮಾಡುವ ಎಲ್ಲಾ ಜನಾಂಗದವರಲ್ಲಿಯೂ ಈ ಪದ್ಧತಿಯಿದೆ. ಈ ಪದ್ಧತಿಗೆ "ಬೆಚ್ಚು" ನಿಲ್ಲಿಸುವುದು ಎನ್ನುವರು "ಬೆಚ್ಚು" ಪಕ್ಷಿಗಳನ್ನು ಹೆದರಿಸಿ ಬೆಳೆ ರಕ್ಷಿಸುತ್ತದೆ. ಮತ್ತು ಇದು ಪುರುಷಲಿಂಗದ ಸಂಕೇತವೂ ಹೌದು ಆದ್ದರಿಂದ ಬೆಚ್ಚನ್ನು ನಿಲ್ಲಿಸಿದ್ದರೆ ಭೂಮಿಗೆ ಗಂಡನನ್ನು ಮಾಡಿದಂತೆ ಇದನ್ನು ಹುಗಿಯದೆ ಇದ್ದರೆ ಬೆಳೆ ಹುಲುಸಾಗುವುದಿಲ್ಲ, ಎಂಬ ನಂಬಿಕೆಯಿದೆ. ಬೆಚ್ಚುಗಳನ್ನು ಗದ್ದೆಗಳಲ್ಲಿ ನಿಲ್ಲಿಸಿ ಬಂದನಂತರ ಮನೆಯಲ್ಲಿ ಆ ದಿನ ಕೊಟ್ಟೆ ಕಡಬು, ಪಾಯಸ, ದೋಸೆ, ಅನ್ನ - ಸಾರು ಊಟ ಮಾಡುತ್ತಾರೆ.

**ಹರಿದಿನ**

ಗೊಂಡರು ವೈಷ್ಣವ ಸಂಪ್ರದಾಯದವರಾದ್ದರಿಂದ ತಿರುಪತಿ ವೆಂಕಟರಮಣನ ಭಕ್ತರು ವರ್ಷಕ್ಕೊಮ್ಮೆ ದೇವರ ಕಾರ್ಯ ಮಾಡುತ್ತಾರೆ. ಇದು ಒಂದೇ ದಿನದ ಕಾರ್ಯ. ಈ ದಿವಸ ತುಳಸಿಗೆ ಪೂಜೆ ಸಲ್ಲಿಸಿ ಮನೆಯವರೆಲ್ಲರೂ ನಾಲ್ಕು ಆಣೆ ಎಂಟು ಆಣೆ, ಒಂದು ರೂಪಾಯಿ ಹಾಕಿ ಹರಕೆ ಕಟ್ಟುತ್ತಾರೆ. ಇದಕ್ಕೆ ಚಕ್ರ ಎನ್ನುತ್ತಾರೆ. ಹೀಗೆಯೇ ಪ್ರತಿವರ್ಷವೂ ಹರಕೆ ಕಟ್ಟುತ್ತಾ ಹೋಗುತ್ತಾರೆ, ಹಣಕಾಸಿನ ಅನುಕೂಲವಿದ್ದವರು ಹತ್ತು ಅಥವಾ ಇಪ್ಪತ್ತು ವರ್ಷಕ್ಕೊಮ್ಮೆ ಸಂಗ್ರಹಿಸಿದ ಹರಕೆಯ ಹಣವನ್ನು ತೆಗೆದುಕೊಂಡು ತಿರುಪತಿ ಯಾತ್ರೆ ಮಾಡುತ್ತಾರೆ. ಯಾತ್ರೆ ಪೂರೈಸಿ ಕೊಂಡು ಬಂದ ನಂತರ"ಹರಿದಿನ" ಆಚರಿಸುತ್ತಾರೆ.

ಹರಿದಿನ ಮಾಡುವ ಮುಂಚೆ ಮಹೂರ್ತ ಮಾಡುತ್ತಾರೆ. ತುಳಸಿ ಮುಂದೆ ಒಂದು ಬಾಳೆ ಎಲೆ ಇಟ್ಟು ಅಡಿ ಅಕ್ಕಿ ಹಾಕಿ ಅಕ್ಕಿಯ ಮೇಲೆ ಒಂದು ತೆಂಗಿನ ಕಾಯಿಟ್ಟು ಹೂವು ಹಾಕುತ್ತಾರೆ. ತುಳಸಿಗೆ ಮಂಗಳಾರತಿ ಮಾಡಿ ಪೂಜೆ ಸಲ್ಲಿಸುತ್ತಾರೆ. ನಂತರ ಅಡಿ ಅಕ್ಕಿಯನ್ನು ಮಡಿಬಟ್ಟೆಯಲ್ಲಿ ಕಟ್ಟಿಕೊಂಡು ತಲೆಮೇಲೆ ಹೊತ್ತುಕೊಂಡು ತಮ್ಮ ಜಮೀನಿನಲ್ಲಿರುವ ಮಾವು ಅಥವಾ ಹಲಸಿನ ಮರದ ಬುಡದಲ್ಲಿಟ್ಟು ಪೂಜಿಸ ಗೋವಿಂದೋ ಗೋವಿಂದ ಎಂದು ದಂಡು ಹಾಕುತ್ತಾರೆ. ನಂತರ ಆ ಮರವನ್ನು ಕಡಿದು ಅದರಿಂದ ಹೊಸದಾದ ಮರಗಿ, ಮಣೆಗಳು, ಕಳಸಗಳನ್ನು ತಯಾರಿಸುತ್ತಾರೆ. ಮಹೂರ್ತ ಹದಿನೈದು ದಿವಸಗಳ ನಂತರ

"ದಿನಾಬಚ್ಚುದು" ಎಂಬ ಕಾರ್ಯ ಒಂದು ಮಂಗಳವಾರ ನಡೆಯುತ್ತದೆ. ಹರಿದಿನ ಕಾರ್ಯಕ್ಕೆ ಚಪ್ಪರ ಹಾಕುವುದು ಅಟ್ಲು ಮನೆಗೆ (ಅಡಿಗೆ) ಮಾಡುವ ಕಾರ್ಯ ನಡೆಯುತ್ತದೆ. ಅಟ್ಲು ಮನೆಯಲ್ಲಿ ಏಳು ಅಥವಾ ಒಂಬತ್ತು ಬಲೆಗಳನ್ನು ಹೊಸದಾಗಿ ಮಣ್ಣಿನಿಂದ ತಯಾರಿಸುತ್ತಾರೆ. ಈ ಕಾರ್ಯಕ್ಕೆ ಮೂರು ನಾಲ್ಕು ಊರಿನ ಗೊಡರು ಸೇರುತ್ತಾರೆ. ಸಂಜೆ ಆರು ಗಂಟೆಗೆ ದಿನ ಬುಚ್ಚುವಾ ಕಾರ್ಯಕ್ಕೆ ಸೇರಿದ ಎಲ್ಲರೂ ಸ್ನಾನ ಮಾಡುತ್ತಾರೆ. ತುಳಸಿಗೆ ಪೂಜೆ ಸಲ್ಲಿಸಿ ಗೋವಿಂದಯ್ಯ ಗೋವಿಂದೊ ಹೌದರಣ್ಣ ಗೋವಿಂದೋ ಎಂದು ಹೇಳುತ್ತಾ ಕುಣಿಯುತ್ತಾರೆ. ನಂತರ ವೀಳ್ಯಾ ತಯಾರಿಸಿ, ಗೊಂಡರ ಸಮಾಜದವರು ಎಲ್ಲೆಲ್ಲಿ ಇದ್ದಾರೊ ಅಲ್ಲಿಗೆಲ್ಲ ಕರೆಮುಟ್ಟಿಸಲು ಒಂದೊಂದು ಊರಿಗೆ ಎರಡು ಜನರಂತೆ ವೀಳ್ಯಾ ಹಂಚಲು ನೇಮಿಸುತ್ತಾರೆ. ವೀಳ್ಯಾ ಹಂಚಲು ನೇಮಕವಾದವರು ಪ್ರತಿಯೊಂದು ಊರಿಗೆ ಹೋಗಿ ಆ ಊರಿನ ಮುಖಂಡನಿಗೆ ಸುದ್ದಿ ನೀಡಿ ಊರಿನ ಪ್ರತಿಯೊಬ್ಬನಿಗೂ ತಿಳಿಸಬೇಕೆಂದು ವೀಳ್ಯಾ ಹಂಚಿ ಬರುತ್ತಾರೆ.

ಗುರುವಾರ ದಿವಸ ಕುಂಬಾರರಿಗೆ ಹರಿದಿನ ಕಾರ್ಯಕ್ಕೆ ಮಡಕೆಗಳನ್ನು ತಯಾರಿಸುವಂತೆ ವೀಳ್ಯಾ ಕೊಟ್ಟು ಬರುತ್ತಾರೆ. ನಂತರ ಮಡಕೆಗಳ ತರಲು ಐದು ಅಥವಾ ಮೂರು ಜೋಡಿ ಗಂಡ ಹೆಂಡತಿಯರು ಹರಿದಿನ ಕಾರ್ಯ ನಡೆಸುವ ಕುಟುಂಬದ ಒಂದು ಜೋಡಿ ಗಂಡ ಹೆಂಡತಿಯರು ಸೇರಿ ಮಡಕೆಗಳನ್ನು ತರಲು ಹೋಗುತ್ತಾರೆ. ಮಡಕೆ ತರುವವರು ಉಪವಾಸವಿರಬೇಕು. ಬೆಣತಕ್ಕಿ ಗಂಜಿ, ಅವಲಕ್ಕಿಬೆಲ್ಲ ತಿನ್ನಬಹುದು. ಕಾಲಿಗೆ ಚಪ್ಪಲಿ ಹಾಕುವ ಹಾಗಿಲ್ಲ. ಬರಿಗಾಲಲ್ಲಿ ನಡೆದು ಹೋಗಬೇಕು.

ಕುಂಬಾರ ಹರಿದಿನ ಕಾರ್ಯಕ್ಕೆ ತಯಾರಿಸಿದ ಮಡಕೆಗಳನ್ನು ಒಂದೆಡೆ ಇಟ್ಟು ಪೂಜೆ ಸಲ್ಲಿಸಿ, ಮಂಗಳಾರತಿ ಮಾಡುತ್ತಾನೆ. ಗೋವಿಂದೋ ಗೋವಿಂದ ಎಂದು ದಂಡು ಹಾಕಿ, ಗೊಂಡರ ತಲೆಗೆ ಮಡಕೆ ಹೊರಿಸುತ್ತಾನೆ. ಮಹೂರ್ತದ ಮಡಕೆಗಳನ್ನು ಕಾರ್ಯದ ಮನೆಯ ಜೋಡಿ ಗಂಡ-ಹೆಂಡತಿ ಹೊತ್ತುಕೊಳ್ಳುತ್ತಾರೆ. ಉಳಿದ ಜೋಡಿಗಳು ಇತರ ಮಡಕೆಗಳನ್ನು ಹೊತ್ತುಕೊಂಡು ಬರಿಗಾಲಲ್ಲಿ ನಡೆದು ಬರುತ್ತಾರೆ. ಮಡಕೆಗಳನ್ನು ಹೊತ್ತು ತಂದವರು ಮನೆಯ ಒಳಗಡೆ ಇಡುವ ಹಾಗಿಲ್ಲ. ಒಂದು ಬಯಲಲ್ಲಿ ಮಡಕೆಗಳನ್ನೆಲ್ಲಾ ಇಟ್ಟು ಭತ್ತದ ಹುಲ್ಲು ಹಾಕಿ ಪುನ: ಸುಡುತ್ತಾರೆ. ನಂತರ ತುಳಸಿಗೆ ಪೂಜೆ ಸಲ್ಲಿಸಿ, ಭಾವ ಪರವಶತೆಯಿಂದ ಗೋವಿಂದಯ್ಯ ಗೋವಿಂದೋ ಹೌದರಣ್ಣ ಗೋವಿಂದೋ ಎಂದು ಹೇಳುತ್ತಾ ಆಯಾಸವಾಗುವವರೆಗೆ ಕುಣಿದು ನಂತರ ಎಲ್ಲರೂ ಸೇರಿ ಊಟಮಾಡುತ್ತಾರೆ. ಶುಕ್ರವಾರ ದಿವಸ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಇಪ್ಪತ್ತೆರಡು ಅಥವಾ ಇಪ್ಪತ್ತೈದು ಜನ ಸೇರಿ ತುಳಸಿ ಕಟ್ಟೆಯ ಸುತ್ತಲೂ ಬಾಳೀ ರಂಬೆಗಳಿಂದ ಮಂಟಪ ತಯಾರಿಸುತ್ತಾರೆ. ಇದಕ್ಕೆ 'ಅಂತರ್ ಚಪ್ಪರ' ಎಂದು ಹೇಳುತ್ತಾರೆ.

ಹರಿದಿನದ ಅಡಿಗೆ ತಯಾರಿಸಲು ಇಪ್ಪತ್ತೈದು ಜನರನ್ನು ನೇಮಿಸುತ್ತಾರೆ. ಅಡಿಗೆ ಮತ್ತು ಮಂಟಪ ತಯಾರಿಸುವವರಿಗೆ ಕ್ಷೌರಿಕ ಬಂದು ಮುಖ ಕ್ಷೌರ ಮಾಡುತ್ತಾನೆ. ನಂತರ ಎಲ್ಲರೂ ನದಿಗೆ ಹೋಗಿ ಸ್ನಾನ ಮಾಡುತ್ತಾರೆ. ಅಡಿಗೆ ಮಾಡುವವರು ಬಯಲಿನಲ್ಲಿ ಇಟ್ಟಿರುವ ಮಡಿಕೆಗಳನ್ನು ತೊಳೆದು ಕೊಂಡು ಅಟ್ಲುಮನೆಗೆ ತರುತ್ತಾರೆ. ಮಡಿಕೆಗಳಿಗೆ

ಪಂಚಗವ್ಯ ಹಾಕಿ ಶುದ್ಧ ಮಾಡುತ್ತಾರೆ. ಬೆಣತಕ್ಕಿಯನ್ನು ಹೊಸದಾಗಿ ತಯಾರಿಸಿದ ಮರಗಿಗೆ ಹಾಕಿ ಒನಕೆಯಿಂದ ಕುಟ್ಟುತ್ತಾರೆ. ಉದ್ದಿನ ಬೇಳೆಯನ್ನು ಕಲ್ಲಿನಿಂದ ಕುಟ್ಟಿ ಪುಡಿಮಾಡಿ ಅಕ್ಕಿ ಹಿಟ್ಟಿಗೆ ಸೇರಿಸಿ ನುಗ್ಗೇ ಮರದ ಚಕ್ಕೆಯನ್ನು ಮರಗಿಯಲ್ಲಿಟ್ಟು ದೀಪದ ಬತ್ತಿಯನ್ನು ನುಗ್ಗೇ ಚಕ್ಕೆಯ ಮೇಲಿಟ್ಟು ಒಂದು ಬುಟ್ಟಿಯನ್ನು ಮುಚ್ಚುತ್ತಾರೆ. ನಂತರ ಪುನ ಕುಣಿತ ಪ್ರಾರಂಭವಾಗುತ್ತದೆ. ಕುಣಿತದ ನಂತರ ಊಟ ಮಾಡಿ ಮಲಗುತ್ತಾರೆ.

ಶನಿವಾರ ಬೆಳಗಿನ ಜಾವ ಮೂರುಗಂಟೆಗೆ ಎದ್ದು ಅಡಿಗೆಯವರು ನದಿಗೆ ಹೋಗಿ ಸ್ನಾನ ಮಾಡಿ ಬರುತ್ತಾರೆ. ಇವರುಗಳು ಶುದ್ಧವಾದ ನಂತರ ಮಲಮೂತ್ರ ವಿಸರ್ಜನೆಗೆ ಹೋಗುವ ಹಾಗಿಲ್ಲ. ಬೀಡಿ ಸೇದುವುದಾಗಲಿ ಎಲೆ ಅಡಿಕೆ ಜಗಿಯುವುದಾಗಲಿ ಮಾಡುವ ಹಾಗಿಲ್ಲ. ಕುಟ್ಟಿದ ಅಕ್ಕಿ ಮತ್ತು ಉದ್ದಿನ ಹಿಟ್ಟಿನಿಂದ ಕಡಬು ತಯಾರಿಸುತ್ತಾರೆ. ನಂತರ ಅನ್ನ ಸಾರು. ಪಲ್ಯ ಕರ್ಜೂರದಣ್ಣಿನ ಪಾಯಸ. ಗೋಧಿ ಪಾಯಸ. ಸಬ್ಬಕ್ಕಿ ಪಾಯಸ. ಕಡುಬು. ದೋಸೆ ಮುಂತಾದ ಪದಾರ್ಥಗಳನ್ನು ತಯಾರಿಸುತ್ತಾರೆ. ಅಡಿಗೆಯೆಲ್ಲಾ ತಯಾರಾದ ಮೇಲೆ ತಯಾರಿಸಿದ ಪದಾರ್ಥಗಳಿಗೆ ಪೂಜೆ ನಡೆಯುತ್ತದೆ.

ದೊಡ್ಡ ದೊಡ್ಡ ಬುಟ್ಟಿಗಳಲ್ಲಿ ಹೂವು ಹಣ್ಣು ಕಾಯಿ ಪೂಜೆ ಸಾಮಾನುಗಳನ್ನು ತೆಗೆದುಕೊಂಡು ಗದ್ದಗೆ ಹೋಗಿ ಕಳಸಮಾಡಿ ಪೂಜೆ ಮಾಡುತ್ತಾರೆ. ತಿರುಪತಿ ಯಾತ್ರೆ ಮಾಡಿ ಬಂದವರು ತುಳಸಿ ಮಣಿಗಳನ್ನು ಧರಿಸುತ್ತಾರೆ. ಕಳಸ ಹೊರುವವನನ್ನು ಮುಂಡಾಸು ಸುತ್ತಿ ಬೆಳ್ಳಿ ಬಂಗಾರದ ಆಭರಣಗಳನ್ನು ಹಾಕಿ ಶೃಂಗಾರ ಮಾಡಿ ಒಂದು ಅಡಿಕೆ ಹಿಂಗಾರವನ್ನು ತಲೆಯ ಮೇಲಿಟ್ಟು ಅದರ ಮೇಲೆ ಕಳಸವನ್ನಿಡುತ್ತಾರೆ. ಬೆತ್ತದ ಕೋಲು ಹಿಂಗಾರದ ಎಸಳುಗಳನ್ನು ಆತನ ಕೈಯಲ್ಲಿ ಹಿಡಿಸಿರುತ್ತಾರೆ. ಹೊಲದಿಂದ ತುಳಸಿ ಕಟ್ಟೆವರೆಗೆ ಕಳಸವನ್ನು ಕೈಯಲ್ಲಿ ಹಿಡಿದುಕೊಳ್ಳದೆ ಕುಣಿಯುತ್ತಾ ಬಂದು ತುಳಸಿಗೆ ಕಟ್ಟಿರುವ ಗೋಪುರಾಕೃತಿಯ ಮಂಟಪದ ಕೆಳಗೆ ಇಡುತ್ತಾನೆ. ನಂತರ ಪೂಜೆ ನಡೆಯುತ್ತದೆ. ನೆರೆದಿರುವವರೆಲ್ಲರೂ ಹಣ್ಣು ಕಾಯಿ ಒಡೆಸಿ ಪೂಜೆ ಸಲ್ಲಿಸುತ್ತಾರೆ.

ಗೋವಿಂದಯ್ಯ ಗೋವಿಂದೋ
ಹೌದಾರಣ್ಣ ಗೋವಿಂದೋ
ಸ್ವಾಮಿಗಿಂದು ಗೋವಿಂದೋ ಹೌದಾರಣ್ಣಗೋವಿಂದೋ
ಭೂಮಿಗಿಂದು ಗೋವಿಂದೋ ಹೌದಾರಣ್ಣ ಗೋವಿಂದೋ
ತೊಳಸಮ್ಮ ದೇವಿಗೆ ಗೋವಿಂದೋ ಹೌದಾರಣ್ಣ ಗೋವಿಂದೋ
ಮೇಲೇಳೋ ಲೋಕಕು ಗೋವಿಂದೋ ಹೌದಾರಣ್ಣ ಗೋವಿಂದೋ
ಕೆಳಗಿರೋ ಲೋಕಕು ಗೋವಿಂದೋ ಹೌದಾರಣ್ಣ ಗೋವಿಂದೋ
ತಳಾನೋರಿಗೂ ಗೋವಿಂದೋ ತಂಪಿನವರಿಗೊ ಗೋವಿಂದೋ

ಎಂದು ಹಾಡುತ್ತಾ ಭಕ್ತಿ ಪರವಶರಾಗಿ ಕುಣಿಯುತ್ತಾರೆ ನಂತರ ಎಲ್ಲರೂ ಸೇರಿ ಊಟ ಮಾಡುತ್ತಾರೆ.

ಗೊಂಡರು ತಿರುಪತಿ ವೆಂಕಟರಮಣನಿಗೆ ನಡೆದು ಕೊಳ್ಳುವುದರ ಜೊತೆಗೆ ಧರ್ಮಸ್ಥಳದ ಮಂಜುನಾಥನಿಗೂ ನಡೆದು ಕೊಳ್ಳುತ್ತಾರೆ. ಹಾಗಾಗಿ ಶನಿವಾರ ಮತ್ತು

ಸೋಮವಾರ ಮಾಂಸಹಾರ ಮಾಡುವುದಿಲ್ಲ. ಶನಿವಾರ ಕೆಲವರು ಉಪವಾಸವಿದ್ದು ಪೂಜೆ ಮಾಡಿ ಫಲಾಹಾರ ಸೇವಿಸುವವರೂ ಇದ್ದಾರೆ.

**ಗೊಂಡರ ದೇವತೆಗಳು**

ಗೊಂಡರು ತುಂಬಾ ಸಂಪ್ರದಾಯವಾದಿಗಳಾದ್ದರಿಂದ ತಮಗೆ ಕಷ್ಟ ಬಂದಾಗ ದೂರ ಮಾಡಿಕೊಳ್ಳಲು ಅನೇಕ ದೇವರುಗಳನ್ನು ಐದು ಭಾಗಗಳಾಗಿ ವಿಂಗಡಿಸಬಹುದು. 'ಪುರುಷ ದೇವತೆಗಳು', 'ಸ್ತ್ರೀ ದೇವತೆಗಳು','ಆಯುಧಗಳು','ಪ್ರಾಣಿ ದೇವತೆಗಳು','ಸಸ್ಯಗಳು'.

ಪುರುಷದೇವತೆಗಳಲ್ಲಿ ಜಟ್ಟಿಗಾ. ಯಕ್ಷೆ. ಬ್ಯಾಟೆ ಬೀರ, ಬೀರರ ದೆವ್ವ, ತಿರುಪತಿ ತಿಮ್ಮಪ್ಪ, ಈಶ್ವರ ಧರ್ಮಸ್ಥಳದ ಮಂಜುನಾಥ ಬಲೀಂದ್ರ ಇತ್ಯಾದಿ. ಸ್ತ್ರೀದೇವತೆಗಳಲ್ಲಿ ಕೋಗ್ತಿ, ಮಾಸ್ತಿ, ಮಾರಿ, ಚೌಡಿ, ಯಕ್ಷಿ, ದುರ್ಗೆ. ಆಯುಧಗಳಲ್ಲಿ ವೀರರ ಕೊಂಬು, ನಾಗಬೆತ್ತ, ಜಟ್ಟಿಗನಾ ಕೊಂಬು ತ್ರಿಶೂಲ, ಕೀಳನ ಕೊಂಬು ಕತ್ತಿ ಇತ್ಯಾದಿ. ಪ್ರಾಣಿದೇವತೆಗಳಲ್ಲಿ ಹಾಯ್ಗಾಳಿ, ಬೀರರ ಗೂಳಿ, ಹುಲಿಗಿತ್ತಿ, ಹಂದಿಗಿತ್ತಿ, ಹಸು ನಾಗರ ಹಾವು, ನವಿಲು. ಸಸ್ಯಗಳಲ್ಲಿ ತುಳಸಿ, ಭತ್ತ, ತೆಂಗಿನಮರ ಅಡಿಕೆ ಮರ, ಮಗೆಕಾಯಿ, ಅರಳಿಮರ, ಆಲದ ಮರ, ಹಾಲಿರುವ ಮರಗಳು.

ಗೊಂಡರ ಕುಲದೇವರು ತಿರುಪತಿ ತಿಮ್ಮಪ್ಪನಾದರೆ ಕುಲದೇವತೆ ಕೋಗ್ತಿ.ಪುರುಷ ದೇವತೆಗಳಲ್ಲಿ ಜಟ್ಟಿಗನನ್ನು ಹೆಚ್ಚು ನಂಬುತ್ತಾರೆ. ಆಂಧ್ರ ಮೂಲದವರಾದ ಜಟ್ಟಿಗರು, ರಾಣಿ ಚೆನ್ನಾಭೈರಾದೇವಿಯ ರಕ್ಷಣೆಗಾಗಿ ಬಂದವರು. ಶತ್ರುಗಳೊಡನೆ ಹೋರಾಡಿ ನಾಡಿಗಾಗಿ, ಪ್ರಾಣತ್ಯಾಗ ಮಾಡಿದ್ದರಿಂದ ಆರಾಧ್ಯ ಮೂರ್ತಿಗಳಾಗಿ ಉಳಿದರು. ಗೊಂಡರು ಮರದಿಂದ ಐದು ಅಡಿ ಎತ್ತರದ ಕಂಬ ಮಾಡಿ ಅದರ ಕೆಳಭಾಗದಲ್ಲಿ ಚಡ್ಡಿ ತೊಟ್ಟಿರುವ ಜಟ್ಟಿಗನನ್ನು ಕೆತ್ತಿ ಅದನ್ನು ಜಟ್ಟಿಗನ ಕಂಬ ಎಂದು ಕರೆದು ಪೂಜೆ ಸಲ್ಲಿಸುತ್ತಾರೆ. ಭಟ್ಕಳದಲ್ಲಿ ಜೈನರು ಪೂಜಿಸುತ್ತಿದ್ದ ಯಕ್ಷೆ ಇಂದು ಗೊಂಡರ ದೇವತೆಯಾಗಿದೆ. ಇದೊಂದು ಐದು ಅಡಿ ಎತ್ತರದ ಮರದ ಕಂಬ.

ಬ್ಯಾಟೆ ಬೀರ ಎಂಬ ದೇವತೆಯನ್ನು ಗೊಂಡರು ಬೇಟೆಗೆ ಹೋಗುವ ಮೊದಲು ಪೂಜಿಸಿ ಈ ದಿನ ಬೇಟೆಯಾದರೆ ನಿನಗೆ ಅರ್ಧಭಾಗ ಮಾಂಸವನ್ನು ಅರ್ಪಿಸುತ್ತೇವೆಂದು ಹರಕೆ ಕಟ್ಟಿಕೊಂಡು ಬೇಟೆಗೆ ಹೋಗುತ್ತಾರೆ. ಹಿಂದೆ ಬೇಟೆಗಾಗಿ ಕಾಡಿಗೆ ಹೋದ ವ್ಯಕ್ತಿ ಕ್ರೂರ ಮೃಗಗಳ ಬಾಯಿಗೆ ತುತ್ತಾಗಿ ಮರಣ ಹೊಂದಿದವನು ಇಂದು ಬ್ಯಾಟೆ ಬೀರನಾಗಿ ಪೂಜಿಸಲ್ಪಡುತ್ತಿದ್ದಾನೆ.

ಸ್ತ್ರೀ ದೇವರುಗಳಲ್ಲಿ ಕೋಗ್ತಿ ಗೊಂಡರ ಅತ್ಯಂತ ಪ್ರಮುಖವಾದ ಕುಲದೇವತೆ. ಭಟ್ಕಳದಲ್ಲಿ ಕೋಗ್ತಿ ಮಹಾಸತಿದೇವಿ ದೇವಸ್ಥಾನವಿದೆ. ಇಲ್ಲಿ ನಾಲ್ಕು ಮರದ ಮಹಾಸತಿ ವಿಗ್ರಹಗಳಿವೆ. ಒಂದು ಜಟ್ಟಿಗನ ಕಲ್ಲು ಈ ಕಲ್ಲಿನ ಕೆಳಭಾಗದಲ್ಲಿ ಚಡ್ಡಿ ತೊಟ್ಟು ನಿಂತಿರುವ ಪೈಲ್ವಾನನಾಕೃತಿಯ ಗೊಂಬೆಯನ್ನು ಕೆತ್ತಿದ್ದಾರೆ. ಎರಡು ಮರದ ಯಕ್ಷೆಯ ಕಂಬ ಮತ್ತು ಜಟ್ಟಿಗನ ಕೊಂಬುಗಳಿವೆ. ಈ ದೇವಸ್ಥಾನದ ರಕ್ಷಣೆಗಾಗಿ ಮುಂಭಾಗದ ಬಲಗಡೆಯಲ್ಲಿ

ಚೌಡಿ ಕಲ್ಲು ಇದೆ. ಎದುರಿನಲ್ಲಿ ದೀಪಸ್ತಂಭವಿದೆ. ವಿಶೇಷವಾಗಿ ದೇವಸ್ಥಾನದಲ್ಲಿ ಪುರುಷ ರೂಪದ ನಾಲ್ಕು ರುಂಡಗಳಿವೆ. ಬ್ರಾಹ್ಮಣ, ನಾಪಿತ, ಮಂತ್ರವಾದಿ, ಮತ್ತು ಮುಸಲ್ಮಾನ ಎಂದು ಹೇಳಲಾಗುವ ನಾಲ್ಕು ಜನ ಖಳನಾಯಕರ ಮುಖವಾಡಗಳು.

ಇವರುಗಳು ಒಂದು ಕಾಲದಲ್ಲಿ ದೇವಸ್ಥಾನಗಳಲ್ಲಿದ್ದ ಗುಪ್ತ ನಿಧಿಯನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸಿದರಂತೆ. ಆಗ ಗೊಂಡ ಜನಾಂಗದ ಜಟ್ಟಿಗರು ಇವರ ತಲೆಯನ್ನು ಕಡಿದು ನಿಧಿಯನ್ನು ರಕ್ಷಿಸಿದರಂತೆ. ಈ ಘಟನೆಯ ನಂತರ ಬ್ರಾಹ್ಮಣರ ಪೂಜೆಯನ್ನು ನಿಲ್ಲಿಸಿ ಗೊಂಡರೇ ಕೋಗ್ತಿಯ ಪೂಜೆ ನಡೆಸುತ್ತಿದ್ದಾರೆ. ಜಾತ್ರೆಯ ದಿವಸ ಈ ಖಳ ನಾಯಕರ ರುಂಡಗಳನ್ನು ಮೆರವಣಿಗೆ ಮಾಡಿ ದೇವಸ್ಥಾನದಲ್ಲಿ ತಂದಿಡುತ್ತಾರೆ. ದೇವಸ್ಥಾನದ ಆವರಣ ವಿಶಾಲವಾಗಿದ್ದು ಮುಂಭಾಗದಲ್ಲಿ ದೊಡ್ಡದಾದ ಒಂದು ಕೆರೆಯಿದೆ.

ಸಂಕ್ರಾತಿಯ ಮಾರನೇ ದಿವಸ ಇಲ್ಲಿ ಜಾತ್ರೆ ನಡೆಯುತ್ತದೆ. ಸಾವಿರಾರು ಗೊಂಡ ಗೊಂಡತಿಯರು ಸೇರುತ್ತಾರೆ. ಮದುವೆಯಾದ ಹೆಣ್ಣುಗಳು ಸಾಂಪ್ರದಾಯಿಕ ಉಡುಪು ಧರಿಸಿ ತಲೆತುಂಬಾ ಹೂ ಮುಡಿದು ಕೈಯಲ್ಲಿ ಅಕ್ಕಿ ಹಿಟ್ಟಿನ ಉಂಡೆ ಹಿಡಿದು ಅದರ ಮೇಲೆ ಭಕ್ತಿಯಿಂದ ದೀಪ ಹೊತ್ತಿಸಿಕೊಂಡು ದೇವಸ್ಥಾನದ ಸುತ್ತಲೂ ಪ್ರದಕ್ಷಿಣೆ ಹಾಕುತ್ತಾರೆ. ಇಲ್ಲಿ ಹೆಂಗಸೊಬ್ಬಳು ಸತಿ ಹೋಗಿರುವುದರಿಂದ ಮಹಾಸತಿಯಾಗಿ ಆರಾಧಿಸಲ್ಪಡುತ್ತಿದ್ದಾಳೆ. ಹೀಗೆ ಸತಿ ಹೋದ ಸ್ತ್ರೀಯರೆಲ್ಲಾ ಮಾಸ್ತಿಗಳಾಗಿ ಪೂಜಿಸಲ್ಪಡುತ್ತಿದ್ದಾರೆ. ಹರಕೆ ಹೊತ್ತವರು ಮರದ ಮಾಸ್ತಿಯ ವಿಗ್ರಹಗಳನ್ನು ಮಾಡಿಸಿ ತಂದು ಅರ್ಪಿಸುವ ಸಂಪ್ರದಾಯವಿದೆ. ಭಟ್ಕಳದಿಂದ ಹತ್ತಾರು ಕಿ. ಮೀ. ದೂರದಲ್ಲಿ ಸಮುದ್ರ ಮಧ್ಯೆ ಇರುವ ನೇತ್ರಾಣಿ ಗುಡ್ಡದಲ್ಲಿ ದೊಡ್ಡ ಜಟ್ಟಿಗಾ ಮತ್ತು ಜಟ್ಟಿಗನ ಕೊಂಬುಗಳಿವೆ. ಭಟ್ಕಳದ ಬಂದರಿಗೆ ಹೋಗುವ ರಸ್ತೆಯಲ್ಲಿ ಇರುವ ಗುಡ್ಡದಲ್ಲಿ ಕುಂಟ ಜಟ್ಟಿಗನಿದ್ದಾನೆ. ಇವುಗಳು ಕೂಡ ಗೊಂಡರಿಂದ ಪೂಜಿಸಲ್ಪಡುವ ದೇವತೆಗಳು.

## ಬೀರರ ಮನೆ

ಸಾಗರ-ಭಟ್ಕಳ ರಸ್ತೆಯಲ್ಲಿ ಹಾಡವಳ್ಳಿ ದಾಟಿದ ನಂತರ ಸಿಗುವ ಮಾರುಕೇರಿ ಎಂಬ ಊರಿನಲ್ಲಿ ಒಂದು ಬೀರರ ವನ ಇದೆ. ವಿವಿಧ ಗಿಡಮರಗಳಿಂದ ಕೂಡಿದ ತಂಪಾದ ಮತ್ತು ಸುಂದರವಾದ ವನ. ಈ ಬನದ ಮಧ್ಯೆ ವಿವಿಧ ಆಕೃತಿಯ ಮರದ ಸ್ತಂಭಗಳು ಮತ್ತು ಪ್ರಾಣಿಗಳ ಮುಖಗಳಿವೆ.

ಬೀರರ ಕೊಂಬು, ಜಟ್ಟಿಗಾ, ಹುಲಿಗಿರ್ತಿ, ಹಂದಿಗಿರ್ತಿ, ಹಾಯ್ಗೂಳಿ, ಚೌಡಿ, ಕೀಳು, ಯಕ್ಷಿ, ನಾಗರು ಮುಂತಾದ ದೇವತೆಗಳಿವೆ. ಜಾನುವಾರುಗಳಿಗೆ ಕಾಯಿಲೆ ಬಂದಾಗ ಊರಿನವರೆಲ್ಲಾ ಸೇರಿ ಹರಕೆ ಮಾಡಿಕೊಂಡು ಈ ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ. ಪೂಜಾರಿಗೆ ಮೈಮೇಲೆ ಬರುತ್ತದೆ. ಇದಕ್ಕೆ 'ಬಾರಾ' ಎನ್ನುತ್ತಾರೆ. ಬಾರಾ ಬಂದವನು ಬೀರರ ಕೊಂಬು ಹತ್ತುತ್ತಾನೆ. ಹರಕೆ ಮಾಡಿ ಕೊಂಡವರು ಈ ಬೀರರ ಕೊಂಬಿಗೆ ಏಳು ಅಥವಾ ಒಂಭತ್ತು ನೆಲೆ ಮಾಡಿ ಹಾಕುತ್ತಾರೆ. ಒಂದು ನೆಲೆಯೆಂದರೆ ಒಂದೂವರೆ ಅಡಿ ಎತ್ತರದ ಕೊಂಬು.

ಗೊಂಡರು ಭಟ್ಕಳದ ಮಾರಿಯನ್ನು ಹಿಂದೆ ಪೂಜೆ ಮಾಡುತ್ತಿದ್ದರು. ಮಾರಿಗೆ ಪ್ರಾಣಿ ಬಲಿಕೊಡುವುದನ್ನು ನಿಷೇದಿಸಿದ ನಂತರ ಮಾಂಸಾಹಾರಿಗಳೆಲ್ಲಾ ಮಾರಿ ಜಾತ್ರೆಯಲ್ಲಿ ಭಾಗವಹಿಸುವುದನ್ನು ನಿಲ್ಲಿಸಿ ಪ್ರತಿಭಟಿಸಿದರು. ಗೊಂಡರು ತಮ್ಮ ಪೂಜಾರಿಕೆಯನ್ನು ನಿಲ್ಲಿಸಿ ಪ್ರತಿಭಟಿಸುವವರೊಡನೆ ಸೇರಿಕೊಂಡರು. ಮಾರಿಯನ್ನು ಮೆರವಣಿಗೆ ಮಾಡುವಾಗ ದಾರಿಯಲ್ಲಿ ಕುರಿ ಕೋಳಿಗಳನ್ನು ಬಲಿ ಕೊಟ್ಟು ತಮ್ಮ ಸಂಪ್ರದಾಯವನ್ನು ಉಳಿಸಿಕೊಂಡು ಬರುತ್ತಿದ್ದಾರೆ.

ಗೊಂಡರು ಚೌಡಿ, ಯಕ್ಷಿ, ಬೀರರ ಕೊಂಬು, ಕೀಳನ ಕೊಂಬು, ಜಟ್ಟಿಗಾ, ಮಾಸ್ತಿ, ಯಕ್ಷಿ, ಬೀರರ ಗೂಳಿ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಜಾನುವಾರುಗಳಿಗೆ ತೊಂದರೆ ಕೊಡದಿರಲೆಂದು ಹಾಯ್ಗೂಳಿ, ಬೀರರ ಗೂಳಿ ಮತ್ತು ಹುಲಿಗಿರ್ತಿಯನ್ನು ಪೂಜಿಸಿದರೆ, ಬೆಳೆಗಳನ್ನು ನಾಶಮಾಡದಿರಲೆಂದು ಹಂದಿಗಿರ್ತಿಯನ್ನು ಪೂಜಿಸುತ್ತಾರೆ.

### ಮಂಡಲ ಪೂಜೆ

ಗೊಂಡರು ಭೂತ, ಯಕ್ಷಿ, ಪಿಶಾಚಿಗಳನ್ನು ನಂಬುತ್ತಾರೆ. ದೆವ್ವ ಭೂತಗಳಿಗೆ ಕೋಳಿ ಕುರಿಗಳನ್ನು ಬಲಿಕೊಡುತ್ತಾರೆ. ದೆವ್ವಗಳ ಕಾಟಕ್ಕೆ ನೋಟ ನೋಡಿಸುತ್ತಾರೆ. ಇದಕ್ಕೆ "ಅಕ್ಕಿ ಕಾಂಬುದು" ಎನ್ನುತ್ತಾರೆ. ಒಂದು ಮಣೆಯ ಮೇಲೆ ಅಕ್ಕಿ ಹಾಕಿಕೊಂಡು ಅಕ್ಕಿಯನ್ನು ಚಾಕುವಿನಿಂದ ತಿರುಗಿಸಿ ಅಕ್ಕಿಗಳ ಗುಂಪು ಲೆಕ್ಕ ಮಾಡುತ್ತಾರೆ. ಆ ಅಕ್ಕಿಗಳ ಸಂಖ್ಯೆಯಿಂದ ದೆವ್ವವೋ, ರಣಗೊಲೆಯೋ ಎಂದು ತಿಳಿಯುತ್ತಾರೆ.

ಮಾಸ್ತಿ, ನಾಗದೇವತೆ, ಜಟ್ಟಿಗಾ, ದೆವ್ವ, ಭೂತ ಪಿಶಾಚಿಗಳನ್ನು ಪೂಜೆ ಮಾಡುವ ಕ್ರಮಕ್ಕೆ ಮಂಡಲ ಪೂಜೆ ಎನ್ನುತ್ತಾರೆ. ವಿಶಿಷ್ಟ ರೀತಿಯ ಮಂಡಲ ಬರೆದು ದೇವತೆಗಳನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ಮಂಡಲ ಪೂಜೆಯಲ್ಲಿ ಗೊಂಡರ ಕುಣಿತ ಇರುತ್ತದೆ. ಉತ್ತರಭಾಗದ "ಬಂಗ್ಲೋಡಿ ಮಾಸ್ತಿ" ದೇವಸ್ಥಾನದಲ್ಲಿ ಮೊದಲು ಮಂಡಲ ಪೂಜೆ ನಡೆಯುತ್ತದೆ. ನಂತರ ಆ ಭಾಗದ ಬೇರೆಬೇರೆ ಕಡೆ ಮಂಡಲ ಸೇವೆ ನಡೆಯುತ್ತದೆ. ದಕ್ಷಿಣಭಾಗದ ಕೋಗ್ತಿ ದೇವಸ್ಥಾನದಲ್ಲಿ ಮಂಡಲ ಪೂಜೆ ನಡೆದ ನಂತರ ಈ ಭಾಗದ ಉಳಿದ ಸ್ಥಳಗಳಲ್ಲಿ ಮಂಡಲ ಸೇವೆ ನಡೆಯುತ್ತದೆ. ಮಂಡಲ ಪೂಜೆಯಲ್ಲಿ ಡಕ್ಕೆಯನ್ನು ಬಾರಿಸುತ್ತಾ, ಮಂಡಲ ಪದಗಳನ್ನು ಹಾಡುತ್ತಾ ನೃತ್ಯ ಮಾಡುತ್ತಾರೆ.

### ಗೊಂಡರ ಹೋಳಿಹಳಬು

ಹೋಳಿ ಹಳಬು ಗೊಂಡರ ವಿಶಿಷ್ಟವಾದ ಗಂಡಸರ ಕುಣಿತ. ವಿಶೇಷವಾಗಿ ಶಿವರಾತ್ರಿ ಹಬ್ಬದಲ್ಲಿ ಈ ಕುಣಿತವನ್ನು ಮಾಡುತ್ತಾರೆ. ಎಲ್ಲರ ಕೈಯಲ್ಲೂ ಡಕ್ಕೆಗಳಿರುತ್ತವೆ. ತಲೆಗೆ ಹೂವಿನ ಉಡಿಗೆ ಧರಿಸಿ ಬಣ್ಣದ ಮಡಿಪಂಚೆಯನ್ನುಟ್ಟು ಸೊಂಟಕ್ಕೆ ಬೆಳ್ಳಿಯ ನ್ಯಾವಳ ಹಾಕಿಕೊಂಡು ಕಾಲಿಗೆ ಗೆಜ್ಜೆ ಕಟ್ಟಿರುತ್ತಾರೆ. ಡಕ್ಕೆಗಳನ್ನು ಬಾರಿಸುತ್ತಾ ಲಯಬದ್ಧವಾಗಿ ಕುಣಿಯುತ್ತಾರೆ. ಈ ಕುಣಿತ ಮಾಡುವಾಗ ಹಾಡುಗಳನ್ನು ಹೇಳುವುದಿಲ್ಲ. ಇವರಲ್ಲಿ ಎರಡು ಅಥವಾ ಮೂರುಜನ ಕಾಮನ ವೇಷದವರಿರುತ್ತಾರೆ. ಇವರು ಕಾಮನ ಅಂಗಿ ಎಂಬ ಉದ್ದವಾದ ನಿಲುವಂಗಿ ಧರಿಸಿರುತ್ತಾರೆ. ಈ ಅಂಗಿಗೆ ಆನೆಯ ಮುಖವಾಡವಿರುತ್ತದೆ.

ಮೂಗು ಗರುಡನ ಮೂಗಿನಂತೆ ಉದ್ದವಾಗಿ ಇಳಿದಿರುತ್ತದೆ. ಕಾಮನಂಗಿಯವರು ಕಾಮನ ಜಲ್ಲಿ ಎಂಬ ಚಪ್ಪಟೆಯಾಗಿರುವ ಮರದ ದೊಣ್ಣೆಯನ್ನು ಹಿಡಿದಿರುತ್ತಾರೆ. ಇವರೂ ಸಹಾ ವಿಚಿತ್ರ ರೀತಿಯಯಲ್ಲಿ ನರ್ತಿಸುತ್ತಿರುತ್ತಾರೆ.

**ಗೊಂಡರ ಪದಗಳು**

ಗೊಂಡರ ಮಹಿಳೆಯರು, ಮದುವೆಯ ಹಾಡುಗಳು, ಸೋಬಾನೆ ಪದಗಳು, ಮಂಗಳಾರತಿ ಹಾಡುಗಳನ್ನು ಹಾಡುತ್ತಾರೆ. ಡಾಕ್ಟರ್ ಎಲ್ ಆರ್. ಹೆಗಡೆಯವರು ಗೊಂಡರ ಹಾಡುಗಳನ್ನು ಸಂಗ್ರಹಿಸಿ ''ಗೊಂಡರ ಪದಗಳು'' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಭಟ್ಕಳದ ಅಂಜುಮನ್ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿರುವ ಡಾ. ಸೈಯದ್ ಜಮೀರುಲ್ಲಾ ಷರೀಫ್‌ರವರು ಗೊಂಡರ ಬಗ್ಗೆ ಆಳವಾದ ಅಧ್ಯಯನ ಮಾಡಿ ಮಹಾ ಪ್ರಬಂಧವನ್ನು ರಚಿಸಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಶ್ರೀ ನಾರಾಯಣ ಯಾಜಿಯವರು ಬರೆದ ''ಶಿರಾಲಿಯ ಗೊಂಡರು'' ಎಂಬ ಪುಸ್ತಕ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಸಾರಾಂಗದವರು ಪ್ರಕಟಿಸಿದ್ದಾರೆ. ಹಿರಿಯ ಜಾನಪದ ವಿದ್ವಾಂಸರಾದ ಶ್ರೀ ಎಲ್ ಆರ್. ಹೆಗಡೆಯವರು ''ಉತ್ತರ ಕನ್ನಡದ ಗೊಂಡರು'' ಎಂಬ ಮತ್ತೊಂದು ಪುಸ್ತಕವನ್ನು ಐ ಬಿ ಎಚ್ ಪ್ರಕಾಶನದವರು ಪ್ರಕಟಿಸಿದ್ದಾರೆ.

ಗೊಂಡರಲ್ಲಿರುವ ಅರ್ಜುನಸ್ವಾಮಿ, ರಾಮಾಯಣ, ಮಹಾಭಾರತ ಕಾವ್ಯಗಳು, ಸೋಬಾನೆ ಹಾಡುಗಳು, ಮಂಡಲದ ಹಾಡುಗಳು, ಮದುವೆ ಹಾಡುಗಳು, ಕಥನ ಗೀತೆಗಳು ಸಂಗ್ರಹವಾಗದೆ ಉಳಿದಿದೆ. ಆದಷ್ಟು ಜರೂರಾಗಿ ಸಂಗ್ರಹಕಾರ್ಯ ಮಾಡಬೇಕಾಗಿದೆ.

ಕರ್ನಾಟಕದ ಬುಡಕಟ್ಟು ಜನಾಂಗಗಳಲ್ಲಿ ಜನಪದೀಯ ಅಂಶಗಳನ್ನು ಸಮೃದ್ಧವಾಗಿ ಮೈಗೂಡಿಸಿ ಕೊಂಡಿರುವ ಸರ್ವಶ್ರೇಷ್ಠ ಸಾತ್ವಿಕ ಬುಡಕಟ್ಟು ಜನಾಂಗ ಎಂದು ಹೇಳಬಹುದು.

**ಆಕರ ಗ್ರಂಥಗಳು**


| | |
|---|---|
| ಗೊಂಡರ ಪದಗಳು | ಡಾ. ಎಲ್ ಆರ್. ಹೆಗಡೆ |
| ಉತ್ತರ ಕನ್ನಡದ ಗೊಂಡರು | ಡಾ. ಎಲ್. ಆರ್. ಹೆಗಡೆ |
| ಶಿರಾಲಿಯ ಗೊಂಡರು | ಶ್ರೀ ನಾರಾಯಣ ಯಾಜಿ |
| ಗಿರಿಜನ ನಾಡಿಗೆ ಪಯಣ | ಶ್ರೀ ಹಿ. ಚಿ. ಬೋರಲಿಂಗಯ್ಯ |
| ಡಾ. ಸೈಯದ್ ಜಮೀರುಲ್ಲಾ ಷರೀಫ್ ಅವರು ಸುಧಾದಲ್ಲಿ ಬರೆದ ಒಂದು ಲೇಖನ | |
| ಗೊಂಡರ ದೇವತೆಗಳು | ಜಾನಪದ ಗಂಗೋತ್ರಿ (ಜನವರಿ-ಮಾರ್ಚ್-೮೯) (ಲೇಖಿಕ: ಡಾ. ಜಮೀರುಲ್ಲಾ ಷರೀಫ್) |

ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ವಿಜೇತ ತಿಮ್ಮಪ್ಪ ಮಂಜುಗೊಂಡ, ದುರ್ಗಯ್ಯ ಮತ್ತು ದ್ಯಾವಯ್ಯ ಗೊಂಡರು ನೀಡಿದ ಮಾಹಿತಿಗಳು ಹಾಗೂ ಕಳೆದ ಐದು ವರ್ಷದಿಂದ ಕ್ಷೇತ್ರ ಕಾರ್ಯದಲ್ಲಿ ಗೊಂಡರಿಂದ ಪಡೆದ ಮಾಹಿತಿಗಳು.

* * * * *

# ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳು

ಶ್ರೀ ಅಭಯಕುಮಾರ್

ನನ್ನ ಈ ಪ್ರಬಂಧದ ಉದ್ದೇಶ ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಗುರುತಿಸುವುದೇ ಹೊರತು, ಬುಡಕಟ್ಟುಗಳ ಪರಿಚಯವಲ್ಲ. ಬುಡಕಟ್ಟುಗಳು ಸಾಮಾನ್ಯವಾಗಿ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು, ಮುಂದುವರಿಸಿಕೊಂಡು ಹೋಗಲು ಪ್ರಯತ್ನಿಸುತ್ತವೆ. ಕೆಲವು ಬಾರಿ ಸಂಪೂರ್ಣವಾಗಿ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋದರೆ, ಇನ್ನು ಕೆಲವು ಬಾರಿ ಪ್ರಬಲ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಬದಲಾವಣೆಗಳನ್ನು ಹೊಂದುತ್ತವೆ. ಈ ನಿಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳು ಯಾವ ರೀತಿಯಲ್ಲಿ ತನ್ನ ಕಾಲದ ತುಡಿತಕ್ಕೆ ಸ್ಪಂದಿಸಿವೆ, ಬದಲಾಗಿವೆ ಎಂಬುದು ಅತೀ ಮುಖ್ಯವಾಗುತ್ತದೆ. ಆದುದರಿಂದ ಈ ಪ್ರಬಂಧದಲ್ಲಿ ಮುಖ್ಯವಾಗಿ ಬುಡಕಟ್ಟುಗಳ ಜನಪದ ಕಲೆಗಳು, ಆರಾಧನಾ ಸಂಪ್ರದಾಯ, ಜೀವನಾವರ್ತನ ಆಚರಣೆಗಳು, ವೇಷಭೂಷಣ ಇವುಗಳ ಬಗ್ಗೆಯೇ ಹೆಚ್ಚು ಗಮನಕೊಡಲಾಗಿದೆ. ಅಲ್ಲದೆ ಸಾಮಾಜಿಕ ವ್ಯವಸ್ಥೆಯಲ್ಲಿ ಇಷ್ಟರವರೆಗೆ "ಕೀಳು ಸಂಸ್ಕೃತಿ" ಎಂಬ ಪಟ್ಟಿಯ ಕೆಳಗಡೆ ಇದ್ದ ಬುಡಕಟ್ಟುಗಳ ಸಾಂಸ್ಕೃತಿಕ, ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಈ ಪ್ರಯತ್ನಕ್ಕೆ ಒಂದು ಚೌಕಟ್ಟಾಗಿ, ಸರಕಾರದ ಅಧಿಸೂಚನೆಯಲ್ಲಿ ಕಂಡು ಬರುವ ಪರಿಶಿಷ್ಟ ವರ್ಗಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬುಡಕಟ್ಟುಗಳ ಬಗ್ಗೆ ಪ್ರಬಂಧವನ್ನು ಬರೆಯಲು ಆರಂಭಿಸಿದಾಗ ಎದುರಾದ ಮೊದಲ ಪ್ರಶ್ನೆಯೇ ಯಾವುದು ಬುಡಕಟ್ಟು ಮತ್ತು ಯಾವುದು ಬುಡಕಟ್ಟು ಅಲ್ಲ ಎಂಬುದು. ಸರಕಾರದ ಅಧಿಸೂಚನೆಯಂತೆ ದಕ್ಷಿಣ ಕನ್ನಡದಲ್ಲಿ ಕಂಡು ಬರುವ ಪರಿಶಿಷ್ಟ ವರ್ಗಗಳು ನಾಲ್ಕು -ಮಲೆ ಕುಡಿಯರು, ಕೊರಗರು, ಮರಾಠಿನಾಯ್ಕರು ಮತ್ತು ಕುಡುಬಿಗಳು. ಇವರಲ್ಲಿ ಮರಾಠಿನಾಯ್ಕರು ಮತ್ತು ಕುಡುಬಿಗಳು ವಲಸೆ ಬಂದವರು. ಇದಕ್ಕೆ ಆಧಾರ ಅವರ ಭಾಷೆ ಮತ್ತು ಆರಾಧನಾ ಸಂಪ್ರದಾಯ, ಬುಡಕಟ್ಟುಗಳ ಲಕ್ಷಣಗಳನ್ನು ಹೇಳುತ್ತಾ ನಿರ್ಮಲ್‌ಕುಮಾರ್ ಬೋಸ್ ಅವರು "One might indeed say that tribes can be regarded as fully absorbed in the Hindu fold if Brahmin priests perform. Brahminical ceremones for them during the three critical events of birth, marriage and death. If the latter are still celebrated by tribes rituals, then the Communties are still true to their own faith inspite of the fact that in the outer fringes of their culture they participate in some of the ceremonies of their Hindu neighbours (Tribal life in India' quoted from ಕಾಡುಗೊಲ್ಲರ

ಸಂಪ್ರದಾಯಗಳು ಮತ್ತು ನಂಬಿಕೆಗಳು: ತೀನಂ ಶಂಕರನಾರಾಯಣ. ೧೯೮೨) ಈ ಆಧಾರದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಪರಿಶಿಷ್ಟಜಾತಿಗಳನ್ನು ನೋಡಿದರೆ ಅವುಗಳು ಜಾತಿಗಳಲ್ಲಿ ಬುಡಕಟ್ಟುಗಳಾಗುತ್ತವೆ. ದ. ಕ. ಜಿಲ್ಲೆಯ ಪರಿಶಿಷ್ಟ ಜಾತಿಗಳಾದ ಮೇರ ಅಥವಾ ಮುಗೇರ, ಮನ್ಸ, ಮಂಡಾಲ, ಮಾಯಿ, ನರಿಕೆ, ಪಂಬದ, ಬಾಕುಡ, ಗೊ.. ..ಇವರ ಜೀವನಾವರ್ತನ ಆಚರಣೆಗಳಲ್ಲಿ ಬ್ರಾಹ್ಮಣ ಪೌರೋಹಿತ್ಯವಾಗಲಿ ಅಥವಾ ಬ್ರಾಹ್ಮಣ ಆಚರಣೆಯ ಲಕ್ಷಣಗಳಾಗಲಿ ಕಂಡು ಬರುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಈ ದಲಿತ ಜಾತಿಗಳು ಸಾಮಾಜಿಕ ವ್ಯವಸ್ಥೆಯಲ್ಲಿ 'ಕೀಳು' ಎಂಬ ಪಟ್ಟವನ್ನು ಕಟ್ಟಿಸಿಕೊಂಡಿರುವುದು ಮತ್ತು ಅಸ್ಪೃಶ್ಯತೆನು ಆಚರಣೆ ಅಲ್ಲದೆ ಈ ಜಾತಿಗಳ ಹಬ್ಬ ಹರಿದಿನಗಳು, ಆರಾಧನಾ ಸಂಪ್ರದಾಯಗಳು, ಜೀವನಾವರ್ತನ ಆಚರಣೆಗಳು, ಮನರಂಜನಾ ಕುಣಿತಗಳು, ಹಿಂದೂ ಧರ್ಮಕ್ಕಿಂತ ಭಿನ್ನವಾಗಿ ನಿಲ್ಲುತ್ತದೆ. 'ಜಾತಿ' ಮುಖ್ಯವಾಗಿ ಹಿಂದೂಧರ್ಮದ ಸಾಮಾಜಿಕ ವ್ಯವಸ್ಥೆಯ ಉಪ ಉತ್ಪನ್ನ ವರ್ಣವ್ಯವಸ್ಥೆಯ ಹಂತದಲ್ಲೂ ಈ ದಲಿತರನ್ನು ವ್ಯವಸ್ಥೆಯ ಒಳಗಡೆಗೆ ಸೇರಿಸಿಕೊಂಡಿಲ್ಲ. ಆದುದರಿಂದ 'ಅಸ್ಪೃಶ್ಯರು ಎಂಬ ಹಣೆ ಪಟ್ಟಿಯನ್ನು ಕಟ್ಟಿಸಿಕೊಂಡಿರುವ ಈ 'ಮುನಿವಾಸಿಗಳು' ಮೂಲತಃ ಹಿಂದೂಧರ್ಮದವರಲ್ಲ ಎಂಬ ಸಂಶಯ ಬರುತ್ತದೆ. ಬೋಸ್ ಅವರ ಹೇಳಿಕೆಯನ್ನೇ ಆಧರಿಸಿಕೊಂಡು ಹೇಳುವುದಾದರೆ ಈ ಪರಿಶಿಷ್ಟ ಜಾತಿಗಳೆಲ್ಲ ಬುಡಕಟ್ಟುಗಳ ಲಕ್ಷಣಗಳನ್ನು ಒಳಗೊಂಡಿವೆ. ಅಲ್ಲದೆ ಸರಕಾರ 'Schedule' ಗಳನ್ನು ರಚನೆ ಮಾಡುವಾಗ ಪಾಶ್ಚಾತ್ಯ ಸಮಾಜದ ಮಾದರಿಗಳನ್ನು ಅನುಸರಿಸಿರುವುದರಿಂದ ಭಾರತದ ಸಂದರ್ಭದಲ್ಲಿ ಜಾತಿ ಮತ್ತು ಬುಡಕಟ್ಟುಗಳನ್ನು ಬೇರ್ಪಡಿಸಲು ಅಸಾಧ್ಯವಾಗಿರಬಹುದು, ಅಥವಾ 'Schedule' ಗಳ ರಚನೆ ಮಾಡಿದ ಕಾಲಘಟ್ಟದಲ್ಲಿ ಈ ದಲಿತ ಜನಾಂಗಗಳೆಲ್ಲ ಕಾಲದ ಒತ್ತಡಕ್ಕೆ ಮಣಿದು ಹಳ್ಳಿಯನ್ನು ಸೇರಿರಲೂಬಹುದು. ಆದುದರಿಂದ ಅವರನ್ನು ಜಾತಿಯ ಪಟ್ಟಿಯಲ್ಲಿ ಸೇರಿಸಿ, ಇನ್ನೂ ಕಾಡಲ್ಲಿಯೆ ಇದ್ದ ಮಲೆಕುಡಿಯ, ಕೊರಗ, ಕುಡುಬಿ ಮುಂತಾದ ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗದಲ್ಲಿ ಸೇರಿಸಿರಬಹುದು. "ಜಾತಿ ಯಾವುದಾದರೂ ಒಂದು ಧರ್ಮದ ಚೌಕಟ್ಟಿನಲ್ಲಿ ಇದ್ದುಕೊಂಡು ಆ ಸಂಸ್ಕೃತಿಯ ಮೌಲ್ಯಗಳನ್ನು ಆಚರಣೆಯಲ್ಲಿ ತರುತ್ತದೆ ಮತ್ತು ವರ್ಣ ವ್ಯವಸ್ಥೆಯ ನಿಬಂಧನೆಯಂತೆ ನಡೆಯುತ್ತಿರುತ್ತದೆ. ಆದರೆ ಬುಡಕಟ್ಟುಗಳು ಯಾವ ಧರ್ಮದ ಪ್ರಭಾವಕ್ಕೂ ಒಳಗಾಗದೇ ತಮ್ಮದೇ ಆದ ನಂಬಿಕೆ ಸಂಪ್ರದಾಯ, ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಹೋರಾಡುವ ಜನಾಂಗ ಎನ್ನಬಹುದು (ಪಾಂಡುರಂಗ ಡಿ. ಆರ್. ೧೯೯೦ ಪು ೯) ಈ ಹೇಳಿಕೆಯ ಆಧಾರದಲ್ಲೂ ಈ ದಲಿತ ಜಾತಿಗಳನ್ನು ಕಂಡಾಗ ಇವರ್‍ಯಾರೂ ಹಿಂದೂ ಧರ್ಮದ ಚೌಕಟ್ಟಿನಲ್ಲಿ ಬರುವುದಿಲ್ಲ ಅನ್ನಿಸುತ್ತದೆ. ಹಿಂದೂ ಧರ್ಮದ ಚೌಕಟ್ಟಿನಲ್ಲಿ ಇವುಗಳು ನಿಂತಿಲ್ಲ, ಅಲ್ಲದೆ ತಮ್ಮದೆ ಆದ ಸಂಸ್ಕೃತಿಯನ್ನು ಅವು ರೂಢಿಸಿಕೊಂಡಿವೆ. ಇವರ ಆರಾಧನಾ ಪದ್ಧತಿ, ಹುಟ್ಟು, ಮದುವೆ, ಸಾವುಗಳ ಆಚರಣೆ ಮನರಂಜನಾ ವ್ಯವಸ್ಥೆ ಇವುಗಳೆಲ್ಲ ಹಿಂದೂ ಧರ್ಮಕ್ಕಿಂತ ಭಿನ್ನವಾಗಿ ನಿಲ್ಲುತ್ತವೆ. ಅಲ್ಲದೆ ಜಿಲ್ಲೆಯ ಜನಪದ ಕಲೆಗಳಲ್ಲಿ ಮುಕ್ಕಾಲುಪಾಲು ಕಲೆಗಳು ಈ ದಲಿತ ಜನಾಂಗದ ಸ್ವಾಮ್ಯಕ್ಕೆ ಒಳಪಟ್ಟಿವೆ. ಆದುದರಿಂದ ದ. ಕ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳೆಂದು ಗುರುತಿಸಲಾದ

ಈ ಜಾತಿಗಳಲ್ಲಿ ಬುಡಕಟ್ಟುಗಳ ಅಂಶ ಈಗಲೂ ಕಂಡು ಬರುತ್ತದೆ.

ಮಲೆಕುಡಿಯರು ಮತ್ತು ಕೊರಗರು ಕಾಡಿನಲ್ಲಿಯೇ ತಮ್ಮ ವಾಸ್ತವ್ಯವನ್ನು ಮುಂದುವರಿಸಲು ಬಲವಾದ ಕಾರಣಗಳಿವೆ. ಮಲೆ ಕುಡಿಯರು ಕಾಡಿನಲ್ಲಿಯೆ ಕುಮರಿ ಕೃಷಿಯನ್ನು ಮಾಡಿಕೊಂಡು ಅದಕ್ಕೇ ಬದ್ಧರಾಗಿ ಬದುಕುತ್ತಿರುವ ಬುಡಕಟ್ಟು ಮತ್ತು ಅಲ್ಲಿಯೇ ಹೊಲ ಗದ್ದೆಗಳನ್ನು ಮಾಡಿಕೊಂಡು ನೆಲೆಯೂರಿದರು. ಕೊರಗರು ಕಾಡಿನ ನಾರು, ಬೇರುಗಳನ್ನು ಆರಿಸಿ ಅದರಿಂದ ವಿವಿಧ ರೀತಿಯ ಹೆಣಿಗೆಗಳನ್ನು ಮಾಡಿ ಬದುಕುವ ಬುಡಕಟ್ಟು. ಆದುದರಿಂದ ಈ ಎರಡು ಬುಡಕಟ್ಟುಗಳು ಆ ಪರಿಸರದಲ್ಲಿ ಒಂದು ಭದ್ರವಾದ ಆರ್ಥಿಕ ಮೂಲವನ್ನು ಕಂಡುಕೊಂಡುದರಿಂದ ಅಲ್ಲಿಯೇ ಅವರು ನೆಲೆಯೂರಿದರು. ಆದರೆ ಉಳಿದ ಜಾತಿಯವರಿಗೆ ಈ ರೀತಿಯ ಬಲವಾದ ಯಾವುದೇ ಪಾರಂಪರಿಕ ಉದ್ಯೋಗಗಳು ಇಲ್ಲದಿರುವುದರಿಂದ ಅವರು ಕಾಲದ ಕಡೆಗೆ ಓಗೊಟ್ಟು ನಾಡನ್ನು ಸೇರಬೇಕಾಯಿತು. ಇಲ್ಲಿಯ ಭೌಗೋಳಿಕ ಪರಿಸರವನ್ನು ಕಂಡಾಗ ಹಲವಾರು ಬುಡಕಟ್ಟುಗಳು ಇರಬೇಕಾಗಿತ್ತು. ಮೇಲಿನ ಕಾರಣಗಳಿಂದಾಗಿ ಅವು ಜಾತಿಗಳಾಗಿ ಪರಿವರ್ತನೆಗೊಂಡಿರುವ ಸಂಭವಗಳೇ ಹೆಚ್ಚು. ಹೀಗೆ ದಕ್ಷಿಣ ಕನ್ನಡದ ಮಟ್ಟಿಗೆ ಬುಡಕಟ್ಟುಗಳನ್ನು ಗುರುತಿಸುವಾಗ ಈ ರೀತಿಯ ಒಂದು ಸಾಂಸ್ಕೃತಿಕ ಒಳನೋಟವನ್ನು ಇರಿಸಿಕೊಂಡರೆ ಖಂಡಿತಾ ದಕ್ಷಿಣಕನ್ನಡದ ಹಲವಾರು ಜಾತಿಗಳನ್ನು ಬುಡಕಟ್ಟುಗಳೆಂದು ಕರೆಯಬೇಕಾಗುತ್ತದೆ.

ಈ ಪ್ರಬಂಧದಲ್ಲಿ ಬುಡಕಟ್ಟುಗಳನ್ನು ಪ್ರತ್ಯೇಕವಾಗಿ ಚರ್ಚಿಸುವುದಿಲ್ಲ. ಎಲ್ಲಾ ಬುಡಕಟ್ಟುಗಳನ್ನು ಗಮನದಲ್ಲಿರಿಸಿಕೊಂಡು ಅವರ ಸಾಂಸ್ಕೃತಿಕ, ಸಾಹಿತ್ಯಿಕ ಮಹತ್ವವೇನೆಂಬುದನ್ನು ಚರ್ಚಿಸುತ್ತೇನೆ. ಭಾರತೀಯ ಸಮಾಜ ವ್ಯವಸ್ಥೆ ಮತ್ತು ಶಿಕ್ಷಣ ವ್ಯವಸ್ಥೆಯಿಂದಾಗಿ ಬುಡಕಟ್ಟುಗಳ ಸಾಂಸ್ಕೃತಿಕ ಅನನ್ಯತೆ ಮತ್ತು ಸಂಸ್ಕೃತಿಗೆ ಲಕ್ಷಣವನ್ನು ಬರೆಯುವಾಗ ಪ್ರಬಲ ಸಂಸ್ಕೃತಿಯನ್ನೇ ಮಾನದಂಡವಾಗಿ ಬಳಸಿಕೊಳ್ಳಲಾಯಿತು. ಆದುದರಿಂದ ಈ ಬುಡಕಟ್ಟುಗಳ ಆಚಾರ, ವಿಚಾರ, ನಂಬಿಕೆಗಳು ಅವಹೇಳನಕ್ಕೆ ಗುರಿಯಾದವು. ಆದರೆ ಮೂಲಭೂತವಾಗಿ ನೋಡಿದರೆ ಈ ಬುಡಕಟ್ಟುಗಳಲ್ಲಿ ಕಂಡು ಬರುವ ಮಾನವೀಯ ದೃಷ್ಟಿಧೋರಣೆಗಳು, ಪ್ರಬಲ ಸಂಸ್ಕೃತಿಯಲ್ಲಿ ಕಂಡು ಬರುತ್ತಿಲ್ಲ. ಆದರೂ ಅವುಗಳೇ ಶ್ರೇಷ್ಠವೆಂದು ಮೆರೆಯುತ್ತಿವೆ. ಇಂದಿನ ಸಾಮಾಜಿಕ ಅವಶ್ಯಕತೆಯೆ ಈ ಬುಡಕಟ್ಟುಗಳ, ಕೆಳಜಾತಿಗಳ ಸಾಂಸ್ಕೃತಿಕ ಮೌಲ್ಯಗಳನ್ನು, ಮಾನವೀಯ ದೃಷ್ಟಿಕೋನಗಳನ್ನು ಗುರುತಿಸುವ ಮುಖಾಂತರ ಆ ಜನಾಂಗಗಳ ಮೌಲ್ಯಗಳನ್ನು ಸಾಮಾಜಿಕ ಒಳಿತಿಗೆ ಬಳಸಿಕೊಳ್ಳುವುದು. ದಕ್ಷಿಣಕನ್ನಡದ ಬುಡಕಟ್ಟುಗಳ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಈ ಕೆಳಗಿನ ಅಂಶಗಳ ಹಿನ್ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಿದ್ದೇನೆ.

೧. ಆರಾಧನಾ ಸಂಪ್ರದಾಯ

೨. ವೃತ್ತಿ

೩. ಮನರಂಜನಾ ವ್ಯವಸ್ಥೆ

೪. ಮದುವೆ ಪದ್ಧತಿ

ಯಾವುದೇ ಒಂದು ಸಂಸ್ಕೃತಿಯ ಪ್ರಭಾವ ಇನ್ನೊಂದು ಸಂಸ್ಕೃತಿಯ ಮೇಲೆ

ಆಗುವುದು ಆರಂಭದಲ್ಲಿ ಬಾಹ್ಯ ಆಚರಣೆಯಲ್ಲಿ ಮಾತ್ರ. ಅನ್ಯ ಸಂಸ್ಕೃತಿಯ ಪ್ರಭಾವದಿಂದ ಭಾಷೆ, ನಡೆ-ನುಡಿಗಳಲ್ಲಿ ವ್ಯತ್ಯಾಸವನ್ನು ಕಾಣಬಹುದೇ ಹೊರತು ಯಾವುದೇ ಒಂದು ಜನಾಂಗದ ಆರಾಧನಾ ಸಂಪ್ರದಾಯದಲ್ಲಿ ಬದಲಾವಣೆಯನ್ನು ತರುವುದು ಕಷ್ಟಸಾಧ್ಯ. ಪಾರಂಪರಿಕವಾಗಿ ನಂಬಿಕೊಂಡು ಬಂದಿರುವ ದೈವ ದೇವರುಗಳನ್ನು ತ್ಯಜಿಸಿ ಅನ್ಯ ದೇವತಾ ಆರಾಧನೆಯನ್ನು ಕೈಗೊಳ್ಳುವ ಸಂಭವ ಕಡಿಮೆ. ಆದುದರಿಂದಲೇ ಬುಡಕಟ್ಟಿನ ಲಕ್ಷಣಗಳನ್ನು ಗುರುತಿಸುವಾಗ ಮೊಟ್ಟ ಮೊದಲಿಗೆ ಗಮನಿಸಬೇಕಾದುದು ಅವರ ಆರಾಧನಾ ಪದ್ಧತಿ. ದಕ್ಷಿಣ ಕನ್ನಡದ ಬುಡಕಟ್ಟುಗಳ ಪಟ್ಟಿಯಲ್ಲಿ ಬರುವ ಮಲೆಕುಡಿಯರು ಮತ್ತು ಕೊರಗರು ಹಾಗೂ ಕುಡುಬಿಗಳು ಮತ್ತು ಮರಾಠಿನಾಯ್ಕರ ಆರಾಧನಾ ಸಂಪ್ರದಾಯಗಳು ವಿಶಿಷ್ಟವಾಗಿವೆ. ಕುಡುಬಿಗಳು ಮತ್ತು ಮರಾಠಿನಾಯ್ಕರು ವಲಸೆ ಬಂದವರು ಎಂಬುದಕ್ಕೆ ಮೊದಲ ಆಧಾರವೇ ಅವರ 'ಶಕ್ತಿ' ಯ ಆರಾಧನೆ ದಕ್ಷಿಣ ಕನ್ನಡದ ಪ್ರಾದೇಶಿಕ ಸಾಂಪ್ರದಾಯಿಕ ಆರಾಧನೆ ಭೂತಗಳಿಗೆ ಸಂಬಂಧಿಸಿದುದು. ಈ ಭೂತಾರಾಧನೆ ದಕ್ಷಿಣ ಕನ್ನಡದ ಹೆಚ್ಚಿನ ಜಾತಿ ಜನಾಂಗಗಳಲ್ಲಿ ಕಂಡು ಬರುತ್ತದೆ. ಇದರ ಜೊತೆಯಲ್ಲಿಯೇ ಶಕ್ತಿಯ ಆರಾಧನಾ ರೂಪ ಕೂಡಾ ಕಂಡುಬರುತ್ತದೆ. ಪರಿಶಿಷ್ಟ ಜಾತಿಯಲ್ಲಿ ಬರುವ ರಾಣೆಯೂರ್ ಅಥವಾ ಭೈರರು ಕೂಡಾ ಈ ಶಕ್ತಿಯ ಆರಾದಕರೇ ಆಗಿದ್ದಾರೆ. ಮರಾಠಿನಾಯ್ಕರ 'ಗೊಂದೋಳು' ದಕ್ಷಿಣ ಕನ್ನಡದ ಶಕ್ತಿಯ ಆರಾಧನಾ ರೂಪಗಳಲ್ಲಿ ಒಂದಾಗಿದೆ. ಇದನ್ನೇ ಬೇರೆ ಕಡೆಗಳಲ್ಲಿ 'ಗೊಂದಲಿಗರ ಹಾಡು' ಎಂದೂ ಕರೆಯುತ್ತಾರೆ.

ಬುಡಕಟ್ಟುಗಳಲ್ಲಿ ಸಾಮಾನ್ಯವಾಗಿ ಗುರುತಿಸುವುದು ಪೂರ್ವಜರ ಆರಾಧನೆ (Ancestrol worship) ಕೊರಗರ ಮೂಲ ಆರಾಧನೆ ಕೊರಗುತನಮನಿಗೆ ಈತ ಅವರ ಸಾಂಸ್ಕೃತಿಕ ವೀರನಾಗಿದ್ದು, ಅಕಾಲಿಕ ಸಾವಿಗೆ ಗುರಿಯಾದವ. ದಕ್ಷಿಣ ಕನ್ನಡದ ಹಲವಾರು ಜಾತಿಗಳಲ್ಲಿ ಇದೇ ರೀತಿಯ ಪೂರ್ವಜರ ಆರಾಧನಾ ಸಂಪ್ರದಾಯ ಕಂಡುಬರುತ್ತದೆ. ಉದಾ: ಮೇರರು ಅಥವಾ ಮುಗೇರರು, ಮಸ್ಸರು, ಮುಂಡಾಲರು, ಅಲ್ಲದೆ ಬಿಲ್ಲವರ ಕೋಟಿ ಚೆನ್ನಯ. ಇಂದು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಈ ಸಾಂಸ್ಕೃತಿಕ ವೀರರ ಆರಾಧನೆಯಲ್ಲಿ ಕೂಡಾ ಸಂಸ್ಕೃತೀಕರಣದ ಅಂಶಗಳು ಒಳಗೊಂಡಿವೆ. ಮೂಲತಃ ಈ ಸಾಂಸ್ಕೃತಿಕ ವೀರರ ಆರಾಧನೆ ಅಗೆಲ್ ಅಥವಾ ಮಂಜದ ಮುಖಾಂತರ ನಡೆಯುತ್ತಿತ್ತು. ಇಂದು ಅದು ವೈದಿಕ ಸಂಪ್ರದಾಯದ ವಿಧಿ ವಿಧಾನಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಆಚರಣೆಯಲ್ಲಿ ಉಳಿದಿದೆ. ಕೊರಗುತನಿನು ಕೊರಗರ ಒಬ್ಬ ಅಸಾಮಾನ್ಯ ವ್ಯಕ್ತಿ. ಮಾಂತ್ರಿಕ ದೇವಸ್ಥಾನವನ್ನು ಮುಟ್ಟಿ ಅಪವಿತ್ರಗೊಳಿಸಿದನೆಂಬ ಒಂದೇ ಕಾರಣಕ್ಕೆ 'ಅನ್ಯಾಯವಾಗಿ' 'ಕೊಲ್ಲಲ್ಪಟ್ಟವ'. ಆತನಲ್ಲಿದ್ದ ಈ ಅಸಾಧಾರಣ ಶಕ್ತಿ ಸಾಮರ್ಥ್ಯಗಳ ಗೌರವದ ಸಾಂಕೇತಿಕ ಅಭಿವ್ಯಕ್ತಿಯಾಗಿ ಇಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಕೊರಗತನಿಯ ಆರಾಧನೆ ನಡೆಯುತ್ತದೆ. ಸಾಮಾಜಿಕ ಅನಿಷ್ಟತೆಗೆ ಬಲಿಯಾದ ಈತನನ್ನು ಕೊರಗರು ತಮ್ಮ ಸಾಂಸ್ಕೃತಿಕ ವೀರನಾಗಿ, ದೈವವಾಗಿ, ಶಕ್ತಿಯಾಗಿ ಆರಾಧನೆ ಮಾಡುತ್ತಾರೆ. ಆದರೆ ಕೊರಗರು ಎಂದೂ ನೇಮ, ಕೋಲಗಳ ಮುಖಾಂತರ ಆರಾಧಿಸಿದವರಲ್ಲ. ಅಗೆಲ್ ಅಥವಾ ಮಂಜದ ಮುಖಾಂತರ ಕೊರಗತನಿಯನ ಆರಾಧನೆಯಾಗಿದೆ. ಹೀಗೆ ಬುಡಕಟ್ಟುಗಳು ಸಾಮಾನ್ಯವಾಗಿ

ತಮ್ಮ ಹಿರಿಯರ, ಪೂರ್ವಜರ ಆರಾಧನೆಯನ್ನು ಮಾಡುವಾಗ, ಅದರ ಹಿಂದೆ ಒಂದು ನೈಜ ಕಾರಣವಿರುತ್ತದೆ. ಸಾಮಾಜಿಕ ಸಂಘರ್ಷದ ಸೋಲಿನ ನೋವು ಅಭಿವ್ಯಕ್ತಿಗೊಂಡಿರುತ್ತದೆ. ಈ ಅಂಶವನ್ನು ದಕ್ಷಿಣ ಕನ್ನಡದ ಹಲವಾರು ಪರಿಶಿಷ್ಟ ಜಾತಿಗಳಲ್ಲಿ ಗುರುತಿಸಬಹುದಾಗಿದೆ. ವೈದಿಕ ದೇವರುಗಳಿಲ್ಲ ದೇವಲೋಕದಿಂದ ಬಂದು ಇಲ್ಲಿ ಯ ದುಷ್ಟರನ್ನು ನಾಶಮಾಡಿ, ಶಿಷ್ಟರನ್ನು ಪರಿಪಾಲಿಸುವ ದೇವರುಗಳಾದರೆ, ಬುಡಕಟ್ಟುಗಳ ಸಾಂಸ್ಕೃತಿಕ ವೀರರು ನೆಲದ ಸತ್ವದಿಂದ ಹುಟ್ಟಿ, ಪ್ರತಿಭಾವಂತರಾಗಿ ಮಾನವಧರ್ಮದ ಮೂರ್ತಿಗಳಾಗಿ ಮೆರೆದು, ಪ್ರಬಲ ಸಂಸ್ಕೃತಿಯ ಕುತಂತ್ರಕ್ಕೆ ಬಲಿಯಾದ ಹುತಾತ್ಮರು ಇಲ್ಲಿಯೇ ಶಿಷ್ಟ ಮತ್ತು ಪರಿಶಿಷ್ಟ ಸಂಸ್ಕೃತಿಗಳ ಭಿನ್ನತೆಯನ್ನು ಕಾಣಬಹುದು. ಕೆಳವರ್ಗದ ವ್ಯಕ್ತಿಗಳು ಸಮಾಜದಲ್ಲಿ ಗೌರವದ ಸ್ಥಾನಕ್ಕೆ ಏರುವುದು ಅಂದು ಪಟ್ಟಭದ್ರ ಹಿತಾಸಕ್ತಿಗಳಿಗೆ ಅಗೌರವದ ಸಂಕೇತವಾಗಿತ್ತು. ಆದುದರಿಂದಲೇ ಕೋಟಿಚೆನ್ನನು, ಮುದ್ದ ಕಳಲ ಕೋಡ್ದಬ್ಬು ತನ್ನಿಮಾನಿಗ, ಕೊರಗುತನಿಯ ಇದರೆಲ್ಲ ಅಕಾಲಿಕ ಮರಣಕ್ಕೆ ಒಳಪಡಬೇಕಾಯಿತು. ಈ ರೀತಿಯ ಸಾಂಸ್ಕೃತಿಕ ವೀರರ ಆರಾಧನೆಯ ನೈಜ ನೆಲೆಯನ್ನು ಕಂಡುಕೊಂಡು, ಆ ಮುಖಾಂತರ ಪ್ರತಿಸಂಸ್ಕೃತಿಯ ಸಾಂಸ್ಕೃತಿಕ ಮಾನದಂಡವಾಗಿ ಈ ಆರಾಧನೆಗಳನ್ನು ಬಳಸುವುದು ಇಂದಿನ ಸಾಮಾಜಿಕ ಅನಿವಾರ್ಯತೆವಾಗಿದೆ.

ಪ್ರತಿಯೊಂದು ಬುಡಕಟ್ಟುಗಳು ಸಾಮಾನ್ಯವಾಗಿ ತಮ್ಮ ಜೀವನೋಪಾಯಕ್ಕಾಗಿ ಒಂದು ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿರುತ್ತಾರೆ. ಈ ಆರ್ಥಿಕ ವ್ಯವಸ್ಥೆಯನ್ನು ಅವರು ಬದುಕುತ್ತಿರುವ ಪರಿಸರದಲ್ಲಿಯೆ ಕಂಡುಕೊಳ್ಳುತ್ತಾರೆ. ಮಲೆಕುಡಿಯರು ಕುಮರಿ ಕೃಷಿಯನ್ನು ತಮ್ಮ ಜೀವನಾಧಾರವಾಗಿ ಬಳಸಿಕೊಂಡರೆ, ಕೊರಗರು ಅದೇ ಕಾಡಿನಲ್ಲಿ ದೊರೆಯುವ ಬಳ್ಳಿ, ನಾರುಗಳಿಂದ ಬುಟ್ಟಿ ಹೆಣೆಗೆಗಳನ್ನು ಮಾಡಿ ಜೀವನಾಧಾರಕ್ಕೆ ಅವಲಂಬನೆಯನ್ನು ರೂಪಿಸಿಕೊಂಡರು. ಆದರೆ ಇತ್ತೀಚಿಗೆ ಸರಕಾರಿ ಕಾಯ್ದೆಯ ಕಾರಣದಿಂದಾಗಿ ಇವರು ಕಾಡಿನಿಂದ ನಾಡಿಗೆ ಬರುವಂತಾಗಿದೆ. ಆದರೂ ಇವರು ಇಂದು ತಮ್ಮ ಮೂಲ ವೃತ್ತಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುತ್ತಿರುವುದು ಕಂಡು ಬರುತ್ತಿದೆ. ಮಲೆಕುಡಿಯರು ಕುಮರಿ ಕೃಷಿಯನ್ನು ಬಿಟ್ಟು ಕಾಡಿನಲ್ಲಿಯೇ ಗದ್ದೆಗಳನ್ನು ಮಾಡಿಕೊಂಡಿರುತ್ತಾರೆ. ಈ ಬುಡಕಟ್ಟುಗಳಲ್ಲಿರುವ ಕೈ ಕಸುಬುಗಳಿಗೆ ಸೌಂದರ್ಯಾತ್ಮಕ ಮತ್ತು ತಾಂತ್ರಿಕ ಅಗತ್ಯಗಳನ್ನು ಪೂರೈಸಿದರೆ ಬುಡಕಟ್ಟುಗಳ ಈ ಮೂಲ ವೃತ್ತಿ ಸಾಮಾಜಿಕ ಮನ್ನಣೆಯನ್ನು ಪಡೆಯುವುದಲ್ಲದೆ, ಸಾಮಾಜಿಕ ಅವಶ್ಯಕತೆಗಳನ್ನೂ ಪೂರೈಸುತ್ತವೆ. ಬುಡಕಟ್ಟುಗಳನ್ನು ಅವರ ಸಾಂಸ್ಕೃತಿಕ ಪರಿಸರದಿಂದ ಬೇರ್ಪಡಿಸುವುದಕ್ಕಿಂತಲೂ, ಅವರ ಪರಿಸರದಲ್ಲಿಯೇ ವಿವಿಧ ವೃತ್ತಿಗಳಲ್ಲಿ ಅವರನ್ನು ಪರಿಣತರನ್ನಾಗಿ ಮಾಡಿದರೆ ಬುಡಕಟ್ಟುಗಳ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡಂತೆಯೂ ಆಗುತ್ತದೆ.

ಮನುಷ್ಯನಿಗೆ ಅನ್ನ, ಮೈಥುನದ ಹಾಗೆ ಅನಿವಾರ್ಯವಾಗಿ ಬೇಕಾಗಿರುವುದು ಮನರಂಜನೆ. ಇಂದಿನ ಕಾಲಘಟ್ಟದಲ್ಲಿ ಮನರಂಜನೆಯನ್ನು ಒದಗಿಸಲು ನೂರಾರು ಮಾಧ್ಯಮಗಳಿವೆ. ಆ ಮಾಧ್ಯಮಗಳೇ ಅವನ ಮನರಂಜನಾ ಅಗತ್ಯತೆಯನ್ನು ಸೂಚಿಸುತ್ತವೆ. ಆದರೆ ಬುಡಕಟ್ಟುಗಳು ಗುಡ್ಡಗಾಡುಗಳಲ್ಲಿ ವಾಸಿಸುವಾಗ ಅವರಿಗೆ ಈ ರೀತಿಯ ಯಾವುದೇ

ಮಾಧ್ಯಮಗಳ ಬೆಂಬಲವಿರಲಿಲ್ಲ. ಆದುದರಿಂದಾಗಿ ಅವನಾಗಿಯೇ ತಮ್ಮ ಕಲ್ಪನೆಗೆ, ತಮ್ಮ ಸಂಸ್ಕೃತಿಗೆ ಅನುಗುಣವಾದ ಮನರಂಜನಾ ವ್ಯವಸ್ಥೆಯನ್ನೂ ರೂಪಿಸಿಕೊಂಡರು. ಈ ಮನರಂಜನಾ ವ್ಯವಸ್ಥೆ ನಾನು ಈಗಾಗಲೇ ತಿಳಿಸಿರುವಂತೆ ಅವರ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತದೆ. ಕಾಡಿನ ಮಧ್ಯೆ ಗುಡುಗು, ಮಳೆ, ಸಿಡಿಲುಗಳ ಮಧ್ಯೆ ಬದುಕುತ್ತಿದ್ದ ಆತ ಪ್ರಕೃತಿಯ ಈ ರುದ್ರನಾದಕ್ಕೆ ಮರುಳಾಗಿ ಅದೇ ರೀತಿಯ ನಾದವನ್ನು ಕಲ್ಪಿಸಿಕೊಂಡ. ಹಾಗಾಗಿಯೇ ಬುಡಕಟ್ಟುಗಳ ವಾದ್ಯಗಳೆಲ್ಲ ಹೆಚ್ಚಾಗಿ ಈ ರೀತಿಯ ಗಂಭೀರ, ರುದ್ರ ಧ್ವನಿಯನ್ನು ಧ್ವನಿಸುವಂತಹವೇ ಆಗಿರುತ್ತವೆ. ಅಲ್ಲದೆ ಈ ರೀತಿಯ ವಾದ್ಯಗಳನ್ನು ರೂಪಿಸುವಾಗ ಆಯಾ ಜನಾಂಗದ ಜನರ ಮನೋಧರ್ಮ ಕೂಡಾ ಬಿಂಬಿತವಾಗುತ್ತದೆ. ಮಲೆಕುಡಿಯರಲ್ಲಿ ಕಂಡು ಬರುವ 'ದುಡಿ' ಎಂಬ ಚರ್ಮವಾದ್ಯವಾಗಲಿ ಅಥವಾ ಕೊರಗರ ಡೋಲಾಗಲಿ ಈ ನಿಟ್ಟಿನಲ್ಲಿಯೇ ರೂಪುಗೊಂಡಂತಹವು. ಈ ವಾದ್ಯಗಳ ಧ್ವನಿಗಳೊಂದಿಗೆ ಹಾಡಿ ಕುಣಿಯುವುದನ್ನು ಈ ಬುಡಕಟ್ಟುಗಳಲ್ಲಿ ಗುರುತಿಸಬಹುದು. ಬುಡಕಟ್ಟುಗಳ ಮನರಂಜನಾ ವ್ಯವಸ್ಥೆ ಅವರ ಸಾಂಸ್ಕೃತಿಕ ಹಿನ್ನೆಲೆಯಿಂದ ಅವರಿಗಾಗಿಯೇ ರೂಪುಗೊಂಡಿರುವುದೇ ಹೊರತು ಪ್ರದರ್ಶನಕ್ಕಲ್ಲ. ಆದುದರಿಂದ ಅಲ್ಲಿ ಕುಣಿತಗಳ, ವಾದ್ಯನಾದಗಳ ವೈವಿಧ್ಯತೆಯಿದೆ. ಬುಡಕಟ್ಟುಗಳ ಮನರಂಜನಾ ಕಲೆಗಳ ಅರ್ಥವನ್ನು ಅವುಗಳ ವೈಶಿಷ್ಟ್ಯಗಳನ್ನು ಗುರುತಿಸಬೇಕಾದರೆ, ಆಯಾ ಸಾಂಸ್ಕೃತಿಕ ಪರಿಸರದಲ್ಲಿಯೆ ಅವುಗಳನ್ನು ಇಟ್ಟು ನೋಡಬೇಕಾಗುತ್ತದೆ. ಆ ಕಲೆಗಳ ಮುಖಾಂತರ ಅವರು ತಮ್ಮ ನೋವು ನಲಿವುಗಳನ್ನು ಅಭಿವ್ಯಕ್ತಿಸಿದ್ದಾರೆ. ಈ ಅಭಿವ್ಯಕ್ತಿಯೇ ಒಂದು ಬುಡಕಟ್ಟಿನ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಎತ್ತಿ ಹಿಡಿಯುತ್ತದೆ. ಕೊರಗರಲ್ಲಿ, ಮಲೆಕುಡಿಯರಲ್ಲಿ ,ಕುಡುಬಿಗಳಲ್ಲಿ ಈ ರೀತಿಯ ಒಂದು ವ್ಯವಸ್ಥೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಆದುದರಿಂದಲೇ ಇಂದು ಬುಡಕಟ್ಟುಗಳಲ್ಲಿ ಅವರ ಮನರಂಜನಾ ಕಲೆಗಳು ಉಳಿದುಕೊಂಡಿವೆ, ಬೆಳೆದಿವೆ.

ಬುಡಕಟ್ಟುಗಳ ಆರಾಧನಾ ಸಂಪ್ರದಾಯಗಳ ಮೇಲೆ ಅನ್ಯ ಸಂಸ್ಕೃತಿಗಳ ಪ್ರಭಾವ ಕಡಿಮೆಯಿರುವಂತೆ ಬುಡಕಟ್ಟುಗಳ ಹುಟ್ಟು, ಮದುವೆ ಮತ್ತು ಸಾವಿನ ಸಂದರ್ಭದ ಆಚರಣೆಗಳಲ್ಲೂ ಕಡಿಮೆಯಿರುತ್ತದೆ. ಮಲೆಕುಡಿಯರ ಅಥವಾ ಕೊರಗರ ಮತ್ತು ಪರಿಶಿಷ್ಟ ಜಾತಿಗಳ ಯಾವುದೇ ಆಚರಣೆಗಳಲ್ಲಿ ಬ್ರಾಹ್ಮಣ ಪೌರೋಹಿತ್ಯವಿಲ್ಲ. ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಈ ಆಚರಣೆಗಳನ್ನು ಅವರು ನಡೆಸುತ್ತಾರೆ. ಈ ಬುಡಕಟ್ಟುಗಳ ವೈಶಿಷ್ಟ್ಯವೆಂದರೆ ಹುಟ್ಟು, ಮದುವೆಗಳಿಗೆ ಅವರು ನೀಡಿರುವ ಮಹತ್ವ. ಹುಟ್ಟಿದ ಮಗುವಿಗೆ ತಮ್ಮ ಸಂಸ್ಕೃತಿಯ ಪಾರಂಪರಿಕ ಹೆಸರುಗಳನ್ನೇ ಇಡುತ್ತಾರೆ. ಅಲ್ಲದೆ ಹೆಣ್ಣು ಪುಷ್ಪವತಿಯಾಗುವ ಮತ್ತು ಫಲವತಿಯಾಗುವ ಕ್ರಿಯೆಗಳಿಗೆ, ಆಧ್ಯಾತ್ಮಿಕ ಗೌರವವನ್ನೂ ನೀಡುತ್ತಾರೆ. ಕೊರಗರಲ್ಲಿ ಕಂಡುಬರುತ್ತಿರುವ ಮದುವೆಯ ಪದ್ಧತಿಯೇ ವಿಶೇಷವಾದುದು. ಸಾಮಾನ್ಯವಾಗಿ ಮದುವೆ ಒಂದು ಕುಟುಂಬದಲ್ಲಿಯೆ ಏಕಕಾಲದಲ್ಲಿ ಒಬ್ಬರಿಗೆ ಅಥವಾ ಇಬ್ಬರಿಗೆ ನಡೆಯುತ್ತದೆ. ಆದರೆ ಕೊರಗರಲ್ಲಿ ಹಾಗಿರದೆ ಕೊರಗ ಜಾತಿಯ ಒಂದು ಗುಂಪಿಗೇ ಮದುವೆ ನಡೆಯಬೇಕು. ಏಳು ಜನರಿಗಿಂತ ಕಡಿಮೆಯಿದ್ದ ಪಕ್ಷದಲ್ಲಿ ಮದುವೆ ನಡೆಯುವಂತಿಲ್ಲ. ಸಾಮೂಹಿಕ ವಿವಾಹದ ಕಲ್ಪನೆ ಕೊರಗರಲ್ಲಿ ಆರಂಭದಿಂದಲೂ ಇದೆ.

ಈ ರೀತಿಯ ಮದುವೆ ಅವರಲ್ಲಿ ಐಕ್ಯಮನೋಭಾವನೆಯನ್ನು ಬೆಳಿಸುವುದಲ್ಲದೆ, ಅನವಶ್ಯಕ ಖರ್ಚನ್ನು ಕೂಡಾ ತಡೆ ಹಿಡಿಯುತ್ತದೆ. ಈ ದೃಷ್ಟಿಯಿಂದ ಕೊರಗರ ಮದುವೆ ವಿಶೇಷವಾಗಿರುವುದು ಅಲ್ಲದೆ ಕೊರಗರ ಮದುವೆಯಲ್ಲಿ ಮುಖ್ಯ ಪಾತ್ರ ವಹಿಸುವವನು ಅವರ ಕುಲದ ಮುಖ್ಯಸ್ಥ. ಅವನಿಗೆ ಅಲ್ಲಿ ವಿಶೇಷ ಗೌರವ, ಮನ್ನಣೆಯಿರುತ್ತದೆ. ಕೊರಗರಲ್ಲಿ ವಿಧವೆಯರೇ ಇಲ್ಲ. ಗಂಡ ತೀರಿಕೊಂಡರೂ ಇನ್ನೊಬ್ಬನನ್ನು ಕೂಡಿ ಬದುಕುವ ಹಕ್ಕು ಅವರಿಗಿದೆ. ಅಲ್ಲದೆ ವಿವಾಹ ವಿಚ್ಛೇದನ ಕೂಡಾ ಸರಳವಾದುದು. ಆದುದರಿಂದ ಕೊರಗರಲ್ಲಿ 'ವಿವಾಹ' ಬ್ರಹ್ಮಗಂಟಾಗಿರದೆ ಅವರ ಬದುಕಿನ ಅವಶ್ಯಕತೆಗೆ ಅನುಗುಣವಾಗಿ ನಡೆಯುತ್ತದೆ. ಕುಟುಂಬದಲ್ಲಿ ಗಂಡಿಗೆ ಇರುವಷ್ಟೇ ಪ್ರಾಮುಖ್ಯತೆ ಹೆಣ್ಣಿಗೂ ಇರುತ್ತದೆ. ಕಾರಣ ಅವಳು ದೈಹಿಕಶ್ರಮ ಮತ್ತು ಮಾನಸಿಕ ಶ್ರಮ ಎರಡರಲ್ಲಿಯೂ ಗಂಡಿನಷ್ಟೇ ಬಲಿಷ್ಠಳು. ಈ ಅಂಶಗಳನ್ನು ದಕ್ಷಿಣಕನ್ನಡ ಪರಿಶಿಷ್ಟ ಜಾತಿಗಳಲ್ಲಿಯೂ ಕಾಣಬಹುದು. ಹಿಂದೂ ಧರ್ಮದ ಕಳಂಕಗಳಾಗಿರುವ ಸ್ತ್ರೀಶೋಷಣೆ, ವರದಕ್ಷಿಣೆ, ವಿಧವಾ ಪದ್ಧತಿ, ಸತಿಪದ್ಧತಿ ಇವುಗಳಾವುದೂ ಈ ಬುಡಕಟ್ಟುಗಳಲ್ಲಿ ಕಂಡುಬರುತ್ತಿಲ್ಲ. ಕೊರಗರಲ್ಲಿ ಮತ್ತು ಮಲೆಕುಡಿಯರಲ್ಲಿ ಅಲ್ಲದೆ ಪರಿಶಿಷ್ಟಜಾತಿಗಳಲ್ಲಿ ವಧುದಕ್ಷಿಣೆಯಿದೆಯೇ ಹೊರತು ವರದಕ್ಷಿಣೆಯಿಲ್ಲ. 'ಬಳಿ' ಯನ್ನು ನಿರ್ಧರಿಸುವಾಗ ತಾಯಿಯಿಂದ ಮಕ್ಕಳಿಗೆ ಬರುತ್ತಿದೆಯೇ ಹೊರತು ತಂದೆಯಿಂದಲ್ಲ. ಈ ಎಲ್ಲಾ ಅಂಶಗಳು ಬುಡಕಟ್ಟಿನಲ್ಲಿ ಹೆಣ್ಣಿಗೆ ನೀಡಿರುವ ಸ್ಥಾನಮಾನ, ಅಧಿಕಾರಗಳನ್ನು ಬಿಂಬಿಸುತ್ತವೆ.

ಈ ಬುಡಕಟ್ಟುಗಳು ಸಾಮಾಜಿಕ ಬದುಕಿಗೆ ಪ್ರತಿಸ್ಪಂಧಿಸಿದ ರೀತಿಯನ್ನು ಕಂಡಾಗ ಆಶ್ಚರ್ಯವಾಗುತ್ತದೆ. ದಕ್ಷಿಣಕನ್ನಡದಲ್ಲಿ ಕೊರಗ ವೇಷ ಹಾಕುವುದು ಸಾಮಾನ್ಯ ಪದ್ಧತಿ ಮೈಗೆ ಕಪ್ಪುಬಣ್ಣ ಬಳಿದುಕೊಂಡು, ತಲೆಯ ಮೇಲೆ ಹಾಳೆಯಿಂದ ಮಾಡಿದ 'ಗೋಂಪರ್' ಇರಿಸಿಕೊಂಡು ಕೊಳಲು ಊದುತ್ತಾ ಕೊರಗು ಮನೆ ಮನೆಗೆ ಹೋಗುತ್ತಾನೆ. ಕಪ್ಪನೆಯ ವ್ಯಕ್ತಿ ಊರಿನ ಅನಿಷ್ಟಗಳನ್ನು ತೊಡೆದು ಹಾಕುತ್ತಾನೆ ಎಂಬ ನಂಬಿಕೆ ಈ ಆಚರಣೆಯ ಹಿನ್ನೆಲೆಯಲ್ಲಿದೆ. ಆದುದರಿಂದ ಕೊರಗರು ಸಾಮಾಜಿಕ ಅನಿಷ್ಟ ನಿವಾರಕರೆಂದೂ ಕರೆಯಲ್ಪಡುತ್ತಾರೆ. ಅಲ್ಲದೆ ದ. ಕ. ದಲ್ಲಿ ಬಳಕೆಯಲ್ಲಿರುವ ಒಂದು ಪದ್ಧತಿ ವಿಶೇಷವಾದುದು. ಮೇಲ್ಜಾತಿಯಲ್ಲಿ ಯಾವುದಾದರೂ ಮಗು ಹುಟ್ಟಿ, ಅದು ಅಸೌಖ್ಯ ಅಥವಾ ಅನಾರೋಗ್ಯದಿಂದ ಬಳಲುತ್ತಿದ್ದರೆ ಕೊರಗ ಹೆಂಗಸನ್ನು ಮನೆಗೆ ಬರಮಾಡಿ ಅವಳಿಗೆ ಮಗುವನ್ನು ನೀಡುತ್ತಾರೆ. ಆಕೆ ಮಗುವನ್ನು ತೆಗೆದುಕೊಂಡು, ಅದಕ್ಕೆ ಎದೆ ಹಾಲೂಡಿಸಿ ತನ್ನ ಜನಾಂಗದ ಯಾವುದಾದರೂ ಒಂದು ಹೆಸರನ್ನು ಇರಿಸಿ ಮನೆಯವರಿಗೆ ವಾಪಸ್ಸು ನೀಡುತ್ತಾಳೆ. ಹೀಗೆ ಮಾಡಿದರೆ ಆ ಮಗುವಿನ ಕಾಯಿಲೆ, ಕಸಾಲೆಗಳು ಇಲ್ಲದಾಗುತ್ತವೆ. ಎಂಬ ನಂಬಿಕೆ ಅವರಲ್ಲಿದೆ. ಮೇಲಿನ ಎರಡು ಸಂದರ್ಭಗಳಲ್ಲಿಯೂ ಕೊರಗರು ಸಮಾಜಕ್ಕೆ ಅಥವಾ ವ್ಯಕ್ತಿಗೆ ಬಂದಿರುವ ಕೇಡನ್ನು ತಾವು ಪಡೆದುಕೊಂಡು, ಸಮಾಜ, ವ್ಯಕ್ತಿಗಳು ಸುಖಿಗಳಾಗಿರಲಿ ಎಂಬ ಒಂದು ಮಾನವೀಯ ದೃಷ್ಟಿಕೋನ ಅವರಲ್ಲಿರುವುದು ಕಂಡು ಬರುತ್ತದೆ.

ಬುಡಕಟ್ಟುಗಳ ಮಾನವೀಯ ದೃಷ್ಟಿಕೋನಕ್ಕೆ ಇನ್ನೊಂದು ಉದಾಹರಣೆಯನ್ನು

ಕೂಡಾ ಕೊರಗರಿಂದಲೇ ನೀಡುತ್ತಿದ್ದೇನೆ. ದಕ್ಷಿಣ ಕನ್ನಡದ ಪ್ರಮುಖ ಜನಪದ ಕ್ರೀಡೆಗಳಲ್ಲಿ 'ಕಂಬಳ' ಕೂಡಾ ಒಂದು. ಕಂಬಳದ ಹಿಂದಿನ ದಿನ ರಾತ್ರಿ ಕಂಬಳಗದ್ದೆಯ ಸಮೀಪದಲ್ಲಿ ನಡೆಯುತ್ತಿರುವ ಒಂದು ವಿಶಿಷ್ಟ ಆಚರಣೆಯನ್ನು ಡಾ. ಪುರುಷೋತ್ತಮ ಬಿಳಿಮಲೆಯವರು ದಾಖಲಿಸಿದ್ದಾರೆ. ಅಂದು ರಾತ್ರಿ ಆ ಊರಿನ ಕೊರಗರು ಆ ಗದ್ದೆಯ ಬದಿಯ ಬಯಲಿನಲ್ಲಿ ಡೋಲು ಬಾರಿಸಿಕೊಂಡು ಕುಣಿಯುತ್ತಾರೆ. ಅಶ್ಲೀಲ ಸಾಹಿತ್ಯವನ್ನು ಹಾಡುತ್ತಾರೆ. ಸಲಿಂಗರತಿಯನ್ನು ಅನುಕರಿಸುತ್ತಾರೆ. ಮತ್ತು ಮರುದಿನ ಬೆಳಿಗ್ಗೆ ಕಂಬಳದ ಗದ್ದೆಗೆ ಕೋಣಗಳು ಇಳಿಯುವ ಮುಂಚೆ ಆ ಗದ್ದೆಗಳಲ್ಲಿ ಅವರೇ ಕೋಣಗಳಾಗಿ ಓಡುತ್ತಾರೆ. ಈ ಆಚರಣೆಯ ಮೇಲೆ ಅಧ್ಯಯನದ, ಆಲೋಚನ ಕ್ಷಕಿರಣ ಬೀರಿದಾಗ ಅದ್ಭುತವಾದ ಪ್ರತಿಭಟನಾ ರೀತಿ ಗೋಚರಿಸದಿರದು. ಕೊರಗರು ಕುಣಿಯುವುದೇ ರಾತ್ರಿಯ ಹೊತ್ತಿನಲ್ಲಿ. ಹಗಲು ಹೊತ್ತಿನಲ್ಲಿ ಅವರಿಗೆ ಊರಿನ ಪ್ರವೇಶ ನಿಯಂತ್ರಿಸಲ್ಪಟ್ಟಿತ್ತು. ಹಾಗಾಗಿ ಅಂದು ರಾತ್ರಿ ಅವರೆಲ್ಲ ಸೇರಿ ಅಶ್ಲೀಲ ಹಾಡುಗಳಲ್ಲಿ ಬೈಯುತ್ತಾರೆ. ಈ ಬೈಯುವಿಕೆಗೆ ಮುಖ್ಯ ಕಾರಣ ಅವರ ಸಂಸ್ಕೃತಿಯ ಮೇಲೆ ಆದ ಅನ್ಯಸಂಸ್ಕೃತಿಯ ದಬ್ಬಾಳಿಕೆಯ ಬಗೆಗಿನ ಸಿಟ್ಟು. ಆದರೂ ಈ invasive culture ಕೊರಗರನ್ನು ಪ್ರಾಣಿಗಳಾಗಿ ಮಾಡುವವರೆಗೆ ಬಿಟ್ಟಿಲ್ಲ. ಅದರ ಸಾಂಕೇತಿಕತೆಯೇ ಕಂಬಳದಲ್ಲಿ ಕೋಣಗಳಾಗಿ .ಓಡುವುದು. ಹೀಗೆ ಈ ಒಂದು ಆಚರಣೆಯಲ್ಲಿ ಕೊರಗರ ಪ್ರತಿಭಟನೆಯಲ್ಲದೆ ಅವರ ಮಾನವೀಯ ಕಳಕಳಿ ಕೂಡಾ ವ್ಯಕ್ತಗೊಳ್ಳುತ್ತದೆ. ಕೊರಗರು ಈ ರೀತಿಯಲ್ಲಿ ಕಂಬಳದಲ್ಲಿ ಓಡಿದರೆ ಆ ಗದ್ದೆಯ ಫಲವತ್ತತೆ ಹೆಚ್ಚುತ್ತದೆ ಎಂಬ ನಂಬಿಕೆಯಿದೆ. ಸಮೂಹದ ಒಳಿತಿಗಾಗಿ ಕೊರಗರು ಪ್ರಾಣಿಗಳಾಗಲು ಕೂಡಾ ಹಿಂಜರಿಯಲಿಲ್ಲ ಎಂಬ ಅಂಶವನ್ನು ಗಮನಿಸಿದಾಗ ಈ ಬುಡಕಟ್ಟುಗಳಲ್ಲಿ ಕಂಡು ಬರುವ ಅದಮ್ಯ ಮಾನವ ಪ್ರೇಮ ಗಮನಕ್ಕೆ ಬಾರದಿರದು.

ಹೀಗೆ ಗುರುತಿಸುತ್ತಾ ಹೋದರೆ ಬುಡಕಟ್ಟುಗಳ ಆಚರಣೆಯ ಪ್ರತಿಯೊಂದು ಸಂದರ್ಭದಲ್ಲಿ ಕೂಡಾ ಯಾವುದಾದರೂ ಒಂದು ಮಹತ್ವದ ಅಂಶವನ್ನು ಗುರುತಿಸಲು ಸಾಧ್ಯವಾಗುತ್ತದೆ. ಈಗಾಗಲೇ ಚರ್ಚೆ ಮಾಡಿದ ಅಂಶಗಳನ್ನು ಈ ರೀತಿಯಲ್ಲಿ ಕ್ರೋಢೀಕರಿಸಬಹುದು.

೧. ಬುಡಕಟ್ಟುಗಳಲ್ಲಿ ಕಂಡು ಬರುವ ಅದಮ್ಯ ಮಾನವ ಪ್ರೇಮ ಮತ್ತು ಸಾಮಾಜಿಕ ಒಳಿತಿಗೆ ಅವರ ತ್ಯಾಗ.
೨. ಅವರ ಸೃಜನ ಶೀಲ ಸಾಮರ್ಥ್ಯ.
೩. ಪರಿಸರವನ್ನು ನಾಶಮಾಡದೆ ಪರಿಸರಕ್ಕೆ ಬದ್ಧರಾಗಿ ಬದುಕುವ ಲಕ್ಷಣಗಳು.
೪. ಬುಡಕಟ್ಟುಗಳ ಲೋಕದೃಷ್ಟಿ ಮತ್ತು ಸಾಂಸ್ಕೃತಿಕ ಅನನ್ಯತೆ ಅವರ ಯೋಚನಾ ಮಧ್ಯ ಮತ್ತು ಸಾಂಸ್ಕೃತಿಕ ಪರಿಸರದಿಂದ ರೂಪುಗೊಂಡಿರುವುದು.
೫. ಬುಡಕಟ್ಟುಗಳು ವ್ಯಕ್ತಪಡಿಸುವ ಪರೋಕ್ಷ ಪ್ರತಿಭಟನೆ.
೬. ಲಿಬರಲ್ ಆದ ಮದುವೆ ನಿಯಮಗಳು.

ಹೀಗೆ ಇವುಗಳನ್ನು ಇನ್ನೂ ಗುರುತಿಸುತ್ತಾ ಹೋಗಬಹುದು. ಬುಡಕಟ್ಟುಗಳ ವಸ್ತುನಿಷ್ಠ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡರೆ ಅವುಗಳು ಈಗಾಗಲೇ ತನ್ನ

ಛಾಪನ್ನು ಒತ್ತಿರುವ ಸಂಸ್ಕೃತಿಗೆ ಒಂದು ಪ್ರತಿ ಸಂಸ್ಕೃತಿಯಾಗಿ ರೂಪುಗೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಅಲ್ಲದೆ ಈ ಸಂಸ್ಕೃತಿ ಮಾನವತಾ ವಾದ , ಸಮಾನತೆ ಮತ್ತು ಸಹೋದರತೆಯ ಮೇಲೆ ನಿಂತಿರುತ್ತದೆ. ಬುಡಕಟ್ಟುಗಳಲ್ಲಿ ಪ್ರಗತಿ ವಿರೋಧಿ, ಸಮಾಜ ವಿರೋಧಿ ನೀತಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಬದಲಾಗಿ ಪ್ರಗತಿಪರ, ಸಮಾಜಮುಖೀ ನೀತಿಗಳ ನೆಲೆಯಲ್ಲಿಯೇ ಬುಡಕಟ್ಟುಗಳ ಆದ್ಯತೆ ನಿಂತಿರುವುದು.

* * * * *

# ಡಾ. ಗದ್ದಿಗಿಮಠರ ಜಾನಪದ ಸಂಗ್ರಹ ಮತ್ತು ಸಂಶೋಧನಾ ವಿಧಾನಗಳು

ಡಾ. ಮೃತ್ಯುಂಜಯ ಹೊರಕೇರಿ

ಕನ್ನಡ ಜಾನಪದ ಸಾಹಿತ್ಯದ ಅಧ್ಯಯನವನ್ನು ಆರಂಭಿಸಿ ಮುಂದಿನವರಿಗೆ ಧೈರ್ಯ-ದಾರಿಗಳನ್ನು ತೋರಿದ ದಿವಂಗತ ಡಾ. ಬಿ. ಎಸ್. ಗದ್ದಿಗಿಮಠ ಅವರು ಇನ್ನೂ ಹೆಚ್ಚಿನ ಕಾಣಿಕೆಯನ್ನು ಈ ಕ್ಷೇತ್ರಕ್ಕೆ ನೀಡಬಹುದೆಂಬ ನಿರೀಕ್ಷೆಯಲ್ಲಿದ್ದಾಗಲೇ ನಮ್ಮಿಂದ ಅವರು ಅಗಲಿ ಹೋದರು. ಅವರ ಅಗಲುವಿಕೆಯಿಂದ ಜಾನಪದ ಕ್ಷೇತ್ರಕ್ಕೆ ಅಪಾರ ಹಾನಿಯುಂಟಾಯಿತು. ಇದು ಇಡೀ ನಾಡಿನ ಜನರ ಅಭಿಪ್ರಾಯವಾಗಿದೆ. ಅತ್ಯಂತ ಉತ್ಸಾಹದಿಂದ ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡು ದುಡಿಯುತ್ತಿದ್ದ ಅವರು, ತಾವು ಬದುಕಿದ್ದ ಕಾಲವನ್ನೆಲ್ಲಾ ಜಾನಪದ ಸಾಹಿತ್ಯದ ಸಂಗ್ರಹಣ - ಸಂಕಲನ-ಅಧ್ಯಯನ-ಪ್ರಕಾಶನಗಳಿಗೆ ಮೀಸಲಿರಿಸಿದರು. ಜಾನಪದ ಪರಿಸರದಲ್ಲಿಯೇ ಹುಟ್ಟಿ ಬೆಳೆದು ಬಂದ ಅವರು ಜಾನಪದ ಕ್ಷೇತ್ರದ ಬಗೆಗೆ ಅಪಾರ ಕಾಳಜಿ - ಅಭಿಮಾನ ಹೊಂದಿದ್ದರು. ಅವರ ತಂದೆ-ತಾಯಿಗಳು ಜನಪದ ಕವಿಗಳಾಗಿದ್ದರು. ಅವರ ಪ್ರಭಾವ ಹಾಗೂ ಸಂಸ್ಕಾರ ಬಲದಿಂದ ಮಗ ಡಾ. ಗದ್ದಿಗಿಮಠರು ಉತ್ತಮ ಜಾನಪದ ಹಾಡುಗಾರರೂ ಆಗಿದ್ದರು. ಡಾ. ಗದ್ದಿಗಿಮಠರು "ಜಾನಪದ ಮಹಾಸಾಗರದಲ್ಲಿ ಈಜುವ ಮಹಾ-ಮತ್ಸ್ಯವಾಗಿದ್ದರು" ಎಂದು ಡಾ. ಡಿ. ಎಲ್. ನರಸಿಂಹಾಚಾರ್ಯರು ನುಡಿದ ಉಕ್ತಿ ಸತ್ಯವಾದುದು.

ವಿಜಾಪುರ ಜಿಲ್ಲೆಯ ಹಲಸಂಗಿ ಬಳಗದವರು 'ಗರತಿ ಹಾಡು' ಎಂಬ ಸಂಕಲನದ ಮೂಲಕ ಜಾನಪದ ಸಾಹಿತ್ಯ ಸಂಗ್ರಹಕ್ಕೆ ನಾಂದಿ ಹಾಡಿದರು. ಅಲ್ಲಿಂದ ಇಡೀ ಕರ್ನಾಟಕದಲ್ಲಿ ಜಾನಪದ ಸಾಹಿತ್ಯ ಸಂಕಲನ ಕೃಷಿ ಪ್ರಾರಂಭವಾಯಿತು. ಅದೇ ಜಿಲ್ಲೆಯ ಕೆರೂರಿನವರಾದ ಡಾ. ಗದ್ದಿಗಿಮಠರು ಮೊಟ್ಟಮೊದಲಿಗೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅಂಥವೇ ಹಾಡುಗಳನ್ನು ಆಧಾರವಾಗಿಟ್ಟುಕೊಂಡು 'ಕನ್ನಡ ಜಾನಪದ ಗೀತಗಳು' ಎಂಬ ವಿಷಯ ಕುರಿತು ಅಧ್ಯಯನಗೈದು ಮಹಾ ಪ್ರಬಂಧ ರಚಿಸಿ ಪಿಎಚ್.ಡಿ ಪದವಿ ಪಡೆದು ಜಾನಪದ ಸಾಹಿತ್ಯಕ್ಕೆ ವಿಶೇಷ ಮನ್ನಣೆ ತಂದುಕೊಟ್ಟರು. ವಿಜಾಪುರ ಜಿಲ್ಲೆಯಿಂದಲೇ ಜಾನಪದ ಸಾಹಿತ್ಯದ ಸಂಕಲನ-ಅಧ್ಯಯನ ಆರಂಭವಾದುದು ಗಮನಾರ್ಹವಾದ ಸಂಗತಿಯಾಗಿದೆ.

ಡಾ. ಗದ್ದಿಗೀಮಠ ಅವರ ಸಂಗ್ರಹಣ-ಅಧ್ಯಯನ-ಪ್ರಕಾಶನ-ಪ್ರದರ್ಶನ ಜಾನಪದ ಹಾಡುಗಳಿಗೆ ಮಾತ್ರ ಸೀಮಿತವಾಗಿದೆ. ಅವರಿಗೆ ಇತರ ಜಾನಪದ ಕಲಾ-ಸಾಹಿತ್ಯ ಪ್ರಕಾರಗಳ ಪರಿಚಯವಿತ್ತಾದರೂ ತಮ್ಮ ಕಾರ್ಯಕ್ಷೇತ್ರ ಹಾಗೂ ಅಧ್ಯಯನಕ್ಕೆ ಜಾನಪದ ಸಾಹಿತ್ಯದಲ್ಲಿಯೇ ವಿಶಾಲವಾದ ಹಾಡಿನ ಪ್ರಕಾರವನ್ನು ಆಯ್ದುಕೊಂಡರೆನ್ನಬಹುದು. ಈಗ ಅವರ ಪ್ರಕಟಿತ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಅವರ "ಜಾನಪದ ಸಂಗ್ರಹ ಮತ್ತು

ಸಂಶೋಧನಾ ವಿಧಾನಗಳು''ಎಂಬ ವಿಷಯ ಕುರಿತು ವಿಚಾರಿಸೋಣ.

**ಜಾನಪದ ಸಂಗ್ರಹ ವಿಧಾನಗಳು**

ಒಂದು ಕಾಲಕ್ಕೆ 'ಜಾನಪದ ಹಾಡುಗಳನ್ನೇ ಜಾನಪದ ಸಾಹಿತ್ಯ'ವೆಂದು ತಿಳಿಯಲಾಗಿತ್ತು. ಕಾಲಕ್ರಮೇಣ ಜಾನಪದ ಕಲಾ-ಸಾಹಿತ್ಯ ವೈವಿಧ್ಯತೆಯ ಪರಿಚಯವಾದಂತೆ ಜಾನಪದ ಕ್ಷೇತ್ರ ವ್ಯಾಪ್ತಿ ಹಿರಿದಾಯಿತು. ಆದರೆ ಆರಂಭದ ಜಾನಪದ ಸಂಕಲನ-ಸಂಪಾದನಾ-ಅಧ್ಯಯನಕಾರರು ಬರೀ ಹಾಡುಗಳನ್ನೇ ಆಧಾರವಾಗಿಟ್ಟುಕೊಂಡು ತಮ್ಮದೇ ಆದ ರೀತಿಯಲ್ಲಿ ಸಂಕಲನ-ಸಂಪಾದನಾ-ಅಧ್ಯಯನ ಕಾರ್ಯದಲ್ಲಿ ತೊಡಗಿದರು. ಬರೀ ಹಾಡುಗಳನ್ನಿಟ್ಟುಕೊಂಡು ನೋಡಿದರೂ "ಆಶಯ, ಆಕಾರ, ಅಭಿವ್ಯಕ್ತಿ ದೃಷ್ಟಿಯಿಂದ ಜಾನಪದ ಪದ್ಯ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಇಂದಿಗೂ ಕೈಗೂಡದ ಕಾರ್ಯವಾಗಿ ಉಳಿದಿದೆ"[೧]

ಈ ಪದ್ಯ ಸಾಹಿತ್ಯವನ್ನು ಕುರಿತು ಡಾ. ಗದ್ದಿಗಿಮಠರು ತಮ್ಮದೇ ಆದ ರೀತಿ-ಅನುಕೂಲ-ವ್ಯವಸ್ಥೆಯಲ್ಲಿ ಪ್ರಪ್ರಥಮವಾಗಿ ವಿಶ್ಲೇಷಣೆ-ವಿಮರ್ಶೆ-ಸಂಶೋಧನೆಗೈದಿದ್ದಾರೆ. ಅವರು ಸಾಗಿ ಬಂದ ಹಾದಿಯಲ್ಲಿಯೇ ನಾವೊಮ್ಮೆ ಸಾಗಿ ಬರೋಣ.

**ಕಾರ್ಯಕ್ಷೇತ್ರವ್ಯಾಪ್ತಿ**

ಕನ್ನಡ ಜಾನಪದ ಸಾಹಿತ್ಯ ಹೇರಳವಾಗಿದ್ದು ಹಲವಾರು ಪ್ರಾದೇಶಿಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಆಯಾ ಪ್ರದೇಶದ ಸಾಮಾಜಿಕ - ಸಾಂಸ್ಕೃತಿಕ-ಧಾರ್ಮಿಕ-ಭೌಗೋಲಿಕ-ಜನಾಂಗಿಕ ಪರಿಸರದಲ್ಲಿ ಜನಪದ ಸಾಹಿತ್ಯ ಸೃಷ್ಟಿಗೊಂಡಿದೆ. "ಒಂದು ನಾಡಿನ ಜನಪದ ಸಾಹಿತ್ಯದ ಪ್ರಾಂತನಿಷ್ಠ ಅಭ್ಯಾಸಿಗೆ ಅತ್ಯವಶ್ಯಕವಾದುದು ವ್ಯವಸ್ಥಿತವಾಗಿ ಸಂಗ್ರಹಿಸಲ್ಪಟ್ಟ ಆಯಾ ಪ್ರದೇಶಗಳ ಸಮಗ್ರ ಜನಪದ ಸಾಹಿತ್ಯ"[೨] ಇದರಿಂದ ವಿವಿಧ ರೀತಿಯಲ್ಲಿ ಮುಂದಿನ ಅಧ್ಯಯನಕ್ಕೆ ಹೆಚ್ಚು ಅನುಕೂಲ. ಈ ಹಿನ್ನೆಲೆಯಲ್ಲಿಯೇ ಡಾ. ಗದ್ದಿಗಿಮಠರು ಉತ್ತರ ಕರ್ನಾಟಕದ ಪ್ರದೇಶವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆಯ್ದುಕೊಂಡರೆನ್ನಬಹುದು. "ಉತ್ತರ ಕರ್ನಾಟಕವನ್ನು ಮಲೆನಾಡು ಹಾಗೂ ಬಯಲನಾಡು ಎಂದು ಭಾಗಮಾಡಿಕೊಂಡು ಸಂಕಲನವನ್ನು ಮೊದಲು ಮಾಡಿದೆ. ನನ್ನ ಮಲೆನಾಡು ಕಾರವಾರ ಗಡಿಯವರೆಗೆ ಹರಿದಿದೆ. ಹಲಕೆಲವು ಅನಾನುಕೂಲತೆಯ ಮೂಲಕ ನನ್ನ ಸಂಕಲನವು ಮಲೆನಾಡ ಬೆಟ್ಟದ ಕೆಳಗೆ ಇಳಿಯಲಿಲ್ಲ. ಬಯಲುನಾಡು ನಿಜಾಮರಾಜ್ಯದ ಕಲ್ಯಾಣ ಕಲಬುರ್ಗಿಯವರೆಗೂ ಸಾಗಿ ಹೋಗಿದೆ. ಈ ಎರಡೂ ಭಾಗಗಳಲ್ಲಿ ಜನಜೀವನವು ತರತರಂಗಗಳನ್ನು ಬೇರೆಬೇರೆಯಾಗಿ ಒಡೆದು ಕಾಣಲು ಮಲೆನಾಡನ್ನು ಬೆಟ್ಟದ ಕೆಳಗೆ, ಬೆಟ್ಟದ ಮೇಲೆ, ಹಾಗೂ ಗಡಿನಾಡು ಎಂದು ಬಯಲುನಾಡನ್ನು ದೋಣಿಸಾಲು,

---

೧ ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ - ಡಾ. ಎಂ. ಎಂ. ಕಲಬುರ್ಗಿ- ಪು -೧೫೧

೨ ಜಾನಪದ ಸಾಹಿತ್ಯದರ್ಶನ - ಸಂಪುಟ- ಒಂದು ಕ. ವಿ. ವಿ. ಪ್ರಕಟಣೆ ಪು-೬೧

ಹೊಳೆಸಾಲು ಬೆಳುವಲದ ಮಸಾರೆಯ ಸಾಲು ಹಾಗೂ ಎರೆಸಾಲು ಎಂದೂ ಭಾಗಮಾಡಿಕೊಂಡು ನನ್ನನೆದರಿಗೆ ಬಿದ್ದ. ಎಲ್ಲ ಹಾಡುಗಳನ್ನು ಸಂಕಲಿಸುತ್ತಾ ಬಂದೆ''3 ಎಂದು ಡಾ. ಗದ್ದಿಗಿಮಠರು ಉತ್ತರಕರ್ನಾಟಕದ ಜಿಲ್ಲೆಗಳನ್ನು ತಮ್ಮ ಕಾರ್ಯಕ್ಷೇತ್ರಕ್ಕೆ ಆಧಾರವಾಗಿಟ್ಟುಕೊಂಡಿದ್ದಾರೆ. ಈ ಪ್ರಾದೇಶಿಕದಲ್ಲಿ ಲಭ್ಯವಿರುವ ಹಾಡುಗಳನ್ನು ಸಂಗ್ರಹ ಮಾಡಿದ್ದಾರೆ. ಇದು ಒಂದು ವ್ಯವಸ್ಥಿತವಾದ ನಿಟ್ಟಿನಲ್ಲಿ ಸಾಗಿದಂತಾಗಿದೆ. ಈ ಕಾರ್ಯಕ್ಷೇತ್ರ ವ್ಯಾಪ್ತಿಯಡಿಯಲ್ಲಿ ಅವರು ಕಾರ್ಯಗೈದಿದ್ದು ಇದು ಅವರ ಸಂಗ್ರಹವಿಧಾನಗಳಲ್ಲಿ ಮೊದಲನೆಯದಾಗಿದೆ.

**ಸಾಹಿತ್ಯವ್ಯಾಪ್ತಿ**

ಜನಪದ ಸಾಹಿತ್ಯ ಬಿಡಿಹಾಡು, ಕಥನಕವನ, ಕಥೆ,ಗಾದೆ, ಒಡಪು, ಒಗಟು ಹೀಗೆ ಇನ್ನು ಹಲವಾರು ಪ್ರಕಾರಗಳಲ್ಲಿ ವಿಶಾಲವಾಗಿ ಹಬ್ಬಿದೆ. ಯಾರೊಬ್ಬರ ತೆಕ್ಕೆಗೆ ಅದು ಅಳವಡುವಂಥ ವಸ್ತು-ವಿಷಯವಲ್ಲ. ಇದನ್ನು ಗಮನಿಸಿರಬಹುದಾದ ಡಾ. ಗದ್ದಿಗಿಮಠರು ತಮ್ಮ ಸಂಗ್ರಹಣ ವ್ಯಾಪ್ತಿಯನ್ನು ಜನಪದ ಕಾವ್ಯಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿರುವ ಸಾಧ್ಯತೆಯಿದೆಯೆಂದು ಈ ಹಿಂದೆಯೇ ತಿಳಿಯಲಾಗಿದೆ. ಅದು ಅಧ್ಯಯನದ ಶಿಸ್ತು ಹೌದು.''[೩] ಗದ್ದಿಗಿಮಠರಲ್ಲಿ ಲಕ್ಷಕ್ಕೂ ಮಿಕ್ಕುವಷ್ಟು ಜಾನಪದ ಹಾಡುಗಳಿವೆಯೆಂದು ಕೇಳುತ್ತೇವೆ. ಈ ಹಾಡುಗಳಲ್ಲಿ ಹುದುಗಿರುವ ಕನ್ನಡ ಸಂಸ್ಕೃತಿಯ ಸಂಪತ್ತು, ಸಾಹಿತ್ಯ ಜೀವನಗಳನ್ನು ಕುರಿತು ಹಲವಾರು ದೃಷ್ಟಿಯಿಂದ ಸಂಶೋಧಿಸಿ ಒಂದು ನೆಲೆಗೆ ನಿಂತಿದ್ದಾರೆ. . . . . . . . . . ಅವರ ಈ ಜೀವನವೇ ಈ ಗೀತಗಳ ಸಂಗ್ರಹ, ಪ್ರಕಾಶನಕ್ಕಾಗಿ ಮುಡಿಪಾಗಿದೆಯೆಂದರೂ ಸಲ್ಲುವುದು'[೪] ಅವರು ಸಂಗ್ರಹಿಸಿದ ಹಾಡುಗಳಲ್ಲಿ ಬಹಳಷ್ಟು ದೊಡ್ಡಹಾಡುಗಳು ಮತ್ತು ಕಥನಕವನಗಳು ಪ್ರಮುಖವಾಗಿವೆ.

ತಮಗಿಂತಲೂ ಪೂರ್ವದಲ್ಲಿ ಜಾನಪದ ಸಾಹಿತ್ಯ ಸಂಗ್ರಹಣ ಮಾಡಿದ ಹಲಸಂಗಿ ಗೆಳೆಯರ ಸಂಕಲನಗಳಲ್ಲಿ ಬಿಡಿಹಾಡುಗಳೇ ಹೆಚ್ಚಾಗಿದ್ದು, ದೊಡ್ಡಹಾಡುಗಳ ಕೊರತೆಯಿದ್ದುದನ್ನು ಕಂಡುಕೊಂಡ ಡಾ. ಗದ್ದಿಗಿಮಠರು ಅಂಥ ಹಾಡುಗಳ ಸಂಗ್ರಹಣ-ಸಂಕಲನಕ್ಕೆ ಮುಂದಾದರು. ''ದೊಡ್ಡ ಹಾಡುಗಳನ್ನು ಸಂಕಲನ ಮಾಡುವುದು ಬಲು ಕಷ್ಟದಾಯಕವಾದ ಕೆಲಸ. ಇದಕ್ಕೆ ತಾಳ್ಮೆ ಬೇಕು.

ಹಾಡುಗಳನ್ನು ಹಾಡುವವರು ವಿಶೇಷವಾಗಿ ಅವುಗಳನ್ನು ಬಾಯಿಪಾಠ ಮಾಡಿರುವುದೇ ಹೆಚ್ಚು ಹಾಡುವಾಗ ಒಂದು ನುಡಿಯು ಮರೆತರೆ ಅವರಿಗೆ ಇಡೀ ಹಾಡು ನೆನಪಾಗದೇ ಅಷ್ಟಕ್ಕೆ ಹಾಡು ನಿಂತು ಬಿಡುವುದು'[೫]ಎಂದು ತಮ್ಮ ಸಂಗ್ರಹಣ ಕಾಲಕ್ಕುಂಟಾದ ತೊಂದರೆ ಬಲ್ಲ ಅವರು ಹಿಂಜರಿಯದೆ ಅಂಥ ಹಾಡುಗಳನ್ನು ಲೆಕ್ಕವಿಲ್ಲದಷ್ಟು ಸಂಗ್ರಹಿಸಿದರು. ಅಂದು ಅವರು ಸಂಗ್ರಹಿದೇ ಹೋಗಿದ್ದರೆ ಅದೆಷ್ಟೋ

---

೩ ಜನತಾ ಗೀತಗಳು- ಡಾ. ಬಿ. ಎಸ್. ಗದ್ದಿಗಿಮಠ ಪು-೧೩

೪ ಅದೇ ಪು-೮

೫ ಕನ್ನಡ ಜಾನಪದ ಗೀತಗಳು ಡಾ. ಬಿ ಎಸ್ ಗದ್ದಿಗಿಮಠ ಪು- ಅರಿಕೆ

ಹಾಡುಗಳನ್ನು ನಾವು ಕಳೆದುಕೊಳ್ಳಬೇಕಾಗಿತ್ತು. "ಜಾನಪದ ಕಾವ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗಮನಾರ್ಹವಾದ ರೀತಿಯಲ್ಲಿ ಸಂಗ್ರಹ ಕಾರ್ಯನಡೆದಿರಲಿಲ್ಲ. ೧೯೫೦ರ ಈಚೆಗೆ ಡಾ. ಬಿ ಎಸ್ ಗದ್ದಿಗಿಮಠ ಅವರಂಥ ಸಂಗ್ರಹಕರ, ವಿದ್ವಾಂಸರ ಸಾಹಸದ ಫಲವಾಗಿ ಪ್ರಥಮಬಾರಿಗೆ ವ್ಯಾಪಕವಾದ ಕಾವ್ಯಗಳ ಸಂಗ್ರಹ ನಡೆಯಿತು"[೬] ಎಂದು ಮುಕ್ತವಾಗಿ ಅವರ ಸಂಗ್ರಹಣ ಕಾರ್ಯ ಕಂಡು ಪ್ರಶಂಸಿಸಲಾಗಿದೆ. ಹೀಗೆ ಡಾ. ಗದ್ದಿಗಿಮಠರು ಕಠಿಣವೆನಿಸುವ ದೊಡ್ಡಹಾಡುಗಳನ್ನು ಸಂಗ್ರಹಣ ಮಾಡಿದ್ದು ಅವರು ಇತರ ಜನಪದ ಸಾಹಿತ್ಯದ ಪ್ರಕಾರಗಳಿಗೆ ಕೈಹಾಕದೇ ಏಕಪ್ರಕಾರವಾದ ಹಾಡುಗಳ ಸಂಗ್ರಹಣಕ್ಕೆ ಮುಂದಾದುದು ಶ್ಲಾಘನೀಯವಾಗಿದ್ದು. ಇದು ಅವರ ಸಂಗ್ರಹಣ ವಿಧಾನಗಳಲ್ಲಿ ಇನ್ನೊಂದಾಗಿದೆ.

**ನಿರೂಪಕರ ಸಂದರ್ಶನ**

ಹಾಡುಗಾರರು ಇದ್ದಲ್ಲಿಗೆ ಹೋಗಿ ಅಥವಾ ಅವರನ್ನು ಕರೆಯಿಸಿ ಅಥವಾ ಆ ಸಂದರ್ಭಗಳನ್ನು ಅರಿತು ಅವರು ನೀಡುವ ಪ್ರದರ್ಶನವನ್ನು ಗಮನಿಸಿ ಆ ಸಾಹಿತ್ಯವನ್ನು ದಾಖಲೆಗೊಳಿಸುವ ಪದ್ಧತಿ ಹಿಂದಿನದಾಗಿತ್ತು. ದೊಡ್ಡ ಹಾಡುಗಳನ್ನು ದಾಖಲಿಸುವಾಗ ಕೆಲಸಲ ದಾಖಲುದಾರನ ಬರವಣಿಗೆಯು ಕುಂಠಿತಗೊಂಡು ಸಂಗ್ರಹಣದಲ್ಲಿ ತೊಂದರೆಯುಂಟಾಗುವ ಸಾಧ್ಯತೆಯಿದೆ. ಅಂಥ ಸಂದರ್ಭಗಳಲ್ಲಿ ಕೈಬಿಟ್ಟುಹೋದ ಜಾಗದಲ್ಲಿ ಜಾಣ ಸಂಗ್ರಹಕಾರನೆ ತನ್ನದೇ ಆದ ಶಬ್ದಗಳನ್ನು ತುಂಬಿ ಅದನ್ನು ಪೂರ್ಣಗೊಳಿಸುವ ಸಾಧ್ಯತೆಯಿದೆ. ಅಂಥ ಕಾಲದಲ್ಲಿ ಡಾ. ಗದ್ದಿಗಿಮಠರು ಜನಪದ ಕಾವ್ಯ ಸಂಗ್ರಹಣ ಮಾಡಿದರು. ಇಂದಿನ ಹಾಗೆ ಅವರಿಗೆ ಸಾಹಿತ್ಯ ಸಂಗ್ರಹಣಕ್ಕೆ ಆಧುನಿಕ ಸಾಮಗ್ರಿಗಳ ಲಭ್ಯತೆ ಕಡಿಮೆಯಿತ್ತು. ಸೂಕ್ಷ್ಮವಾಗಿ ಅವಲೋಕಿಸಿದರೆ ಅವರ ಸಂಗ್ರಹಣದಲ್ಲಿ ಸಂದರ್ಭಾನುಸಾರ ಮತ್ತು ಅನಿವಾರ್ಯವಾಗಿ ಸ್ವಂತ ರಚನೆ ಮಾಡಿ ಸೇರಿಸಿರುವ ಸಾಧ್ಯತೆಗಳನ್ನು ಕಾಣಬಹುದಾಗಿದೆ.

ಡಾ. ಗದ್ದಿಗಿಮಠರು ಸಂಗ್ರಹಿಸಿದ ಹಾಡುಗಳಿಗೆ ನಿರೂಪಕರ ಪರಿಚಯವಿರುವುದು ಬಹಳ ಕಡಿಮೆ. ಕೆಲವೆಡೆಗೆ ನಿರೂಪಕರ ಹೆಸರಿನಲ್ಲಿ ಹೇಳುತ್ತಾರೆ. ಆದರೆ ಅವರು ಸಂಗ್ರಹಿಸಿದ ಸಮಗ್ರ ಹಾಡುಗಳಿಗೆ ಈ ಪದ್ಧತಿಯನ್ನು ಅನುಸರಿಸಿಲ್ಲ. ಅವರ ಕಾಲಕ್ಕೆ ಅಂಥ ವೈಜ್ಞಾನಿಕ ಪದ್ಧತಿಯ ಬಳಕೆಯಲ್ಲಿರಲಿಲ್ಲ. ಯಾಕೆಂದರೆ ಜನಪದ ಸಾಹಿತ್ಯ ಸಂಗ್ರಹದ ಕಾಲಕ್ಕೆ "ನಿರೂಪಕರ ಹೆಸರು, ವಯಸ್ಸು, ಉದ್ಯೋಗ, ಅವರ ಶಿಕ್ಷಣ, ಜಾತಿ, ಯಾರಿಂದ ಕಲಿತರು, ಕಲಿತಕಾಲ, ಹೇಳಿದ ಕಾಲ, ಇತ್ಯಾದಿ ವಿವರಗಳನ್ನು ಸಂಕಲನಗಳಲ್ಲಿ ಕೊಡುವುದು ಬಹಳ ಅಗತ್ಯದ್ದಾಗಿದೆ. ನಿಜವಾಗಿ ಜಾನಪದವೋ, ಅಲ್ಲವೋ ಎಂದು ಪ್ರತ್ಯಕ್ಷ ಪ್ರಮಾಣೀಕರಿಸಿ ನೋಡುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಸಂಗ್ರಾಹಕರ ಪ್ರಾಮಾಣಿಕತೆಯನ್ನು ಒರೆಗೆ ಹಚ್ಚಲೂ ಇದು ಅಗತ್ಯ. ಇಲ್ಲದಿದ್ದರೆ ವೈಜ್ಞಾನಿಕ ಪರೀಕ್ಷಣಕ್ಕೆ ಗಟ್ಟಿಯಾದ ತಳವೇ ಇರುವುದಿಲ್ಲ. ಸ್ವಂತವಾಗಿ ಹಳ್ಳಿಗರ ಶೈಲಿಯಲ್ಲಿ ಬರೆದ ಹಾಡನ್ನೂ ಜಾನಪದವೆಂದು

---

೬ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು ಡಾ. ಜೀ. ಶಂ. ಪರಮಶಿವಯ್ಯ -ಪು- ೪೪೫

ತುರುಕುವುದಕ್ಕೆ ಇದರಿಂದ ಸಂಗ್ರಾಹಕರಿಗೆ ಅವಕಾಶವಿರುವುದಿಲ್ಲ."[೭] ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಡಾ. ಗದ್ದಿಗಿಮಠರ ಸಂಗ್ರಹಣದ ಅವಲೋಕನಗೈದರೆ ಅಲ್ಲಿ ಬಹುದೊಡ್ಡ ಕೊರತೆಯಿದೆಯೆಂದು ಹೇಳಬಹುದು. ಆದರೆ ಅದು ಅವರ ದೋಷವಲ್ಲ. ಯಾಕೆಂದರೆ ಆಗಿನ ಕಾಲದಲ್ಲಿ ಈಗಿನಂತೆ ವೈಜ್ಞಾನಿಕ ವಿಧಾನವನ್ನು ಅನುಸರಿಸಿ ಜಾನಪದ ಸಾಹಿತ್ಯ ಸಂಗ್ರಹ ಕಾರ್ಯವನ್ನು ಮಾಡುತ್ತಿರಲಿಲ್ಲ. ನಿರೂಪಕನ ಪರಿಚಯ ಮಾಡಿಕೊಡುವುದು ಆಗಿನ ಸಂಗ್ರಾಹಕರಿಗೆ ಕಷ್ಟದ ಕೆಲಸವೇನೂ ಆಗಿರಲಿಲ್ಲ. ಆದರೆ ಆ ಬಗೆಗೆ ಅಷ್ಟು ತಿಳುವಳಿಕೆ ಇರಲಿಲ್ಲವೆಂದು ಹೇಳಬಹುದು.

ಇಷ್ಟಾದರೂ ಡಾ. ಗದ್ದಿಗಿಮಠರು ತಾವು ಸಂಗ್ರಹಿಸಿದ ಹಾಡುಗಳ ನಿರೂಪಕರ ಹೆಸರು, ಊರು

ಇವುಗಳ ಪರಿಚಯವನ್ನು ಅಲ್ಲಲ್ಲಿ ಮಾಡಿಕೊಡುತ್ತಾರೆ. ಇದು ಅವರ ಸಂಗ್ರಹಣದ ಇನ್ನೊಂದು ವಿಧಾನವಾಗಿದೆ.

**ಸಂಕಲನ ವಿಧಾನ:**

ಶಿಷ್ಟ ಸಾಹಿತ್ಯದ ಸಂಪಾದನೆಯ ಸಂದರ್ಭದಲ್ಲಿ ಈ ಸಂಕಲನದ ಜಾಣ್ಮೆ ಅಷ್ಟಾಗಿ ಬೇಕಾಗುವುದಿಲ್ಲ. ಆದರೆ ಜಾನಪದ ಸಾಹಿತ್ಯದ ಸಂಕಲನದ ಸಂದರ್ಭದಲ್ಲಿ ಸಂಕಲನಕಾರನ ಜಾಣ್ಮೆಯೇ ಅತ್ಯಂತ ಮಹತ್ವದ್ದಾಗಿ ತೋರುತ್ತದೆ. ಯಾಕೆಂದರೆ ಇಲ್ಲಿ ನಿರೂಪಕ ತೋಂಡಿ ಸಂಪ್ರದಾಯಕ್ಕೆ ಸೇರಿದವನಾಗಿರುವುದರಿಂದ ಅತ್ಯಂತ ಪ್ರಾಮಾಣಿಕವಾದ ರೀತಿಯಲ್ಲಿ ಅದನ್ನು ಸಂಗ್ರಹಿಸಿ ಸಂಕಲನ ಮಾಡಬೇಕಾದುದು ಅಗತ್ಯವಾಗಿರುತ್ತದೆ. " ಸಂಗ್ರಹಿತವಾದ ಜನಪದ ಕಾವ್ಯಗಳ ವರ್ಗೀಕರಣ ಅತ್ಯಂತ ಪ್ರಮುಖವಾದ ಕಾರ್ಯ. ವ್ಯಾಪಕ ಸಂಗ್ರಹಕಾರ್ಯ ನಡೆದಾಗ ಮಾತ್ರ ಕ್ರಮಬದ್ಧವಾದ ವರ್ಗೀಕರಣ ಸಾಧ್ಯವಾಗುತ್ತದೆ. ಸರಿಯಾದ ವರ್ಗೀಕರಣವಿಲ್ಲವಾದರೆ ಅಧ್ಯಯನ ಅಸಮಗ್ರ, ಅಪೂರ್ಣ"[೮] ಲಕ್ಷಗಟ್ಟಲೇ ಪದ್ಯಗಳನ್ನು ಸಂಗ್ರಹಿಸಿದ್ದರೆಂದು ಹೇಳಲಾಗುವ ಡಾ. ಗದ್ದಿಗಿಮಠರು ಆ ಹಾಡುಗಳನ್ನು ಹೇಗೆ ವರ್ಗೀಕರಣ ಮಾಡಿಕೊಂಡರು? ಅವುಗಳನ್ನು ಹೇಗೆ ಸಂಕಲನಗೊಳಿಸಿದರು? ಎಂಬುದನ್ನು ಅವರ ಪ್ರಕಟಿತ ಸಂಗ್ರಹಣ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ನೋಡೋಣ.

'ನಾಲ್ಕು ನಾಡಪದಗಳು (೧೯೫೩) ಎಂಬುದರಲ್ಲಿ ಬಿಜ್ಜಮಹಾದೇವಿ. ಬೇಡ ಕನ್ನಯ್ಯ , ಕೋಳೂರು ಕೊಡಗೂಸು ಮತ್ತು ಗೊಲ್ಲಾಳರನ್ನು ಕುರಿತ ತ್ರಿಪದಿರೂಪದ ಕಥನಕಾವ್ಯಗಳಿದ್ದು ಅವರೆಲ್ಲಾ ಶಿವಭಕ್ತರಾಗಿದ್ದು. ಅವರ ಜೀವನಾನುಭವ ಆಯಾ ಹಾಡುಗಳಲ್ಲಿ ವ್ಯಕ್ತವಾಗಿದೆ. ಇವು ಒಂದು ರೀತಿಯಲ್ಲಿ ಖಂಡಕಾವ್ಯಗಳಂತಿದ್ದು ಆ ನಾಲ್ಕು ಹಾಡುಗಳನ್ನು ಸರಿಯಾಗಿಯೇ ಸಂಕಲನಗೈದಿದ್ದಾರೆ.

'ಕಂಬಿಯ ಹಾಡುಗಳು' (೧೯೫೫) ಗಳಲ್ಲಿ ಶ್ರೀಶೈಲ ಮಲ್ಲಯ್ಯನನ್ನು ಕುರಿತ ಕಂಬಿಯ

---

೭ ಜನಪದ ಸಾಹಿತ್ಯ - ಡಾ. ಎಲ್ ಆರ್ ಹೆಗಡೆ- ಪು-೧೪

೮ ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು ಡಾ. ಜೀ. ಶಂ. ಪರಮಶಿವಯ್ಯ ಪು-೧

ಹಾಡುಗಳಿದ್ದು ಈ ಸಂಪ್ರದಾಯ ಶ್ರೀ ಶೈಲ ಮಲ್ಲಯ್ಯನ ಭಕ್ತರಲ್ಲಿದೆ. ಆ ಸಂಪ್ರದಾಯಕ್ಕೆ ಸಂಬಂಧಿಸಿದ ಬಿರುದಾವಳಿ, ಮಂಗಳಾರತಿ ಹಾಡುಗಳಿವೆ. ಇದು ಸಂಪ್ರದಾಯವನ್ನು ಅನುಸರಿಸಿ ಸಂಕಲನಗೊಂಡಿದೆ.

'ಜನತಾ ಗೀತಗಳು' (೧೮೫೭) ಎಂಬ ಕೃತಿಯಲ್ಲಿ ದೊಡ್ಡ ಹಾಡುಗಳಿವೆ. ಅವುಗಳನ್ನು ವ್ಯವಸ್ಥಿತವಾಗಿ ವರ್ಗೀಕರಿಸಿದ್ದಾರೆ. ಸಂಪ್ರದಾಯದ ಹಾಡುಗಳು, ಹಂತಿಹಾಡುಗಳು, ಹಂತಿಯ ಹಾಡುಗಳಲ್ಲಿಯೇ ಐತಿಹಾಸಿಕ ಘಟನಾವಳಿಗಳು, ಹೋಳಿ ಹಾಡುಗಳು, ದುಂದುಮೆ ಪದಗಳು, ಬೀಸುವ ಹಾಡುಗಳು ಮತ್ತು ಇತರ ಹಾಡುಗಳೆಂಬ ಪ್ರಕರಣಗಳನ್ನು ಮಾಡಿ ಪದ್ಯಗಳನ್ನು ವರ್ಗೀಕರಿಸಿ ಸಂಕಲನಗೈದಿದ್ದಾರೆ

'ಮಲ್ಲಮಲ್ಲಾಣಿ' (೧೯೫೭) ಇದು 'ಮಹಾಶೃಂಗಾರದ ಹಾಡುಗಬ್ಬ' ವಾಗಿದ್ದು ದೀರ್ಘ ಕಥಾನಕವನ್ನೊಳಗೊಂಡಿದ್ದು ಖಂಡಕಾವ್ಯದ ಹಿನ್ನೆಲೆಯಲ್ಲಿ ಇದನ್ನು ಸಂಕಲಿಸಿದ್ದಾರೆ.

'ಕುಮಾರ ರಾಮನ ದುಂದುಮೆ' (೧೯೫೭) ಕುಮಾರರಾಮನ ಚರಿತ್ರೆಗೆ ಸಂಬಂಧಿಸಿದ ಹಾಡುಗಳು ಇದರಲ್ಲಿದ್ದು ಚಾರಿತ್ರಿಕ ಘಟನಾವಳಿಯನ್ನು ಅನುಸರಿಸಿ ಇದನ್ನು ಸಂಕಲಿಸಿದ್ದಾರೆ.

' ಲೋಕಗೀತಗಳು' (೧೯೬೦) ಎಂಬುದರಲ್ಲಿ ಸೋಬಾನ ಹಾಡುಗಳು ಮತ್ತು ಕೋಲುಪದಗಳು ಎಂದು ಎರಡು ಭಾಗಗಳನ್ನು ಮಾಡಿಕೊಂಡು ಅವುಗಳನ್ನು ಹಾಡುವ ಸಂದರ್ಭ-ಸಂಪ್ರದಾಯಗಳನುಸಾರವಾಗಿ ಹಾಡುಗಳನ್ನು ವರ್ಗೀಕರಿಸಿ ಸಂಕಲನಗೈದಿದ್ದಾರೆ.

'ಕನ್ನಡ ಜಾನಪದ ಗೀತಗಳು' (೧೯೬೩) ಎಂಬ ಅವರ ಮಹಾ ಪ್ರಬಂಧದಲ್ಲಿ ತಮ್ಮ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಿಡಿಹಾಡುಗಳನ್ನು ಆಯ್ಕೆ ಮಾಡಿ ಬಳಸಿಕೊಂಡಿದ್ದಾರೆ. ಪ್ರಬಂಧದ ಅನುಬಂಧದಲ್ಲಿ ಹಂತಿಯ ಹಾಡುಗಳ ಹೆಸರಿನಲಿ ಹನ್ನೊಂದು ಶಿವಶರಣರ ಕಥನಕಾವ್ಯಗಳನ್ನು ಸಂಪಾದಿಸಿದ್ದಾರೆ. ಇವೆಲ್ಲಾ ಸಾವಳಿಗೆಯ್ಯ ಎಂಬ ಏಕಕವಿಕೃತ ಕಾವ್ಯಗಳಾಗಿವೆ. ಅವೆಲ್ಲವೂ ತ್ರಿಪದಿ ರೂಪದಲ್ಲಿವೆ. ಅದೇ ಅನುಬಂಧದಲ್ಲಿ ಕೊನೆಯದಾಗಿರುವ 'ಅರ್ಜುನ ಜೋಗಿಯ ಹಾಡುಗಬ್ಬ' ವಿದ್ದು ಅದನ್ನು ಕೆರೂರಿನ 'ಗದ್ದಗಿಮಠದ ಹಾಡು ಮ್ಯಾಳ' ದ ನಾಲ್ವರು ಮಹಿಳೆಯರು ಹಾಡಿದ್ದು ಅದನ್ನು ಸಂದರ್ಭಾನುಸಾರ ಸಂಪಾದಿಸಿದ್ದಾರೆ.

ಹೀಗೆ ಅವರ ಸಂಕಲನ-ಸಂಪಾದನ ಕ್ರಮ ಸಾಗಿಬಂದಿದೆ. ಡಾ. ಗದ್ದಿಗಿಮಠರು ಮಾಡಿರುವ ಹಾಡುಗಳ ವರ್ಗೀಕರಣ ಮತ್ತು ಅವುಗಳ ಸಂಕಲನ ವಿಧಾನ ಬಹಳ ಸರಳವಾಗಿದೆ. ವಿಷಯಾನುಸಾರ, ಕಥಾನುಸಾರ, ಸಂದರ್ಭಾನುಸಾರ, ಸಂಪ್ರದಾಯನುಸಾರ ಪದ್ಧತಿಯಲ್ಲಿ ಅವರು ತಮ್ಮ ಸಂಗ್ರಹದ ಹಾಡುಗಳನ್ನು ಸಂಕಲಿಸಿದ್ದಾರೆ.

ಪ್ರಸ್ತಾವನೆ

ಡಾ. ಗದ್ದಿಗಿಮಠರು ತಮ್ಮ " ಸಂಕಲನಗಳಿಗೆಲ್ಲಾ ಬರೆದಿರುವ ಮೊದಲ ಮಾತು ಇಲ್ಲವೆ ಮುನ್ನುಡಿ ಇತ್ಯಾದಿಗಳು ಬೆಲೆಯುಳ್ಳ ವಿಮರ್ಶಾ ಲೇಖನಗಳಾಗಿವೆ"[೯] ತಾವು ಪ್ರಕಟಿಸಿದ ಎಲ್ಲಾ ಕೃತಿಗಳಿಗೂ ಆ ಸಂಕಲನವನ್ನು ಪರಿಚಯಿಸುವಂತೆ ದೀರ್ಘವಾದ ಮೊದಲ ಮಾತು, ಮುನ್ನುಡಿ, ಅರಿಕೆಗಳನ್ನು ಬರೆದಿದ್ದು ಅವುಗಳು ಪ್ರಸ್ತಾವನೆಯ ರೂಪದಲ್ಲಿವೆ. ಅಷ್ಟೇ ಮೌಲಿಕವಾಗಿವೆ. ತಮ್ಮ ಸಂಗ್ರಹಣ ಕಾರ್ಯ, ಹಾಡುಗಳ ಪ್ರಕಾರ, ಅವುಗಳ ವರ್ಗೀಕರಣ, ಹಾಡುಗಳನ್ನು ಹಾಡುವ ಸಂದರ್ಭ, ಸಂಪ್ರದಾಯ, ಜನಾಂಗ, ಆ ಹಾಡುಗಳ ಐತಿಹ್ಯ- ಐತಿಹಾಸಿಕಗಳ ವಿವೇಚನೆಗಳೊಂದಿಗೆ ಜನಪದ ಸಾಹಿತ್ಯದ ಬಗೆಗಿನ ಕಳಕಳಿ, ತಮ್ಮದೇ ಆದ ಯೋಚನೆ ಯೋಜನೆಗಳನ್ನು ಅಲ್ಲಿ ನಿರೂಪಿಸಿದ್ದಾರೆ.

ಇದು ಎಲ್ಲ ಸಂಕಲನಗಳಿಗೂ ಅಗತ್ಯವಾಗಿದ್ದು ಅದನ್ನು ಪೂರೈಸಿದ್ದಾರೆ.

'ಜನತಾ ಗೀತಗಳು" ಎಂಬ ಕೃತಯಲ್ಲಂತೂ ತಾವು ವರ್ಗೀಕರಿಸಿದ ಹಾಡುಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ 'ಹೊರಮುಚುಕ' ಎಂಬ ಶೀರ್ಷಿಕೆಯಡಿಯಲ್ಲಿ ಆ ಹಾಡುಗಳ ಸಾರವನ್ನು ಕೊಡುತ್ತಾರೆ. ' ಹೊರಮುಚುಕವೆಂದರೆ ಹಳ್ಳಿಗರ ನುಡಿಯಲ್ಲಿ ಅಂತರ್ದರ್ಶನ, ಕೇವಲ ಸ್ಪರ್ಶದಿಂದ ಒಳಮೈ ತೋರಿಸುವ ಒಂದು ಗಿಡಮೂಲಿಕೆ'[೧೦] ಜನಪದ ಹಾಡುಗಳ ಅಂತರ್ದರ್ಶನಕ್ಕೆ 'ಹೊರಮುಚುಕ'ವೆಂಬ ಜಾನಪದೀಯ ಶಬ್ದವನ್ನು, ಔಚಿತ್ಯಪೂರ್ಣವಾಗಿ ಬಳಸಿದ್ದಾರೆ. ಉದಾಹರಣೆಯಾಗಿ ಸಂಪ್ರದಾಯದ ಹಾಡುಗಳಿಗೆ ಬರೆದ ಹೊರಮುಚುಕದ ಬರಹವನ್ನು ನೋಡೋಣ.

"ಸಂಪ್ರದಾಯವು ಜನಾಂಗಕ್ಕೆ ನಾಗರೀಕತೆಯ ಹಕ್ಕು. ಇದರಲ್ಲಿ ಜನಾಂಗದ ಸಂಸ್ಕೃತಿಯು ತುಂಬ ಬಿಂಬಿತವಾಗಿದೆ. ಕನ್ನಡಿಗರು ಸಂಪ್ರದಾಯ ಪ್ರೇಮಿಗಳು. ಅವರ ಹಬ್ಬ ಹುಣ್ಣಿಮೆಗಳು, ಸುಗ್ಗಿ ಸುಖಕಾಲಗಳು ಸಂಪ್ರದಾಯದ ಮೇಲೆ ನಿಂತಿವೆ. ಈ ಸಂಪ್ರದಾಯಗಳನ್ನು ಸಮಯಕ್ಕೆ ಸರಿಯಾಗಿ ಅವರು ಹಾಡುತ್ತ ಬಂದಿದ್ದಾರೆ. ಬನ್ನಿ ಹಬ್ಬವು, ಎಲ್ಲರೂ ಜೀವವೊಂದಾಗಿ ಇರಲು ; ಕುಂದಣದಾರುತಿ ಬೆಳಗಲು ನಾಗರ ಹಬ್ಬವು ಕನ್ನಡಿಗರಿಗೆ ದ್ರಾವಿಡ ಜನಾಂಗದಿಂದ ಬಂದ ವೈಶಿಷ್ಟ್ಯ. ತವರುಮನೆಗೆ ಬಂದ ಹೆಣ್ಣಿನ, ಗಂಡನ ಮನೆಯ ಆಸೆ, ನಿರಾಸೆ, ಸುಖದು:ಖಗಳ ರಾಗ. ನಾಗರಪಂಚಮಿಗೆ ತವರಿಗೆ ಬಂದು ಹೆಣ್ಣು ಗುರ್ಚಿ ಜೋಕುಮಾರರ ಕಂಡು, ಗೌರಿಸೀಗೆಯನಾಡಿ ಅರಳಲೆ ಬಸವನ ತಂದು, ಹಾಡಿ, ಆಡಿ, ತವರು ಮನೆಯ ಹಬ್ಬದೂಟ ಮಾಡಿ ಹೊಸಬಳಾಗಿ ಮತ್ತೆ ಪ್ರಪಂಚಕ್ಕೆ ಕೈಗೂಡಲು ಗಂಡನ ಮನೆಯ ಸೇರುವುದು"[೧೧] ಹೀಗೆ ಡಾ. ಗದ್ದಿಗಿಮಠರು ತಮ್ಮದೇ ಆದ ರೀತಿಯಲ್ಲಿ ಆಯಾ ಸಾಂದರ್ಭಿಕ ಹಾಡುಗಳ ಸಂಗ್ರಹಗಳಿಗೆ ಪ್ರಸ್ತಾವನೆ ನೀಡಿದ್ದು ಇದು ಅವರ ಸಂಗ್ರಹಣದ ಒಂದು ವಿಶಿಷ್ಟ ವಿಧಾನವೆಂದು ಕರೆಯಬಹುದು.

---

೯ ಜಾನಪದ ಸಾಹಿತ್ಯ ದರ್ಶನ ಸಂ. ಒಂದು. ಕ. ವಿ. ವಿ. ಪ್ರಕಟಣೆ ಪು -೧೯೭

೧೦ ಜನತಾ ಗೀತಗಳು ಡಾ. ಬಿ ಎಸ್ ಗದ್ದಗಿಮಠ ಪು - ೧ (ಅಡಿಟಿಪ್ಪಣಿಯಲ್ಲಿ)

೧೧ ಜನತಾಗೀತಗಳು - ಡಾ. ಬಿ ಎಸ್ ಗದ್ದಗಿಮಠ. ಪು -೧

**ಅರ್ಥಕೋಶ**

ಸಂಪಾದನಾ ಕೃತಿ ಶಿಷ್ಟವಿರಲಿ, ಜಾನಪದವಿರಲಿ ಅದಕ್ಕೊಂದು ಅರ್ಥಕೋಶವಿರದಿದ್ದರೆ ಆ ಕೃತಿಗೆ ಅರ್ಥವೇ ಬರಲಿಕ್ಕಿಲ್ಲ. ಕಾಲಕಾಲಕ್ಕೆ ಶಬ್ಧಗಳ ಅರ್ಥ ಬದಲಾಗುತ್ತಿದೆ. ಪ್ರಾದೇಶಿಕ ಅರ್ಥವ್ಯತ್ಯಾಸವಿರುತ್ತದೆ. ಈ ಒಂದು ಪ್ರದೇಶದ ತೀರ ಸಾಮಾನ್ಯ ಬಳಕೆಯ ಶಬ್ದ ಇನ್ನೊಂದು ಪ್ರದೇಶದವರಿಗೆ ಅರ್ಥವಾಗದಿರಬಹುದು. ಅಪಾರ್ಥವುಂಟಾಗಬಹುದು. ಈ ಕಾರಣಗಳಿಂದಾಗಿ ಆ ಕೃತಿಯ ಅಭ್ಯಾಸಿಗೆ ಅರ್ಥಕೋಶದ ಅವಶ್ಯಕತೆ ಅತ್ಯಗತ್ಯ. ಜನಪದ ಸಾಹಿತ್ಯ ಸಂಕಲನಗಳಿಗಂತೂ ಇದು ತೀರಾ ಅಗತ್ಯ. ಈ ದೃಷ್ಟಿಯಿಂದ ನೋಡಲಾಗಿ ಡಾ. ಗದ್ದಿಗಿಮಠರು ತಾವು ಸಂಕಲನಗೈದು ಪ್ರಕಟಿಸಿದ ಕೃತಿಗಳಿಗೆ ಕೊನೆಯಲ್ಲಿ ಅರ್ಥಕೋಶ, ಶಬ್ಧಕೋಶಗಳನ್ನು ನೀಡಿದ್ದಾರೆ. ಇದರಿಂದಾಗಿ ಆ ಕೃತಿಗಳ ಅಧ್ಯಯನ ಸುಲಭವಾಗುವುದು. ಶಿವಶರಣರ ಹಂತಿಯ ಹಾಡುಗಳಲ್ಲಿ ಉಪಯೋಗಿಸಿದ 'ಶಿವ' ಶಬ್ಧಕ್ಕೆ ಪೂರಕವಾದ ಶಬ್ಧಗಳನ್ನು ತಮ್ಮ ಮಹಾಪ್ರಬಂಧದಲ್ಲಿ ಸಂಗ್ರಹಿಸಿ ಅವುಗಳಿಗೆ ಅರ್ಥನೀಡಿ ಅದನ್ನು 'ಶಿವಶಬ್ಧಕೋಶ'ವೆಂದು ಕರೆದಿದ್ದಾರೆ. ಹಾಗೆಯೇ ಅದೇ ಪ್ರಬಂಧದಲ್ಲಿ ಹಂತಿಹಾಡುಗಳನ್ನು ಹಾಡಿದ ಕವಿ ಒಕ್ಕಲಿಗ ವೃತ್ತಿಯವನಾದುದರಿಂದ ಒಕ್ಕಲುತನಕ್ಕೆ ಸಂಬಂಧಿಸಿದಂತೆ ಕೆಲ ಶಬ್ಧಗಳನ್ನು ಅರ್ಥ ನೀಡಿ ಒಂದು ಅರ್ಥಕೋಶದ ರಚನೆಗೆ ಮಾದರಿ ನೀಡಿದ್ದಾರೆ. ಜಾನಪದ ಶಬ್ದಗಳನ್ನೆಲ್ಲಾ ಸಂಗ್ರಹಿಸಿ 'ಜಾನಪದ ಮಹಾಶಬ್ಧಕೋಶ' ರಚಿಸಬೇಕೆಂಬ ತಮ್ಮ ಬಯಕೆಯನ್ನು ವ್ಯಕ್ತಮಾಡಿ ಮುಂದಿನವರಿಗೆ ಆ ಕಾರ್ಯವನ್ನು ವಹಿಸಿದ್ದಾರೆ. ಅವರ ಸಂಗ್ರಹ ವಿಧಾನಗಳಲ್ಲಿ ಅರ್ಥಕೋಶ ಬಳಸಿದುದು ವೈಜ್ಞಾನಿಕ ದೃಷ್ಟಿಯುಳ್ಳದ್ದಾಗಿದೆ.

ಹೀಗೆ ಕಾರ್ಯಕ್ಷೇತ್ರ ವ್ಯಾಪ್ತಿ, ಸಾಹಿತ್ಯವ್ಯಾಪ್ತಿ, ನಿರೂಪಕರ ಸಂದರ್ಶನ, ಸಂಕಲನ ವಿಧಾನ, ಪ್ರಸ್ತಾವನೆ, ಅರ್ಥಕೋಶ ರಚನೆ ಅವರ ಸಂಗ್ರಹ ವಿಧಾನಗಳಾಗಿವೆ.

**ಸಂಶೋಧನಾ ವಿಧಾನ**

ಡಾ. ಗದ್ದಿಗಿಮಠರು ಜನಪದ ಸಾಹಿತ್ಯ ಸಂಕಲನದೊಂದಿಗೆ ಜನಪದಸಾಹಿತ್ಯ-ಸಂಪ್ರದಾಯ- ಕಲೆಗಳನ್ನು ಕುರಿತು ಸಂಶೋಧನೆಯನ್ನು ಕೈಗೊಂಡಿದ್ದರಾದರೂ ಅವರ ಸಂಶೋಧನೆಯ ಫಲ ನಮಗೆ ಹೆಚ್ಚಿನ ರೀತಿಯಲ್ಲಿ ಲಭ್ಯವಾಗುತ್ತದೆಂದು ಭಾವಿಸುವುದರಲ್ಲಿಯೇ ಅವರು ಶಿವೈಕ್ಯರಾದರು. ಇದರಿಂದಾಗಿ ಅವರ ಸಂಶೋಧನಾ ಕೃಷಿ ಕಡಿಮೆಯಿದ್ದರೂ ಗಮನಾರ್ಹವಾಗಿದೆ. "ಜಾನಪದದ ಪೂರ್ಣಕಲ್ಪನೆ ಶ್ರೀಯುತರಿಗಿರದಿದ್ದರೂ ಅವರು ದುಡಿದು ಪಳಗಿದ್ದ ಕ್ಷೇತ್ರಕಾರ್ಯ ಹಾಗೂ ಪಡೆದ ಜಾನಪದೀಯ ಅನುಭವಗಳು ಬೆಲೆಯುಳ್ಳವಾಗಿವೆ"[೧೨] ಈ ಗಟ್ಟಿ ಅನುಭವದ ಹಿನ್ನೆಲೆಯಲ್ಲಿಯೇ ಅವರ ಸಂಶೋಧನೆಯು ಸಾಗಿದೆ. "ಆಗ ಈಗಿನಂತೆ ಕನ್ನಡದಲ್ಲಿ ಜಾನಪದ ಅಭ್ಯಾಸಕ್ಕೆ ಅನುಕೂಲಗಳು ಹೆಚ್ಚಾಗಿರಲಿಲ್ಲ. ವೈಜ್ಞಾನಿಕ ಅಭ್ಯಾಸದಲ್ಲಿ ಇತರ

---

೧೨ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ. ಡಾ. ನಂ. ತಪಸ್ವೀಕುಮಾರ. ಪು-೧೩೪

ಶಾಸ್ತ್ರಗಳ ನೆರವನ್ನು ಪಡೆಯುವ ದೃಷ್ಟಿ ಈಗಿನಷ್ಟು ಆಗ ಇರಲಿಲ್ಲ''[೧೩] ಇದರಿಂದಾಗಿ ಡಾ. ಗದ್ದಿಗಿಮಠರ ಜಾನಪದ ಕ್ಷೇತ್ರ ಕುರಿತಾದ ಸಂಶೋಧನೆಯು ಅವರ ಅನುಭವದ ಏಕನಿಷ್ಟೆನಲ್ಲಿ ನಡೆದು ಬಂದಿತೆಂದು ಹೇಳಬಹುದಾಗಿದೆ.

ಅವರ ಮಹತ್ವದ ಸಂಶೋಧನಾ ಕೃತಿಯೆಂದರೆ 'ಕನ್ನಡ ಜಾನಪದ ಗೀತಗಳು'' ಎಂಬುದಾಗಿದ್ದು ಅದು ಅವರಿಗೆ ಪಿಎಚ್.ಡಿ ಪದವಿಯನ್ನು ದೊರಕಿಸಿದೆ. ''ಪ್ರಸ್ತುತ ಮಹಾಪ್ರಬಂಧ ಅವರ ಶ್ರದ್ಧಾಸಕ್ತಿಗಳ ಫಲವಾಗಿ ಹೊರಬಂದ ಕೃತಿ. ಬಹಳ ಓಂದೆ ಬರೆಯಲಾದ ಮಹಾಪ್ರಬಂಧವಿದು ಎಂಬುದನ್ನು ಮರೆಯುವಂತಿಲ್ಲ. ಜಾನಪದವನ್ನು ಕುರಿತು ಕನ್ನಡದಲ್ಲಿನ್ನೂ ವೈಜ್ಞಾನಿಕ ವಿಶ್ಲೇಷಣೆ ಆರಂಭವಾಗದ ಕಾಲವದು. ಓಗಾಗಿ ಇಂದಿನ ಚಿಕಿತ್ಸಕ ದೃಷ್ಟಿಗೆ ಕೆಲವು ದೋಷಗಳು ಕಂಡರೂ ಮೊದಲ ಸಾಹಸವೆಂದು ಮೆಚ್ಚತಕ್ಕ ಕೃತಿ. ಪ್ರಚಲಿತವಿರುವ ಇನ್ನು ಗೀತ ಪ್ರಕಾರಗಳ ಬಗೆಗೆ ವಿವರ ಒದಗಿಸಿದ್ದರೆ, ಭಾವಾವೇಶ ನಿಗ್ರಹಿಸಿದ್ದರೆ ಮಹಾಪ್ರಬಂಧಕ್ಕೆ ಹೆಚ್ಚಿನ ಕಳೆ ಬರುತ್ತಿತ್ತು''[೧೪] ಎಂದು ಇಂದಿನವರು ಆ ಪ್ರಬಂಧ ಕುರಿತು ವಿಮರ್ಶೆ ಮಾಡಿದ್ದಾರೆ.

ಜಾನಪದಕ್ಕೂ ಭಾವಾವೇಶಕ್ಕೂ ಬಹಳಷ್ಟೆ ಸಂಬಂಧವಿದೆ. ಡಾ. ಗದ್ದಿಗಿಮಠರು ಮೂಲತ: ಜಾನಪದ ಬದುಕಿನಲ್ಲಿ ಬೆಳೆದು ಬಂದವರು. '' ''ಒಂದೊಂದು ತ್ರಿಪದಿಯನ್ನು ವಿವಿಧ ದಾಟಿ, ರೀತಿಗಳಿಂದ ಪರಿಣಾಮಕಾರಿಯಾಗಿ ಹಾಡಬಲ್ಲವರಾಗಿದ್ದಾರೆ. ಅವರ ಜೀವನವೇ ಈ ಗೀತಗಳ ಸಂಗ್ರಹ, ಪ್ರಕಾಶನಕ್ಕಾಗಿ ಮುಡಿಪಾಗಿದೆಯೆಂದರೂ ಸಲ್ಲುವುದು''[೧೫] ಈ ಓನ್ನೆಲೆಯಲ್ಲಿ ಅವರ ಪ್ರಬಂಧವನ್ನು ಒಂದು ರೀತಿಯಲ್ಲಿ ''ಸಂಶೋಧನಾತ್ಮಕ ರಸವಿಮರ್ಶೆಯುಳ್ಳ ಕೃತಿ'' ಎಂದು ಕರೆಯಬಹುದಾಗಿದೆ. ಯಾಕೆಂದರೆ ''ಅಪಾರವಾದ ನನ್ನ ಸಂಕಲನದಲ್ಲಿ ಮಾದರಿಗಾಗಿ ಅಲ್ಲೊಂದು ಇಲ್ಲೊಂದು ಹಾಡುಗಳನ್ನು ಎತ್ತಿಕೊಂಡು ''ಜನತಾ ಗೀತಗಳು'' ಎಂದು ಇದನ್ನು ಸಂಗ್ರಹಿಸಲಾಗಿದೆ. ಇನ್ನುಳಿದ ಸಂಕಲನವು ಎಂದು ಬೆಳಕಿನಲ್ಲಿ ಕಾಣುವುದೋ ಏನೋ! ಜನತಾ ಗೀತೆಗಳಲ್ಲಿಯ ಹಾಡುಗಳ ಅಲ್ಪ ಪರಿಚಯವನ್ನು ಇಲ್ಲಿ ಮಾಡಲಾಗಿದೆ. ಇದರ ವಿಸ್ತಾರವಾದ ವಿಮರ್ಶೆಯನ್ನು ನನ್ನ 'ಕನ್ನಡ ಜಾನಪದ ಗೀತಗಳು' ಎಂಬ ಮಹಾಪ್ರಬಂಧದಲ್ಲಿ ಮಾಡಿದ್ದೇನೆ''[೧೬] ಎಂದಿದ್ದಾರೆ. ಇದು ಅವರ ಸಂಶೋಧನಾ ಪದ್ಧತಿಯಾಗಿತ್ತೆಂದು ಗುರುತಿಸಬಹುದು.

ಅವರ ಈ ಪ್ರಬಂಧ ಹೆಚ್ಚಾಗಿ ಕ್ಷೇತ್ರಕಾರ್ಯವನ್ನು ಅವಲಂಬಿಸಿ ರಚಿತವಾದ ಕೃತಿಯಾಗಿದೆ. ಅವರ ಬರಹದಲ್ಲಿ ಹೆಚ್ಚಿನ ಅಡಿಟಿಪ್ಪಣಿಗಳಿಲ್ಲ. ಪ್ರಸ್ತಾವನೆ ಮತ್ತು ಏಳನೆಯ ಪ್ರಕರಣದಲ್ಲಿ ಕ್ರಮವಾಗಿ ಅಡಿಟಿಪ್ಪಣಿ ನೀಡುವ ಪದ್ಧತಿಯನ್ನು ಅನುಸರಿಸಿದ ಅವರು

---

೧೩ ಜನಪದ ಸಾಹಿತ್ಯ ಡಾ. ಎಲ್. ಆರ್. ಹೆಗಡೆ.ಪು -೩೩

೧೪ ಜಾನಪದ ಸಾಹಿತ್ಯ ದರ್ಶನ- ಸಂಪುಟ ಒಂದು ಕ. ವಿ. ವಿ. ಪ್ರಕಟಣೆ -ಪು -೧೯೭

೧೫ ಜನತಾ ಗೀತಗಳು - ಡಾ. ಬಿ. ಎಸ್. ಗದ್ದಿಗಿಮಠ -ಪು- ಪ್ರಕಾಶಕರ ಮಾತು

೧೬ ಅದೇ- ಪು-೨೭

ಉಳಿದೆಡೆಯಲ್ಲಿ ಗಮನ ಸೆಳೆಯಲು ನಕ್ಷತ್ರದ ಚಿನ್ಹೆ ಬಳಸಿದ್ದಾರೆ. ಒಂದು ಪುಟದಲ್ಲಿ ಎರಡು ಅಡಿಟಿಪ್ಪಣಿಗಳು ಬರುವಂತಿದ್ದರೆ ಒಂದಕ್ಕೆ ನಕ್ಷತ್ರ, ಇನ್ನೊಂದಕ್ಕೆ ಕಠಾರಿ ಚಿನ್ಹೆಯನ್ನು ಬಳಸಿದ್ದಾರೆ. ಹೆಚ್ಚಿನ ಅಡಿಟಿಪ್ಪಣಿಗಳು ಬಂದಿಲ್ಲ. ಅಡಿಟಿಪ್ಪಣಿ ನೀಡುವುದರ ಬದಲಾಗಿ ಇನ್ನೂ ಒಂದು ಕ್ರಮದಲ್ಲಿ ಸಾಗಿದ್ದಾರೆ. ಅದೆಂದರೆ ಪ್ರಬಂಧದ ಓದು ನಿರಾತಂಕವಾಗಿ ಸಾಗಲು ಇತರ ಅಭಿಪ್ರಾಯಗಳನ್ನು ಎತ್ತಿಕೊಂಡು ಅದರ ಉಲ್ಲೇಖವನ್ನು ಕಂಸಗಳ ಸಹಾಯದ ಮೂಲಕ (ಅಲ್ಪಾವರಣ) ಅಲ್ಲಿಯೇ ಹೇಳಿದ್ದಾರೆ. ಇದು ಅವರ ಸಂಶೋಧನಾ ಬರಹದ ಪದ್ಧತಿಯಾಗಿದೆ. ಡಾ. ಗದ್ದಿಗಿಮಠರ ಸಂಶೋಧನಾ ಬರಹಗಳು ಕಡಿಮೆ. 'ಕನ್ನಡ ಬಯಲಾಟ' ಕಂಬಿಯ ಪದಗಳು, ಗುರ್ಚಿ ಜೋಕುಮಾರರ ಸಂಪ್ರದಾಯಗಳು, ಇನ್ನೂ ಮುಂತಾದ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲಾ ಜಾನಪದೀಯ ಬದುಕಿನ ಅನುಭವದ ಸಾರಗಳಾಗಿವೆ. ಹೀಗೆ ಡಾ. ಗದ್ದಿಗಿಮಠರ ಸಂಗ್ರಹ ವಿಧಾನ ಮತ್ತು ಸಂಶೋಧನಾ ವಿಧಾನಗಳನ್ನು ನಾವು ಗುರುತಿಸಬಹುದಾಗಿದೆ.

* * * * *

# ಗೊರೂರರು ಮತ್ತು ಜಾನಪದ ಪರಿಸರ

ಸಿ. ಜಿ. ವೆಂಕಟಯ್ಯ

ಗೊರೂರರು ಗ್ರಾಮೀಣ ಸಂಸ್ಕೃತಿಯ ಜೀವಂತ ಪ್ರತಿನಿಧಿಗಳು. ತಮ್ಮ ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಜಾನಪದ ವ್ಯಕ್ತಿತ್ವವನ್ನು ಕಾಯ್ದುಕೊಂಡವರು. ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಹಳ್ಳಿಯ ಜೀವನವನ್ನು ವಿವಿಧ ಮುಖಗಳಲ್ಲಿ ಚಿತ್ರಿಸುವ 'ಹಳ್ಳಿಯ ಚಿತ್ರಗಳು' ಎಂಬ ಕೃತಿಯಿಂದ ಪ್ರಾರಂಭವಾದ ಗೊರೂರರ ಸಾಹಿತ್ಯ ಸೇವೆ ಸುಮಾರು ಅರ್ಧಶತಮಾನಕ್ಕೂ ಹೆಚ್ಚು ಕಾಲದ್ದು. ಗೊರೂರರ ಕೃತಿಗಳಿಗೆ ಹೇಮಾವತಿ ನದಿಯೂ, ಆ ನದಿಯ ದಡದಲ್ಲಿನ ಬದುಕೂ ಆಧಾರ ಹಾಗೂ ಪ್ರೇರಕ ಶಕ್ತಿಯಾಗಿದೆ. ಹಾಗೂ ಅಲ್ಲಿನ ಸಾಂಸ್ಕೃತಿಕ ಜೀವನದ ವಿವಿಧ ಮುಖಗಳಿಗೆ ಓಡಿದ ಕನ್ನಡಿಗಳಾಗಿವೆ. ಇವನ್ನು ಹೇಮಾವತಿ ತೀರದ ಬದುಕಿನ ಸಾಹಿತ್ಯ ಸೃಷ್ಟಿ ಎನ್ನಿ, ಇಲ್ಲವೆ ಸಮೃದ್ಧ ಗ್ರಾಮ ಜೀವನದ ಚಿತ್ರಣ ಎನ್ನಿ ಜೀವನ ಮತ್ತು ಸಾಹಿತ್ಯ ಸಂವೇದನೆ ಇಲ್ಲಿ ಪುಟ ತೆರದಿದೆ.

ಹೇಮಾವತಿ ತೀರದ ಬದುಕು ಹಲವು ಜೀವಸ್ಪಂದಿ ಘಟನೆಗಳನ್ನು ಹೊಂದಿದೆ. ಹೊಳೆಯೂ, ವ್ಯಕ್ತಿತ್ವಗಳೂ ಒಂದೊಂದು ಬಗೆಯ ವ್ಯಕ್ತಿತ್ವವನ್ನು ಕಟ್ಟಿಕೊಂಡು ಬೆಳೆದು ನಿಲ್ಲುತ್ತಾರೆ. ಹೊಳೆಯ ಕಡವುಗಳು ಅವುಗಳ ಜೊತೆಗೆ ಇರುವ ಬೇರೆ ಬೇರೆ ಜಾತಿಯವರ ಸಂಬಂಧ, ದೈವ ಪೂಜೆಗಾಗಿ ವ್ಯಾಪಾರ ನಡೆಸುವ ಸಮೇರಾಯ ಮತ್ತು ಬುಡ್ಡದಾಸಯ್ಯಗಳ ಜಗಳ, ಬೆಸ್ತರು ನದಿಯ ಆಳಕ್ಕೆ ಮುಳುಗಿ ಓಡಿಯುವ ರೋಮಾಂಚಕ ಮೀನು ಬೇಟೆ, ಅಸಾಧಾರಣ ಎನ್ನಬಹುದಾದ ಪಾರುಪತ್ತೆಗಾರರ ಮಡಿ, ಗೊರೂರಿನ ಯುವಕ ಯುವತಿಯರ ಈಜುವ ಸಾಹಸ, ಬದುಕನ್ನು ಹೊಳೆಯ ಜೀವಂತಿಕೆಯೊಂದಿಗೆ ಗುರುತಿಸಿಕೊಳ್ಳುವ ರೀತಿ, ಹೊಳೆಯೇ ಆ ಜನರ ಜೀವ ಭೋಗ ಆಗುವ ಪರಿ. ದೇವಸ್ಥಾನದಲ್ಲಿ ಸೇರಿಕೊಂಡ ಇಲಿಗಳ ಸಂಸಾರ ಹಾಗೂ ಆ ಮೂಲಕ ಆ ಗ್ರಾಮದ ಜನವರ್ಗದ ರೀತಿನೀತಿಯನ್ನು ವಿಡಂಬಿಸುವ ವಿಧಾನ ಇವೆಲ್ಲಾ ಹೇಮಾವತಿ ನದಿ ಮತ್ತು ಗೊರೂರಿನ ಜೀವನವನ್ನು ನಮ್ಮ ಮುಂದೆ ತೆರದಿಡುತ್ತವೆ. ಗೊರೂರರ ಗ್ರಾಮೀಣ ಪರಿಸರದ ಚಿತ್ರಣದ ವಿಶೇಷ, ಮಾನವ ಪ್ರೀತಿ ಮತ್ತು ಸಮಾನತೆಗಾಗಿ ಪಾರಸ್ಪರಿಕ ವಿಶ್ವಾಸದ ಮೇಲೆ ಬರೆಯುವುದು ಮತ್ತು ಜೀವನವನ್ನು ಬೆಸೆಯುವುದು. ಕುವೆಂಪು ಮತ್ತು ಶಿವರಾಮ ಕಾರಂತರಂತೆ, ತಮ್ಮ ಪ್ರಾದೇಶಿಕ ಪರಿಸರವನ್ನು ಅದರ ಎಲ್ಲ ಮೂರ್ತತೆಯೊಂದಿಗೆ, ಆ ಪರಿಸರ ಸೃಷ್ಟಿಸಿರುವ ಬದುಕಿನ ಕ್ರಮದ ಆಳವಾದ ತಿಳುವಳಿಕೆಯೊಂದಿಗೆ ಪುನಃ ಸೃಷ್ಟಿಸಿರುವಂಥದ್ದು ಗೊರೂರರ ವೈಶಿಷ್ಟ್ಯವಾಗಿದೆ.

ಇಲ್ಲಿ ನಾನು ಗೊರೂರರನ್ನು ಸಾಹಿತಿಯಾಗಿ ಮಾತ್ರ ಪ್ರಸ್ತಾಪ ಮಾಡುತ್ತಿಲ್ಲ. ಅವರ ಸಾಹಿತ್ಯ ಶಕ್ತಿಯ ವಿವಿಧ ಕೋನಗಳನ್ನು ಪರಿಚಯ ಮಾಡುತ್ತಿದ್ದೇನೆ. ಅಂದರೆ ಅವರು ಬದುಕುತ್ತಿರುವ ಜನಪದದೊಳಗಿಟ್ಟು ಪರಿಶೀಲಿಸುತ್ತಿದ್ದೇನೆ. ಗೊರೂರರು ತಮ್ಮ ಮೂಲ ಜೀವನದಿಂದ ಹೊರಬಂದು ಸಾಹಿತಿಯ ಪಟ್ಟ ಅಥವಾ ಪಟ್ಟಿಯೊಡನೆ ಬರೆದವರಲ್ಲ.

ತಾವು ಬದುಕುತ್ತಿರುವ ಜನಪದ ಸಮಾಜಕ್ಕೆ ಸಮಕಾಲೀನ ಸುಧಾರಕ ಅಥವಾ ಜನಪದ ನಾಯಕ ಆಗಿ ಬರೆಯುತ್ತಿದ್ದಾರೆ. ಹೀಗೆ ಬರೆಯುವಾಗ ತನ್ನ ಪರಿಸರವನ್ನು ಅವರು ಕೃತಿಯಲ್ಲಿ ಪುನರ್ ಸೃಷ್ಟಿಸುವುದು ಮಾತ್ರ ಅಲ್ಲ; ಗೊರೂರರಲ್ಲಿ ಹೇಮಾವತಿಯು ನಿರಂತರ ಹರಿಯುತ್ತಿದ್ದಾಳೆ. ಹೇಗೆ ಹೇಮಾವತಿ ಆ ಸುತ್ತಿನ ಜೀವನಾಡಿಯಾಗಿದ್ದಾಳೆಯೋ ಹಾಗೆಯೇ ಗೊರೂರರು ತಮ್ಮ ಇತಿಮಿತಿಗಳ ನಡುವಿನಲ್ಲಿಯೇ ತಮ್ಮ ಸುತ್ತ ಮುತ್ತಲ ಜನರ ಜೀವಸ್ಪಂಧಿಯಾಗಿದ್ದಾರೆ. ಇದರ ಅರ್ಥ ಗೊರೂರರು ಆ ಪ್ರದೇಶದ ಭೂಗೋಳ ಕೂಡ.

ಗೊರೂರರು ಶಿಷ್ಟಸಾಹಿತಿ ಎನಿಸಿಕೊಂಡರೂ ಬಹುಪಾಲು ಅವರು ಜನಪದ ಸಾಹಿತಿ. ಹೇಗೆ ಒಬ್ಬ ಜನಪದ ಸಾಹಿತಿ ತನ್ನ ಪರಿಸರವನ್ನು ಒಪ್ಪಿಕೊಂಡು ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆಯುತ್ತಾನೆಯೋ ಹಾಗೆಯೇ ಗೊರೂರರ ಸಾಹಿತ್ಯ ಸೃಷ್ಟಿ ತನ್ನ ಜತೆಗೆ ಭೂಗೋಳ ಸಾಹಿತ್ಯ ಅವಿಭಾಜ್ಯ ಅಂಗವಾಗಿ ಬರುತ್ತದೆ. ಜಾನಪದವನ್ನು ಅಧ್ಯಯನ ಮಾಡುವವರು ಭೂಗೋಳ, ಇತಿಹಾಸ ಮತ್ತು ಸಮಕಾಲೀನ ಸಂದರ್ಭಗಳನ್ನು ಪ್ರಾಮಾಣ್ಯವಾಗಿ ಸ್ವೀಕರಿಸಿ ಮುನ್ನಡೆಯುತ್ತಾರೆ. ಗೊರೂರರ ಸಾಹಿತ್ಯ ಸೃಷ್ಟಿಯಲ್ಲಿ ಈ ಮೂರೂ ಅಂಶಗಳೂ ಇವೆ. ಆ ಕಾರಣವಾಗಿ ಗೊರೂರರು ಒಂದು ಪ್ರದೇಶದ ಸಾಹಿತಿಯಂತೆಯೂ ಕಾಣಬಹುದು ಅಥವಾ ಗೊರೂರರನ್ನು ಕನ್ನಡ ಸಾಹಿತ್ಯಕ್ಕೆ ಸೃಷ್ಟಿಸಿಕೊಡುತ್ತಿರುವ ಜನಪದ ಕವಿಯೂ ಆಗಬಹುದು. ಆದರೆ ಈ ಪ್ರಾದೇಶಿಕ ಚಿಂತನೆ ದೇಶವನ್ನು ಸೃಷ್ಟಿಸಿಕೊಡುವ ಪೂರಕ ಚಿಂತನೆ. ಈ ಕಾರಣಕ್ಕಾಗಿ ಗೊರೂರರನ್ನು ನಾವು ಅಧ್ಯಯನ ಮಾಡುವಾಗ ಈ ಸೃಷ್ಟಿ ಸಂದರ್ಭದ ಹಿನ್ನೆಲೆಯ ಭೌಗೋಳಿಕ ದೃಷ್ಟಿಯನ್ನು ಗಮನಿಸಬೇಕಾಗುತ್ತದೆ. ಜಾನಪದ ದೃಷ್ಟಿಯಿಂದ ಗೊರೂರರನ್ನು ನೋಡುವಾಗ ಈ ಭೌಗೋಳಿಕ ಅಂಶಗಳು ಅಗತ್ಯ ಬೇಕಾಗುತ್ತವೆ. ಯಾಕೆಂದರೆ ಅವು ಗೊರೂರರ ಜೀವನ ಮತ್ತು ಸಾಹಿತ್ಯ ಸೃಷ್ಟಿಯ ಜೊತೆಗೆ ತೆಕ್ಕೆಸಿಕೊಂಡಿವೆ. ಆದ್ದರಿಂದಲೇ ರಾಮಸ್ವಾಮಿ ಅಯ್ಯಂಗಾರರು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಆಗಿದ್ದಾರೆ. ವಿಶೇಷವೆಂದರೆ ಅವರ ಉತ್ತರಾರ್ಧ ಹೆಸರು ಸಾಂಕೇತಿಕವಾಗಿ ಉಳಿದುಕೊಂಡು ಪೂರ್ವಾರ್ಧವಾದ "ಗೊರೂರೇ" ಪ್ರಧಾನ ನಾಮ ಸೂಚಿಯಾಗಿದೆ.

ನಾವು ಗೊರೂರರನ್ನು ಜನಪದ-ಜಾನಪದ ಪುನಸ್ಸೃಷ್ಟಿಕರ್ತ ಎಂದು ಕರೆಯುವುದು ಈ ಹಿನ್ನೆಲೆಯಲ್ಲಿಯೇ. ಅವರು ಇಲ್ಲಿಯ ಪ್ರದೇಶವನ್ನು ಕೇವಲ ಮಣ್ಣು ಎಂದು ತಿಳಿದುಕೊಂಡವರಲ್ಲ. ಆ ತರಹ ಭಾವುಕತೆ ಅವರಿಗಿಲ್ಲ. ಮಣ್ಣು, ಜನ, ಜಾತಿ ಈ ರೀತಿಯ ಸಾಂಸ್ಥಿಕ ವಿಭಿನ್ನ ರೂಪಗಳು ಅವರ ಬರವಣಿಗೆಯಲ್ಲಿ ಮುಖಾಮುಖಿಯಾಗುತ್ತವೆ. ಇವೆಲ್ಲಾ ಒಂದು ರೀತಿಯಲ್ಲಿ ಪ್ರಾದೇಶಿಕ ಇಲ್ಲವೆ ಜನಾಂಗಿಕ ವಿಶಿಷ್ಟತೆಯನ್ನು ಪಡೆದ ವ್ಯಕ್ತಿತ್ವಗಳು. ಶಾಲುಸಾಬಿ, ಭೂತಯ್ಯ, ಅಯ್ಯು, ಶೀನಪ್ಪ, ಜೋಡಿದಾರರು, ಹೊಸಬಿ, ರಂಗೇಗೌಡ, ತೂರ ಮತ್ತು ಬೆಸ್ತರ ಕರಿಯ ಇವೇ ಮೊದಲಾದ ವ್ಯಕ್ತಿಚಿತ್ರಗಳು ಜನಾಂಗಿಕ ವ್ಯಕ್ತಿತ್ವವನ್ನು ಪಡೆದು ಎದ್ದುನಿಂತ ವ್ಯಕ್ತಿತ್ವಗಳು. ಪಿಲ್ಲಯ್ಯ, ವೆಂಕಟರಾಯ, ಹೊಸಬಿ, ತೂರ, ಬೆಸ್ತರ ಕರಿಯ ಈ ಮುಂತಾದ ವ್ಯಕ್ತಿತ್ವಗಳು ಗೊರೂರರನ್ನು ಮತ್ತೆ ಪುನರ್ ಜೀವಿಸುವ ಪ್ರಾದೇಶಿಕ ಮಾತೃಕ ರೂಪಗಳು. ಗೊರೂರರು ಸಾಹಿತ್ಯವನ್ನು ಸೃಷ್ಟಿಸಿ ಕೊಡುವುದಕ್ಕಿಂತ ಹೆಚ್ಚಾಗಿ ತಮ್ಮ ಪರಿಸರದ ಜನಜೀವನವನ್ನು ಸೃಷ್ಟಿಸಿ ಕೊಡುವ

ಸುಧಾರಕರೂ ಹೌದು. ಆ ಕಾರಣವಾಗಿಯೆ ಸರಳ ಹಾಗೂ ಸುಲಭವಾಗಿ. ಚಾರಿತ್ರಿಕವಾಗಿ ಗಟ್ಟಿಯಾಗಿರುವ ಜಾತಿ ಮೊದಲಾದ ವ್ಯವಸ್ಥೆಗಳೂ ಕೂಡ ಮಾತನಾಡತೊಡಗುತ್ತವೆ. ಪರಸ್ಪರ ಹೊಂದಾಣಿಕೆಯನ್ನು ಬಯಸುತ್ತವೆ. ಇದನ್ನು ಅಪೇಕ್ಷಿಸಿದ ಶಿಷ್ಟ ಸಾಹಿತಿ ಮತ್ತು ವಿಮರ್ಶಕ ಗೊರೂರರ ಬರವಣಿಗೆ ಸರಳ ಎನ್ನುತ್ತಾನೆ. ನಿಜವಾದ ಅರ್ಥದಲ್ಲಿ ಆ ಸರಳತೆ ಗೊರೂರರದ್ದೂ ಅಲ್ಲ. ಅವರನ್ನು ಸ್ಪಂಧನಗೊಳಿಸಿರುವ ಪ್ರಾದೇಶಿಕ ಸಂಸ್ಕೃತಿಯದ್ದು. ಅದನ್ನು ನಾವು ವಿಶಿಷ್ಟ ಅರ್ಥದಲ್ಲಿ ಸ್ವದೇಶಿ ಸಂಸ್ಕೃತಿಯ ಚಿಂತನೆ ಎಂದು ಕರೆಯ...ಹುದು.

ಗೊರೂರರು ಮತ್ತು ಜಾನಪದ ಪರಿಸರವನ್ನು ಕುರಿತು ಹೇಳುವಾಗ. ಪ್ರಕೃತಿ ಸಮಾಜ. ಆಚರಣಾ ಸಮಾಜ. ಒಡನಾಟ ಸಮಾಜ ಹಾಗೂ ವ್ಯಕ್ತಿ ಸಮಾಜ- ಈ ನಾಲ್ಕು ಅಂಶಗಳನ್ನು ಪ್ರಮುಖವಾಗಿ ಗಮನಿಸಬೇಕಾಗುತ್ತದೆ.

**೧. ಪ್ರಕೃತಿ ಸಮಾಜ:**

ಗೊರೂರರು ತಮ್ಮ ಊರನ್ನು ಪರಿಚಯ ಮಾಡಿಕೊಡುತ್ತಾ. "ನಮ್ಮ ಊರು ಮಲೆನಾಡಿನ ಸೆರಗಿನಲ್ಲಿದೆ. ಎಲೆಗಳ ಮರೆಯಲ್ಲಿ ಹೂ ಒಂದು ಅರಳಿ ಸುವಾಸನೆಯನ್ನು ಸೂಚಿಸುತ್ತಿದ್ದರೆ ಹೇಗೋ ಹಾಗೆ. ನಮ್ಮ ಊರು ಸುತ್ತಲೂ ಬೆಳೆದಿರುವ. ಸುಮಾರಾಗಿ ಎತ್ತರವಾಗಿರುವ ಮರಗಳ ಮಧ್ಯದಲ್ಲಿ ಹೆಚ್ಚು ಬಾಹ್ಯಾಡಂಬರವಿಲ್ಲದೆ ನಿಂತಿದೆ. ಊರಿನಿಂದ ಅರ್ಧಮೈಲು ದೂರಕ್ಕೆ ಹೋದರೆ. ನಮ್ಮೂರು ಎಲ್ಲಿದೆ ಎಂಬುದೂ ನಮಗೇ ತಿಳಿಯುವುದೇ ಇಲ್ಲ. ಆಗ ಅದು ಮರಗಳ ಮಧ್ಯದಲ್ಲಿ ಮುಚ್ಚಿ ಹೋಗುತ್ತವೆ. ನಮ್ಮ ಊರಿನ ಸುತ್ತ ಇಂತಹ ನೂರಾರು ತೋಪುಗಳಿರುವುದರಿಂದ ಯಾವುದರ ಮಧ್ಯವಲ್ಲಿ ನಮ್ಮ ಊರು ಇದೆ ಎಂಬುದನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಆದರೆ ಮನೆಗಳಿಂದ ಹೊರಡುವ ಹೊಗೆ ಇದೆಯಲ್ಲ ಅದೇ ನಮ್ಮೂರ ರಸಿಕರು'[೧] ಎನ್ನುತ್ತಾರೆ. ನಲವತ್ತು ವರ್ಷಗಳ ಹಿಂದಿನ ತಮ್ಮ ಊರು ಧರೆಗಿಳಿದ ನಂದನವನದಂತಿತ್ತು ಎಂದು ತುಂಬಾ ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ತಮ್ಮ ಊರಿನ ಬೆಳಗಿನ ಒಂದು ಸುಂದರ ವರ್ಣನೆಯನ್ನು 'ನಮ್ಮೂರ ರಸಿಕರು'[೧] ಕೃತಿಯಲ್ಲಿ ಓದುಗರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ತಲೆ ಮುಸುಕಿನ ಮೂರ್ನಾಲ್ಕು ಮಂದಿ ಸೋಮಾರಿಗಳ ನಡುವೆ ನಶ್ಯ ತೀಡುತ್ತಾ ಕುಳಿತಿರುವ ನರಸಿಂಹಾಚಾರ್ಯರ ಕಡೆಗೆ ತಿರುಗಿದರೆ ಸಾಕು ನಗು ಉಕ್ಕೇರುತ್ತದೆ. ಮಲಗಿದ್ದ ಜನರನ್ನು ಬಡಿದೆಬ್ಬಿಸುವ ಕಾಫಿ. ದೋಸೆಗಳ ಘಮಘಮ ವಾಸನೆ. ನದಿಯ ಕಡವುಗಳಲ್ಲಿ ಘೇರಾಯಿಸಿರುವ ಹೆಂಗಸರ ತಂಡ. ಗುಡಾಣದಂತಹ ಹೊಟ್ಟೆಗೆ ಸಡಿಲವಾಗಿ ಕೆಳಕ್ಕೆ ಜಾರುತ್ತಿರುವಂತೆ ಪಂಚೆಯನ್ನು ಬಿಗಿದುಕೊಂಡು ಕಿವಿಗೆ ಮಾವಿನ ಎಲೆಯನ್ನೂ. ಜನಿವಾರವನ್ನೂ ಸುತ್ತಿಕೊಂಡು ನದಿಯ ಕಡೆಗೆ ಹೋಗುತ್ತಿರುವ ಶಾಸ್ತ್ರಿಗಳು. ಊರ ಮುಂದಿನ ಚಾವಡಿಯಲ್ಲಿ ಶ್ಯಾನುಭೋಗನೊಂದಿಗೆ ಟಿಪ್ಪುಸುಲ್ತಾನನ ಕಾಲದ ಕಗ್ಗಗಳನ್ನು ಹೇಳುತ್ತಾ ಮಧ್ಯೆ ಮಧ್ಯೆ ನಗುತ್ತಿರುವ ಬೋರೇಗೌಡ. ಹೆಗಲ ಮೇಲೆ ನೇಗಿಲು ಹಾಕಿಕೊಂಡು ಎತ್ತುಗಳ ಜತೆಯಲ್ಲಿ ಹೊಲಗದ್ದೆಗಳಿಗೆ ಹೊರಟಿರುವ ರೈತರು. ಸೂರ್ಯನ ಕಡೆಗೆ

---

೧ ನಮ್ಮ ಊರಿನ ರಸಿಕರು ಪುಟ ೧

ಕೈಮುಗಿಯುತ್ತಿರುವ ರಂಗೇಗೌಡ. ಮಾಸಿದ ಮುಗಟವನ್ನುಟ್ಟುಕೊಂಡು, ದೇವಸ್ಥಾನದಲ್ಲಿ ಗಂಟೆ ಹೊಡೆಯುತ್ತಿರುವ ಪೂಜಾರಿ ಇವೇ ಮೊದಲಾದ ದೃಶ್ಯಗಳು ಗೊರೂರಿನ ನಿತ್ಯ ಸಂಗತಿಗಳು. ಹೀಗೆ ಗೊರೂರರು ಚಿತ್ರಿಸಿರುವ ಗ್ರಾಮೀಣ ಬದುಕು ಮತ್ತು ಪರಿಸರ ಸುಮಾರು ನಾಲ್ಕು ದಶಕಗಳ ಹಿಂದಿನದೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರು ಚಿತ್ರಿಸುವ ಚಿತ್ರಗಳಲ್ಲಿ ವರ್ಣಿಸುವ ಸಂಗತಿಗಳಲ್ಲಿ ಬಹುಪಾಲು ಅವರ ಹುಟ್ಟೂರಾದ ಗೊರೂರಿನ ಪರಿಸರಕ್ಕೆ ಸಂಬಂಧಪಟ್ಟವುಗಳು. ಅಲ್ಲಿನ ಕೋಟೆ, ಪೇಟೆ, ದೇವಸ್ಥಾನದ ಬೀದಿ ಹಾಗೂ ಹರಿಜನ ಕೇರಿಯ ಮನೆಗಳು, ತೋಪುಗಳು, ಕಾಡುಗಳು, ಯಗಚಿ ಮತ್ತು ಹೇಮಾವತಿ ನದಿಗಳು ನದಿಯ ಕಡವುಗಳ ವೈಶಿಷ್ಟ್ಯತೆಗಳು ಇವೇ ಮುಂತಾದ ವರ್ಣನೆಗಳು ವಾಸ್ತವ ನೆಲೆಗಟ್ಟಿನ ಆಧಾರದ ಮೇಲೆ ರೂಪಿತವಾಗಿವೆ. ಕೆಲವು ಹಾಸ್ಯ ಸಂದರ್ಭಗಳಲ್ಲಿ ಅನಿವಾರ್ಯವಾದ ಉತ್ಪ್ರೇಕ್ಷೆ ವಾಸ್ತವಿಕತೆಯನ್ನು ಇನ್ನೂ ದಟ್ಟವಾಗಿಸುತ್ತವೆಯೇ ಹೊರತು ಅವು ಅಸಹಜ ಅಥವಾ ಅಸಂಭವ ಎನ್ನಿಸುವುದಿಲ್ಲ. ತನ್ನ ಪರಸರದ ಬದುಕಿನ ಸ್ವಂತ ಅನುಭವಗಳನ್ನು ಸಮರ್ಥವಾಗಿ ಬರವಣಿಗೆಯ ರೂಪದಲ್ಲಿ ತೋರಿಸಿಕೊಟ್ಟ ಲೇಖಕ ವರ್ಗದವರಲ್ಲಿ ಗೊರೂರರು ಅಗ್ರಗಣ್ಯರು. ತಾವು ಬದುಕುತ್ತಿದ್ದ ಗ್ರಾಮ ಸಮಾಜ ಯಾವ ಕಾಲಕ್ಕೆ ಸೇರಿತ್ತು ? ಯಾವ ಪರಿಸರದಲ್ಲಿ ಅದು ಬದುಕಿ ಬಾಳಿತು. ಆ ಜನಪದರ ಮನೋಧರ್ಮ ಹೇಗಿತ್ತು ಎಂಬುದನ್ನು ಗೊರೂರರ ಕೃತಿಗಳು ಪೂರ್ಣವಾಗಿ ಪರಿಚಯ ಮಾಡಿಕೊಡುತ್ತವೆ. ಪ್ರಕೃತಿಯನ್ನು ಅವಲಂಬಿಸಿರುವ ಗ್ರಾಮೀಣ ಜನರ ಬದುಕಿನಲ್ಲಿ ವ್ಯವಸಾಯಕ್ಕೆ ಇರುವ ಮಹತ್ವವನ್ನು ಅರ್ಥಮಾಡಿಕೊಂಡಿದ್ದಾರೆ ಗೊರೂರರು. ರೈತನಿಗೆ ಚೆನ್ನಾಗಿ ಮಳೆ ಬಿದ್ದು ಹದ ಸಿಕ್ಕಿತು ಎಂದರೆ ಮಗ ಹುಟ್ಟಿದಷ್ಟು ಸಂತೋಷ. ಈ ಬಗ್ಗೆ ಗೊರೂರರ ಅಭಿಪ್ರಾಯ ಹೀಗಿದೆ;

"ನಿಜವಾದ ರೈತ ನೂರು ರೂಪಾಯಿಗಳನ್ನು ಕಳೆದುಕೊಂಡಾನೆಯೇ ಹೊರತು ಒಳ್ಳೆಯ ಬೆರಗನ್ನು ಕಳೆದುಕೊಳ್ಳುವುದಿಲ್ಲ. ಒಳ್ಳೆಯ ಬೆರಗು ವರ್ಷದಲ್ಲಿ ಒಂದು ಸಲ ಮಾತ್ರ ಸಿಕ್ಕುತ್ತದೆ. ಕೆಲವು ವೇಳೆ, ಅನಂತರ ಒಂದು ತಿಂಗಳವರೆಗೂ ಸಿಕ್ಕುವುದಿಲ್ಲ. ನೆಲ ಇಲ್ಲ ತೇವವಾಗಿರುತ್ತದೆ, ಇಲ್ಲ ಒಣಗಿರುತ್ತದೆ. ಹೇಗಾದರೂ ಪೈರು ಕೆಡುತ್ತದೆ". ಆದ್ದರಿಂದಲೇ 'ಬೆದೆನೋಡಿ ಬಿತ್ತು ಹದ ನೋಡಿ ಹರಗು' ಎಂಬ ಗಾದೆ ಮಾತು[೧] ರೂಢಿಯಲ್ಲಿರುವುದು. ಮದುವೆಗೆ ಗೊತ್ತಾಗಿದ್ದ ದಿನವೇ ಒಳ್ಳೆಯ "ಹದ" ಇದ್ದುದರಿಂದ ಬಿತ್ತನೆ ಚೆಲ್ಲಿದ ಅನಂತರ ಧಾರೆಗೆ ನಿಂತು ಕೊಂಡವನೊಬ್ಬನನ್ನು ಗೊರೂರರು ಉದಾಹರಿಸುತ್ತಾರೆ.

ಗೊರೂರರ 'ಒಂದು ಸಂಜೆ' 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ' ಹಾಗೂ 'ಬೆಟ್ಟದ ಮನೆಯಲ್ಲಿ' ಇವೇ ಮೊದಲಾದ ಪ್ರಬಂಧಗಳನ್ನು ಗಮನಿಸಿದಾಗ ಅವರೊಬ್ಬ ಪರಿಸರವಾದಿಯಂತೆ ಕಂಡುಬರುತ್ತಾರೆ. ಕಾಡುಗಳನ್ನು ನಾಶ ಮಾಡುತ್ತಿರುವುದೇ ಇಂದಿನ ಅನಾವೃಷ್ಟಿಗೆ ಕಾರಣ ಎಂಬುದು ಗೊರೂರ ಅಭಿಪ್ರಾಯ. ಸಕಾಲದಲ್ಲಿ ಮಳೆ ಬೀಳದಿದ್ದರೆ ಬೆಂದು ಬಳಲುವ ಜಗತ್ತು, ಮಳೆಬಿದ್ದ ಕೂಡಲೆ ಯೌವ್ವನದಿಂದಲೂ, ಹೊಸ

೧ ಬೆಟ್ಟದ ಮನೆಯಲ್ಲಿ ಮತ್ತು ಇತರ ಪ್ರಬಂಧಗಳು. ಪು. ೧೨೧

ಹುರುಪಿನಿಂದಲೂ ಆನಂದಗೊಂಡು ಹೊಸ ಶೋಭೆಯನ್ನು ಪಡೆಯುತ್ತದೆ. ಗಾಳಿ. ಗಿಡ. ಮರ. ಪಕ್ಕಿ. ಮೃಗಗಳು ಮಳೆಯಿಂದ ತೃಪ್ತಿಯನ್ನು ಅನುಭವಿಸುತ್ತವೆ. ಆದರೆ ಅತೃಪ್ತನಾದ ಮಾನವ ಪ್ರಕೃತಿಯ ವೈಶಿಷ್ಟ್ಯಗಳನ್ನು ಅನುಭವಿಸುವುದೇ ಇಲ್ಲ. ಇದು ಆಧುನಿಕ ನಾಗರೀಕತೆಯ ಪರಿಣಾಮ ಎನ್ನುತ್ತಾರೆ. ಗೊರೂರರ ದೃಷ್ಟಿಯಲ್ಲಿ ಮಾನವ-ಪ್ರಾಣಿ ಸಂಬಂಧಗಳು ಬೇರೆ ಅಲ್ಲ. ಹಾಗೆ ಬೇರೆ ಮಾಡಿ ನೋಡುವುದನ್ನು ಅವರು ಒಪ್ಪುವುದಿಲ್ಲ. ನಮಗೆ ಗಾಳಿ. ನೀರು. ನದಿ. ಮರ. ಕೆರೆ. ಹೂವು. ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ" ಎಂಬುದು ಅವರ ಅಭಿಪ್ರಾಯ. ಎಮ್ಮೆ ಮೈಸೂರು ಪ್ರಾಂತ[೧]ದ ವಿಶಿಷ್ಟ ಪ್ರಾಣಿ. ಹಾಗೆಯೇ ಪೌರುಷವಾದಿ ವಿಶ್ವಾಮಿತ್ರನ ಸೃಷ್ಟಿ. ಆದ್ದರಿಂದ "ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು ಎನ್ನುತ್ತ ಸ್ತಬ್ಧತೆ. ಬುದ್ಧಿ ಹೀನತೆಗೆ ಹೆಸರಾದ 'ಎಮ್ಮೆ' ಹೇಗೆ ಮನುಷ್ಯನನ್ನು ಅರ್ಥ ಮಾಡಿಕೊಳ್ಳುತ್ತದೆ ಎಂಬುದನ್ನು ಗೊರೂರರು ತಮ್ಮ ಅನುಭವದಿಂದ ಹಾಸ್ಯ ಪೂರ್ಣವಾಗಿ ಅದನ್ನು ಪರಿಚಯ ಮಾಡಿಕೊಡುತ್ತಾರೆ. ಈ ಪ್ರಬಂಧದ ಮೂಲಕ ನಮ್ಮ ಸಂಸ್ಕೃತಿಯ ಎರಡು ಪರಂಪರೆಗಳನ್ನು ಪರಿಚಯಿಸುವುದರ ಜೊತೆಗೆ ಎಮ್ಮೆಯ ಸ್ತಬ್ಧತೆಯ ಜೊತೆಗೆ ಮಾತನಾಡುತ್ತಾ ಮಾನವ ಚಲನ ಶೀಲನೂ ಪ್ರಕೃತಿ ಸಂಬಂಧಿಯೂ ಆಗಬೇಕೆನ್ನುತ್ತಾರೆ.

ಒಂದು ನದಿಗೆ ಸೇತುವೆ ಕಟ್ಟಿದರೆ ನಿಜವಾಗಿ ಅದು ಸಂತೋಷಪಡುವ ವಿಷಯ. ಕಾರಣ ಆ ಸೇತುವೆಯಿಂದ ಸುತ್ತಮುತ್ತಲಿನ ಜನರಿಗೆ ಹಲವಾರು ರೀತಿಯಲ್ಲಿ ಅನುಕೂಲಗಳಾಗುತ್ತವೆ. ಅದು ಸರಿಯೇ ಆದರೂ ಮತ್ತೊಂದು ದೃಷ್ಟಿಯಲ್ಲಿ ಮಾನವ ಮತ್ತು ಪ್ರಕೃತಿ ಸಂಬಂಧವನ್ನು ಆ ಸೇತುವೆ ಮುರಿದು ಹಾಕಿದೆ ಎಂದು ಗೊರೂರರು ವ್ಯಥೆಗೊಂಡಿದ್ದಾರೆ. ಗೊರೂರಿನ ಜೀವನ ವಿಧಾನದ ಅವಿಭಾಜ್ಯ ಅಂಗವಾಗಿದ್ದ ಹೇಮಾವತಿ ದೂರವಾದಂತೆನಿಸುತ್ತದೆ. ಗೊರೂರರ ಜೀವ ಸಂಬಂಧಿಯಾದ ಚಿಂತನೆ ಹಾಗೂ ಬಾಂಧವ್ಯದ ವೈಶಿಷ್ಟ್ಯವಿದು. ಸಾಹಿತಿ ಕೃತಿಯಲ್ಲಿ ಆವಿರ್ಭವಿಸುವ ಮೊದಲು ಜನತೆಯೊಳಗೆ-ಜೀವನದೊಳಗೆ ಆವಿರ್ಭವಿಸಿ ಬರುತ್ತಾನೆ. ಅವನಿಗೆ ಈ ಬಗೆಯ ಎರಡು ಹುಟ್ಟುಗಳಿವೆ. ಸಾಮಾನ್ಯನಂತಲ್ಲ. ಗೊರೂರರ ಬರವಣಿಗೆ ನಮಗೆ ಅದನ್ನು ಸ್ಪಷ್ಟಪಡಿಸುತ್ತದೆ. ಸೇತುವೆಯಿಂದ ತಮಗಾದ ದುಃಖದ ಆಧಿಕ್ಯವನ್ನು ಪ್ರಬಂಧದ ಮುಕ್ತಾಯ ವಾಕ್ಯದಲ್ಲಿ ತುಂಬಾ ಪರಿಣಾಮಕಾರಿಯಾಗಿ ಹೇಳಿದ್ದಾರೆ; "ನದಿಯ ಮೇಲೆ ಬಿದ್ದ ಸೇತುವೆ ಅದಕ್ಕೂ ನಮಗೂ ನಡುವೆ ಬಿದ್ದಂತೆ ತೋರುತ್ತಿದೆ"[೨] ಈ ಮಾತುಗಳಲ್ಲಿ ಪರಂಪರೆ, ಆಧುನಿಕತೆಯ 'ಕಡಿತ'ಗಳಿಂದ ಹಾನಿಗೊಳ್ಳುವುದರ ಅಪಾರ ದುರಂತವನ್ನು ತಿಳಿಸಿಕೊಡುತ್ತದೆ.

### ೨. ಆಚರಣಾ ಸಮಾಜ

ಪರಂಪರೆ ಮತ್ತು ಸ್ವಾನುಭವಗಳ ಅದ್ಭುತ ಹೊಂದಾಣಿಕೆಯಿಂದ ಮೈತಳೆಯುವ ಗೊರೂರರ ರೀತಿ ವಿಶಿಷ್ಟವಾದದ್ದು. ಸಂಪ್ರದಾಯವನ್ನು ಅವರು ಎಂದೂ

---

೧ ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು. ಪು. ೭೩.

ಕಣ್ಣುಮುಚ್ಚಿಕೊಂಡು ಒಪ್ಪಿಕೊಂಡವರಲ್ಲ. ಅದರ ಒಳಿತು ಕೆಡುಕುಗಳ ಅರಿವು ಅವರಿಗಿದೆ ಎಂಬುದನ್ನು ಗೊರೂರಿನಲ್ಲಿ ಜರುಗುವ ರಥೋತ್ಸವ, ಜಾತ್ರೆ, ಹಬ್ಬ ಹರಿದಿನಗಳ ಸಂದರ್ಭದಲ್ಲಿ ಕಾಣಬಹುದು. ಗೊರೂರರು ವರ್ಣಿಸುವ ಬಿಂದಿಗಮ್ಮನ ಜಾತ್ರೆ ಜಾನಪದ ಜೀವನದ ಜಾತ್ರೆಯ ಒಂದು ಸಮಗ್ರ ಚಿತ್ರವನ್ನು ಕೊಡುವುದರಲ್ಲಿ ಸಮರ್ಥವಾಗಿದೆ. ಒಂದು ಪ್ರದೇಶದ ಜನರ ಬದುಕು ಅಲ್ಲಿನ 'ರಂಗ ಮತ್ತು ಬಿಂದಿಗಮ್ಮ'- ಈ ಎರಡು ದೇವರುಗಳ ಸುತ್ತ ಬಳಸಿಕೊಂಡಿರುವ ವಿಧಿ ವಿಧಾನಗಳು, ಆ ಬಗ್ಗೆ ಅವರ ಆಚಾರ-ವಿಚಾರ ಸಂಪ್ರದಾಯ, ಭಕ್ತಿ ಮತ್ತು ಅಭಿವ್ಯಕ್ತಿ ಈ ಪ್ರಬಂಧದ ಮುಖ್ಯ ವಸ್ತು. ಜನರಿಗೆ ಆ ದೇವರ ಬಗ್ಗೆ ಇರುವ ವೀರ ನಿಷ್ಠೆ ಪೂಜಾರಿಯ ಕ್ರಿಯೆಯಲ್ಲಿ ಸಾಂಕೇತಿಕವಾಗಿ ಕಾಣಿಸಿಕೊಂಡಿದೆ. ಅರ್ಥಪೂರ್ಣವಾದ ವಿವರಗಳಿಂದ, ಉಚಿತವಾದೆಡೆ ಮೂಲ ಲಾವಣಿಗಳು, ಐತಿಹ್ಯಗಳು, ಪ್ರಬಂಧಕ್ಕೆ ವಿಶಿಷ್ಟತೆಯನ್ನು ಕೊಟ್ಟಿವೆ. ಗ್ರಾಮೀಣ ಜನರ ನಂಬಿಕೆಗಳ ವಿಷಯದಲ್ಲಿ ಗೊರೂರರಿಗೆ ಇರುವ ಅಪಾರ ಸಹಾನುಭೂತಿ ಮತ್ತು ಆಸಕ್ತಿಗಳಿಗೆ ನಿದರ್ಶನವಾಗಿದೆ ಈ ಪ್ರಬಂಧ.

ಪ್ರಜಾಪ್ರಭುತ್ವದಲ್ಲಿ ಬದಲಾಗುತ್ತಿರುವ ಪರಿಸರಕ್ಕೆ ದೇವರೂ ಹೊಂದಿಕೊಳ್ಳಬೇಕಾಗುತ್ತದೆ ಎಂಬ ವಾಸ್ತವ ಸಂಗತಿಯನ್ನು ತಮ್ಮ 'ದೇವರುಗಳೂ ಡೆಮಾಕ್ರಸಿಯು' ಎಂಬ ಪ್ರಬಂಧದಲ್ಲಿ ಹೇಳಿದ್ದಾರೆ ಗೊರೂರರು. ಈ ಪ್ರಬಂಧದ ಆರಂಭದ ಸಾಲುಗಳು ಹೀಗಿವೆ; ಪ್ರಜಾಪ್ರಭುತ್ವದಲ್ಲಿ ಸ್ವಲ್ಪಮಟ್ಟಿಗೆ ಅಸ್ಪೃಶ್ಯತಾ ಭಾವನೆಗಳು ಮಾಯವಾಗಿ ಸಮಾನತ್ವ ಮತ್ತು ಗುಣಪಕ್ಷಪಾತ ಬೆಳೆಯಲು ಹೇಗೆ ಕಾರಣವಾಯಿತು ಎಂಬುದನ್ನು ಗೊರೂರರು ಮೀಸೆ ಗುಂಡನ ಚಟುವಟಿಕೆಗಳಲ್ಲಿ ತೋರಿಸಿಕೊಟ್ಟಿದ್ದಾರೆ. "ಊರೊಳಗಿನ ಓಲಗದವರು ಗೋಳೋ ಎಂದು ಕೊರಗುತ್ತ ಊದುತ್ತಿರುವಾಗ ಅಲ್ಲಿ ಹೊಲಗೇರಿಯ ಓಲಗ 'ಝುಮ್ಮ ಚಕ್ಕ, ಝುಮ್ಮ ಚಕ್ಕ ಎಂದು ಒಳ್ಳೆ ರಣವಾದ್ಯದಂತೆ ಕೇಳುತ್ತಿದ್ದಿತು"[೧]. ಗುಂಡ ಶುದ್ಧ ವೈದಿಕರ, ಮಡಿವಂತರ ವಿರೋಧವನ್ನು ಲೆಕ್ಕಿಸದೆ ಹರಿಜನರ ವಾದ್ಯಗಳನ್ನು ತಂದು ದೇವರ ಉತ್ಸವ ನಡೆಸುತ್ತಾನೆ. ಈ ಸನ್ನಿವೇಶ ಧಾರ್ಮಿಕ ಕಟ್ಟುನಿಟ್ಟಿನ ಸಮಾಜ ಕುಸಿಯುತ್ತಿರುವುದನ್ನು ಪರಿಚಯ ಮಾಡಿಕೊಡುತ್ತದೆ. ಕೆಳವರ್ಗದ ಜನರ ಧ್ವನಿ, ಈ ನಿಂತ ಈ ಸಮಾಜಕ್ಕೆ ಹೊಸ ಸ್ಪಂಧನವನ್ನು ಕೊಡುತ್ತದೆ. "ಹೊಲೆಯರ ಓಲಗದವರೇ ನಾಲ್ಕು ಉತ್ಸವಕ್ಕೆ ಬೇಕಾದ ಜನರನ್ನು ಜತೆಯಲ್ಲಿ ಜಮಾಯಿಸಿಕೊಡು ಬಂದರು"[೨] ಇದು ಮಡಿವಂತರಿಂದ ಜಾತ್ರೆ ಹರಿಜನರನ್ನು ಸೇರಿಸಿಕೊಂಡು ಜನಸಂಬಂಧಿಯಾದ ರೀತಿ. ಈ ಜನವರ್ಗದ ಎಚ್ಚರಿಕೆಯೇ ಎಲ್ಲರ ಎಚ್ಚರಿಕೆಯೂ ಆಗುತ್ತದೆ. ಕೊನೆಗೆ ನರಸಿಂಹಸ್ವಾಮಿಯ ಎಚ್ಚರ ಕೂಡ ಇವರಿಂದಲೇ ಆಗಬೇಕೇನೋ ಎಂಬುದು ಗೊರೂರರ ಅನಿಸಿಕೆ. "ನರಸಿಂಹ ಸ್ವಾಮಿಗೆ ಎಚ್ಚರವಾಗ ಬೇಕಾದರೆ ಆ ರಣಚಂಡಿ ವ್ಯಾದ್ಯವೇ ಬೇಕೇನೋ ಇಲ್ಲದಿದ್ದರೆ ಆತ ಈ ಜಗತ್ತಿನ ಅನ್ಯಾಯಗಳನ್ನೆಲ್ಲಾ ನೋಡಿಕೊಂಡು ಹೀಗೆ ಕುಳಿತು ಬಿಡುತ್ತಿರಲಿಲ್ಲ"[೧] ಎನ್ನುತ್ತಾರೆ.

---

೧ ಹೇಮಾವತಿ ತೀರದಲ್ಲಿ ಮತ್ತ ಇತರ ಪ್ರಬಂಧಗಳು. ಪು. ೪೯.

೨ ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧ' ಗಳು. ಪು. ೫೩.

ಗೊರೂರರು ಮಾನವೀಯತೆಗೆ ಹೆಚ್ಚು ಒತ್ತುಕೊಡುತ್ತಾರೆ. ಮಾನವೀಯತೆಯನ್ನು ಮರೆತು ಆಚರಿಸುವ ಯಾವುದೇ ಅರ್ಥಹೀನವಾದ ಆಚರಣೆಗಳ ಬಗೆಗೆ ತೀವ್ರವಾದ ಆಕ್ಷೇಪ ಎತ್ತುತ್ತಾರೆ. ಸಾಮಾಜಿಕ ಮತ್ತು ನೈತಿಕ ಏರುಪೇರುಗಳಿಗೆ ಕಾರಣವಾಗುವ ಮೂಢನಂಬಿಕೆಗಳು, ಅಂಧ-ಸಂಪ್ರದಾಯಗಳ ಬಗೆಗೆ ಯಾವುದೇ ಪಕ್ಷಪಾತ ಮನೋಭಾವವಿಲ್ಲದೆ, ಪ್ರತಿಕ್ರಿಯೆ ವ್ಯಕ್ತಪಡಿಸಿ, ಅವುಗಳ ಪರಿಹಾರಕ್ಕೆ ಸೂಕ್ತ ಮಾರ್ಗದರ್ಶನ ನೀಡುವ ಸುಧಾರಣವಾದಿ ಗೊರೂರರು. ಈ ಮಾತಿಗೆ ನಿದರ್ಶನವಾಗಿ ವೈದಿಕರಲ್ಲಿ ರೂಢಿಯಲ್ಲಿರುವ ಕೆಲವು ಆಚರಣೆಗಳನ್ನು ಹೇಳುತ್ತಾರೆ.

೧. ವಿಧವೆಯರ ಬಗ್ಗೆ ಆ ಸಮಾಜ ವ್ಯಕ್ತಪಡಿಸುವ ಅಮಾನುಷ ವರ್ತನೆ.

೨. ವೈದಿಕರಲ್ಲಿ ರೂಢಿಯಲ್ಲಿರುವ ಶವಸಂಸ್ಕಾರದ ಬಗ್ಗೆ ಗೊರೂರು ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ; "ಸತ್ತ ಮೇಲೆ ಶವಸಂಸ್ಕಾರ ಇದೆಯಲ್ಲ ಇದಕ್ಕೆ ನಮ್ಮ ಊರು ಬ್ರಾಹ್ಮಣರಲ್ಲಿ ಇರುವ ನಚ್ಚು, ವೆಚ್ಚ ಹೇಳತೀರದು. ಸತ್ತವನೇನೋ ಸತ್ತ, ಎಂದರೆ ಅವನ ಕರ್ಮಾಂತರ ಮಾಡಿ ವೈದಿಕರಲ್ಲಿ ಸರಿ ಎನಿಸಿಕೊಳ್ಳಬೇಕಾದರೆ ಅವನ ವಾರಸುದಾರನೂ ಸಾಯಲೇಬೇಕು. ಆಗ ಸತ್ತ ಪ್ರಾಣಿಯನ್ನು ದಾರಿಯಲ್ಲಿ ಸಾವಿರಾರು ಪಿಶಾಚಿಗಳು ಅಡ್ಡಗಟ್ಟುತ್ತವೆ. ಅವುಗಳಿಗೆಲ್ಲಾ ಪ್ರಾಯಶ್ಚಿತ್ತ ಶಾಂತಿ ಆಗಬೇಕು. ಸತ್ತವನು ಮೇಲಿನ ಲೋಕದಲ್ಲಿ ಪೈರು ಪಚ್ಚೆ ಬೆಳೆದುಕೊಳ್ಳಲು ಇಲ್ಲಿ ಭೂದಾನ, ವಸ್ತ್ರದಾನ, ಸುವರ್ಣದಾನ, ಕೊಡಬೇಕು. ಸತ್ತವನ ಆತ್ಮಕ್ಕೆ ದಾರಿಯಲ್ಲಿ ಬಿಸಿಲಾಗದಂತೆ ಇಲ್ಲಿ ವೈದಿಕರಿಗೂ ಪುರೋಹಿತರಿಗೂ ಛತ್ರಿದಾನ ಮಾಡಬೇಕು. ಕಾಲು ಸುಡದಂತೆ ಜೋಡಿನ ದಾನ ಕೊಡಬೇಕು. ಹೀಗೆ ಇನ್ನೂ ಪುರೋಹಿತರಿಗೆ ಏನೇನು ತೋರುತ್ತದೆಯೋ ಆ ದಾನಗಳನ್ನು ಕೊಟ್ಟು, ಪರವಾಗಿಲ್ಲ ಸತ್ತವನು ಕೈಲಾಸಕ್ಕೋ ವೈಕುಂಠಕ್ಕೋ ಹೋಗಲಿ ಎನ್ನಿಸಬೇಕಾದರೆ ಕರ್ಮಾಂತರ ಮಾಡುವವನಿಗೇ ಕರ್ಮಾಂತರವಾಗಿ ಹೋಗುತ್ತದೆ".[೨]- ಮೇಲೆ ಹೇಳಿದ ಆಚರಣೆಗಳನ್ನು ಶವಸಂಸ್ಕಾರದ ಸಮಯದಲ್ಲಿ ಆಚರಿಸಲೇಬೇಕು. ತಪ್ಪಿದರೆ ಅಂಥವರನ್ನು ಊರಿನಿಂದಲೇ ಬಹಿಷ್ಕರಿಸುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ, ಕಡುಬಡತನದಿಂದ ನರಳುತ್ತಿದ್ದ ಅರ್ಚಕ ಲಕ್ಷ್ಮೀಪತಿ ಭಟ್ಟನ ಹೆಂಡತಿಯು ಸಂಪ್ರದಾಯಬದ್ಧವಾಗಿ ತನ್ನ ಗಂಡನ ಶವಸಂಸ್ಕಾರ ಮಾಡಲಾಗಲಿಲ್ಲ. ಪರಿಣಾಮ ಆಕೆಯನ್ನೂ, ಆಕೆಯ ಮಗಳನ್ನೂ ಊರಿನಿಂದಲೇ ಬಹಿಷ್ಕರಿಸುತ್ತಾರೆ. ಅಪಮಾನ ತಾಳಲಾರದೆ ಅದೇ ದಿನ ರಾತ್ರಿ ತಾಯಿ ಮಗಳಿಬ್ಬರೂ ಬಾವಿಗೆ ಹಾರಿ, ಆತ್ಮಹತ್ಯೆ ಮಾಡಿಕೊಂಡ ಸನ್ನಿವೇಶ ಅತ್ಯಂತ ಘೋರವಾಗಿದ್ದು, ಈ ಧರ್ಮದಿಂದ ಅಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ. ಈ ಘಟನೆಗೆ ಒಂದು ಪರಿಹಾರದ ರೀತಿಯಲ್ಲಿ, ರಾಮಣ್ಣನವರ ಮೂಲಕ ಗೊರೂರರು "ನೀವೆಲ್ಲಾ ಅಪರಕರ್ಮ ಮಾಡಿಸುವುದನ್ನು ಕಲಿತುಬಿಡಿ. ನಾನು ಹೇಳಿಕೊಡುತ್ತೇನೆ. ಎಲ್ಲಿ ಹೆಣ ದಿಕ್ಕಿಲ್ಲದೆ ಬಿದ್ದಿದ್ದರೂ ಅದಕ್ಕೆ ನೀವೇ ಮುಂದಾಳಾಗಿ ಕರೆಸಿಕೊಳ್ಳದೆ ದಕ್ಷಿಣೆ

---

೧ ಹೇಮಾವತಿ ತೀರದಲ್ಲಿ ಮತ್ತ ಇತರ ಪ್ರಬಂಧಗಳು. ಪು. ೫೩.

೨. ನಮ್ಮ ಊರ ರಸಿಕರು. ಪು. ೩೦.

ತೆಗೆದುಕೊಳ್ಳದೆ ಶಾಸ್ತ್ರೋಕ್ತವಾಗಿ ಕರ್ಮ ಮಾಡಿಸಿ'''[೧]- ಎನ್ನುತ್ತಾರೆ. ಇಲ್ಲಿ ಗೊರೂರರ ಚಿಂತನೆ, ಒಬ್ಬ ಸುಧಾರಣಾವಾದಿಯಾಗಿ ಕೆಲಸ ಮಾಡುತ್ತಿರುವುದನ್ನು ಗುರುತಿಸಬಹುದು. ಗೊರೂರರು 'ಹಳ್ಳಿಯ ಚಿತ್ರ'ಗಳನ್ನು ಬರೆದ ಕಾಲದಲ್ಲಿ ಬ್ರಾಹ್ಮಣ ವರ್ಗದವರಲ್ಲಿ ಮಡಿ-ಮೈಲಿಗೆಗಳು ಪ್ರಬಲವಾಗಿ ಬೇರೂರಿತ್ತು. ಗೊರೂರರ ಅನೇಕ ಪ್ರಸಂಗಗಳಿಗೆ ಈ ಮಡಿಯ ವಿಷಯ ಬಲವಾದ ಸಾಮಗ್ರಿಯನ್ನೊದಗಿಸಿದೆ. 'ನಮ್ಮ ಭಾವನವರು ತಂದ ತಿಂಡಿ' ಎಂಬ ಚಿತ್ರದಲ್ಲಿ ಶೂದ್ರನೊಬ್ಬ ತಿಂಡಿಯ ಬುಟ್ಟಿಯನ್ನು ಹೊತ್ತು ತಂದಾಗ ತಿಂಡಿ ಎಲ್ಲಾ ಮೈಲಿಗೆಯಾಯಿತು ಎಂದು ಅದನ್ನು ಮುಟ್ಟದಿದ್ದಾಗ ಅದೇ ಮನೆಯ ಹುಡುಗರು ತಿಂಡಿಯನ್ನು ಗುಟ್ಟಾಗಿ ತಿಂದು ಹಾಕಿದ್ದು ಯುವ ಪೀಳಿಗೆ ಬದಲಾವಣೆಯತ್ತ ದೃಷ್ಟಿ ಹರಿಸಿರುವುದನ್ನು ಸೂಚಿಸುತ್ತಾರೆ. ಬ್ರಾಹ್ಮಣರು ಶ್ರಾದ್ಧದ ದಿನ ಊಟ ಮಾಡುವಾಗ ಅವರ ಮನೆಗೆ ಬಂದ ರೈತನೊಬ್ಬನು ಅವರು ಶ್ರಾದ್ಧದೂಟ ಮಾಡುತ್ತಿರುವುದನ್ನು ಕಿಟಕಿಯಿಂದ ನೋಡಿ 'ಉಣ್ತೇರ ಬುದ್ಧಿ, ಉಣ್ಣಿ, ಉಣ್ಣಿ,' ಎಂದು ಹೇಳುತ್ತಾನೆ. ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತೆ ಆಗಿ ಯೋಚಿಸಲಾರಂಭಿಸಿ ಶ್ರಾದ್ಧದ ದಿವಸ ಶೂದ್ರನೊಬ್ಬನು ಬ್ರಾಹ್ಮಣರ ಎಲೆಯನ್ನು ನೋಡಿಬಿಟ್ಟ, ಶ್ರಾದ್ಧವೆಲ್ಲಾ ಕೆಟ್ಟುಹೋಯಿತು ಎಂದು ಇದ್ದ ಬದ್ದ ಎಲ್ಲಾ ಶಾಸ್ತ್ರ ಗ್ರಂಥಗಳನ್ನು ಹುಡುಕಿ ಇದಕ್ಕೆ ಏನಾದರೂ ಪರಿಹಾರ ಸೂಚಿಸಿದ್ದಾರೆಯೇ ಎಂಬ ಪೇಚಾಟ ನಗು ಬರಿಸುವಂಥದ್ದು. ಹೀಗೆ ತಮ್ಮ ಜನಾಂಗದಲ್ಲಿ, ಬೇರು ಬಿಟ್ಟಿರುವ ಹಲವಾರು ಸಾಮಾಜಿಕ ಪಿಡುಗುಗಳಿಗೆ ತೀವ್ರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುವ ಗೊರೂರರು ಇವುಗಳ ಸುಧಾರಣೆ ಮಾಡುವ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ.

ಗೊರೂರರು ತಮ್ಮ ಕಾಲದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದ ಸಂಚಾರಿ ಚಲನ ಚಿತ್ರಮಂದಿರಗಳನ್ನೂ, ಅವುಗಳ ಸ್ಥಿತಿಗತಿಗಳನ್ನೂ, ಹಾಗೂ ಗ್ರಾಮೀಣ ಬದುಕಿನಲ್ಲಿ ಅವುಗಳಿಗಿದ್ದ ಪ್ರಾಮುಖ್ಯತೆಯನ್ನು ಕುರಿತು ಹೇಳಿದ್ದಾರೆ. ಜನಪದರಲ್ಲಿ ಪರಂಪರಾಗತವಾಗಿ ಉಳಿದು ಬಂದಿರುವ ಯಕ್ಷಗಾನ ಬಯಲಾಟ, ತೊಗಲು ಗೊಂಬೆಯಾಟ, ಸೂತ್ರಗೊಂಬೆಯಾಟ ಕೋಲಾಟ ಮತ್ತು ಸುಗ್ಗಿಯ ಕುಣಿತ ಇವೇ ಮೊದಲಾದ ಹಳ್ಳಿಯ ವಿನೋದಗಳಿಗೆ ಹೊರಗಿನದಾದ , ವಿಭಿನ್ನವಾದ ಸಿನಿಮಾ (ಪರದೆ ಭೂತ) ಪ್ರಪಂಚಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ತಮ್ಮ 'ಸಂಚಾರಿ ಚಲನ ಚಿತ್ರಗಳು' ಎಂಬ ಪ್ರಬಂಧದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಟೂರಿಂಗ್ ಟಾಕೀಸ್‌ನವರದ್ದೆ ಒಂದು ರಂಜಕ ಪ್ರಪಂಚ. ಅದಕ್ಕೆ ಬೇಕಾದ ಡೇರಗಳು ಲೈಸನ್ಸ್‌ಗಾಗಿ ಪರದಾಡುವುದು. ಗ್ರಾಮೀಣ ಜನರಿಗೆ ರುಚಿಸುವ ಕಥೆಗಳ ಆಯ್ಕೆ, ಪದೇ ಪದೇ ಡೈನಾಮೊ ಕೈಕೊಟ್ಟಾಗ ಹಣವನ್ನು ವಾಪಸ್ಸುಕೊಡದೆ ನಿಲ್ಲಿಸಿಕೊಳ್ಳುವ ತಂತ್ರ, ಕಾಂಪ್ಲಿಮೆಂಟರಿ ಪಾಸುಗಳ ಅವಾಂತರ ಇತ್ಯಾದಿ ಬಿಡಿ ಬಿಡಿಯಾದ ಅನುಭವಗಳನ್ನು ಕೊಟ್ಟು, ಅದು ಗ್ರಾಮೀಣ ಜನರಿಗೆ ಕೊಡುವ ಸಂತೋಷವನ್ನು ಪ್ರಮುಖವಾಗಿಸುತ್ತಾರೆ.

**೩. ಒಡನಾಟ ಸಮಾಜ**

ಹಳ್ಳಿಗಳಲ್ಲಿ ತಾಂಡವವಾಡುತ್ತಿರುವ ಅಜ್ಞಾನ, ಮೂಢನಂಬಿಕೆಗಳು, ಬಡತನ

---

೧. ನಮ್ಮ ಊರ ರಸಿಕರು, ಪು. ೩೧.

ಇವುಗಳ ಅರಿವು ಗೊರೂರರಿಗಿದೆ. ವರ್ಗ ಸಂಘರ್ಷ ಹಾಗೂ ಹಳ್ಳಿಯ ಸಾಂಪ್ರದಾಯಿಕ ದ್ವೇಷ ಇವೇ ಮುಂತಾದ ಸಮಸ್ಯೆಗಳು ಗ್ರಾಮೀಣ ಜನರನ್ನು ಕಾಡುತ್ತಿವೆ. ಈ ಮಾತುಗಳಿಗೆ ಪೂರಕವಾಗಿ ಗೊರೂರರ 'ಬೂತಯ್ಯನ ಮಗ ಅಯ್ಯು' ಒಂದು ಉತ್ತಮ ನಿದರ್ಶನ.

ಗ್ರಾಮೀಣ ಜನರನ್ನು ಕಿತ್ತು ತಿನ್ನುತ್ತಿರುವ ಬಡತನವನ್ನು ಗೊರೂರರು ಸಮರ್ಥರೀತಿಯಲ್ಲಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಈ ಮಾತಿಗೆ ನಿದರ್ಶನವಾಗಿ ಶೀನಪ್ಪ ಮತ್ತು ಆತನ ಗೆಳೆಯರು ತಮ್ಮ ಕೆಲಸ ತಾವೇ ಮಾಡಿಕೊಳ್ಳಬೇಕು ಎಂಬ ತಮ್ಮ ನಿಲುವನ್ನು ಸಮರ್ಥಿಸಲು ಬೀದಿ ಗುಡಿಸುವ ನಿಂಗನನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ಆದರೆ ಅದರಿಂದಾದ ಪರಿಣಾಮವೆಂದರೆ ನಿಂಗನ ಒಪ್ಪತ್ತಿನ ಕೂಳಿಗೂ ಸಂಚಕಾರ ಬರುತ್ತದೆ. ಹೆಂಡತಿ ಮಕ್ಕಳ ಹಸಿವಿನ ಸಂಕಟವನ್ನು ನೋಡಲಾರದ ನಿಂಗ, ಶೀನಪ್ಪನ ಬಳಿಗೆ ಬಂದು "ಬುದ್ಧಿ ಬಡವನ ಹೊಟ್ಟೆ ಮೇಲೆ ಹೊಡೆದು ಬಿಟ್ಟರಿ, ಮನೆಯಲ್ಲಿ ಹೆಂಡತಿ ಮಕ್ಕಳು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಬೀದಿ ಗುಡಿಸುವ ಸಂಬಳ ನೀವು ಮನಸ್ಸು ಮಾಡಿದರೆ ಉಂಟು ಇಲ್ಲದಿದ್ದರೆ ಇಲ್ಲ. ನನ್ನ ಹೆಂಡತಿ ಮೈಮೇಲೆ ಸೀರೆ ಇಲ್ಲ. ಮಕ್ಕಳು ಚಳಿಯಿಂದ ನಡುಗುತ್ತಾ ಇವೆ. ಊಟ ಮಾಡಿ ಮೂರು ದಿವಸ ಆಯ್ತು, ನನ್ಗೇನು? ಹೇಗಾದ್ರೂ ಆಗ್ತದೆ ಬುದ್ಧಿ ಆದರೆ ಹೆಂಡತಿ ಮಕ್ಕಳು ಸಾಯೋದನ್ನ ನೋಡಲಾರೆ"[೧] ಎಂದನು.

ಗೊರೂರರು ಒಂದು ಕಡೆ ಹಸಿವಿನ ಸಂಕಟವನ್ನು ಪರಿಚಯಿಸಿದರೆ ಮತ್ತೊಂದು ಕಡೆ ಪುಷ್ಕಳವಾಗಿ ತಿನ್ನುವ ಜನರ ಪರಿಚಯ ಮಾಡಿದ್ದಾರೆ. ಉದಾಹರಣೆಗೆ "ನಮ್ಮ ಊರು ರಥೋತ್ಸವ ಕಾಲದಲ್ಲಿ ಬ್ರಾಹ್ಮಣೋತ್ತಮರು ಊಟಮಾಡಿ ಹೊಟ್ಟೆಬಿಟ್ಟುಕೊಂಡು ನಿಂತಿರುವುದನ್ನು ನೋಡಿ ಗೌಡರೆಲ್ಲಾ, ಅಯ್ನೋಳ್ಗೆ ಊಟ ಅಂದರೆ ತೀರಿತು. ಯಾವುದೆಲ್ಲಾದ್ರೂ ಪೋಗ್ಲಿ, ಹೊಟ್ಟೆ, ತಿಂದು ತಿಂದು ಕಂಚಿನಂತೆ ಕಣೆಗುಟ್ಟುತ್ತಿದೆ"[೨]. ಎಂದು ಹಾಸ್ಯ ಮಾಡುತ್ತಾರೆ. ಮತ್ತೊಂದು ಸಂದರ್ಭದಲ್ಲಿ ಗೊರೂರಿನ ರೈತರ ಶ್ರೀಮಂತಿಕೆಯನ್ನು ಹೇಗೆ ಅಳೆಯುತ್ತಿದ್ದರು. ಅವನ ಮನೆಯ ವೈಭವವನ್ನು ಹೇಳಬೇಕಾದರೆ ಹಳ್ಳಿಯವರು- ಮೂರು ಬೆಟ್ಟು ಎಣ್ಣೆಯನ್ನು ಬಿಟ್ಟು ಗಣಾರಾಧನೆ ಮಾಡಿದ ಅವನಿಗೇನು ಕಡಿಮೆ? ಎನ್ನುತ್ತಾರೆ. ಹೀಗೆ ಗೊರೂರರ ಜಾನಪದ ಪರಿಸರದಲ್ಲಿ ಒಂದು ಕಡೆ ಕಡುಬಡತನ, ಆಹಾರದ ಅಭಾವ ಕಂಡು ಬಂದರೆ, ಮತ್ತೊಂದು ಕಡೆ ಆಹಾರದ ಹೆಚ್ಚಳ, ಜೋಡಿದಾರರ, ಜಮೀನ್ದಾರರ ಶ್ರೀಮಂತಿಕೆ ಕಂಡು ಬರುತ್ತವೆ. ಹೀಗೆ ಸಾಮಾಜಿಕ ವೈರುಧ್ಯಗಳನ್ನು ಕಟ್ಟಿಕೊಡುವುದು ಗೊರೂರರ ವೈಶಿಷ್ಟ್ಯ.

ಗ್ರಾಮೀಣ ಮುಗ್ಧ ಜನರಿಗೆ, ಅದರಲ್ಲಿಯೂ ವ್ಯವಸಾಯಗಾರರಿಗೆ ಪಟೇಲ ಮತ್ತು ಶ್ಯಾನುಭೋಗರೆಂದರೆ ಎಲ್ಲಾ ಆಗಿರುತ್ತಾರೆ. ಅದರಲ್ಲೂ ಶ್ಯಾನುಭೋಗನ ಕಾರುಬಾರು ಕೇಳುವಂತಿಲ್ಲ. ಶ್ಯಾನುಭೋಗರು ಅಷ್ಟು ವಿದ್ಯಾವಂತರಲ್ಲದಿದ್ದರೂ ಚತುರರಾದ ವ್ಯವಹಾರಜ್ಞಾನಿಗಳು. ಅವರ ಅಸಾಧಾರಣವಾದ ಕಾರ್ಯಸಾಧನೆ ಮತ್ತು ಚಾಣಕ್ಷತನದ

---

೧ ನಮ್ಮ ಊರ ರಸಿಕರು. ಪು. ೬೨.

೨. ನಮ್ಮ ಊರ ರಸಿಕರು. ಪು. ೮೧.

ಮುಂದೆ ಸರ್ಕಾರದ ರೆವಿನ್ಯೂ ಹಾಗೂ ಪೋಲೀಸ್ ಅಧಿಕಾರಿಗಳೂ ಹಲವು ವೇಳೆ ಮೂಕರಾಗಬೇಕಾಗುತ್ತಿತ್ತು. ಎನ್ನುವುದಕ್ಕೆ ಗೊರೂರರ 'ಮೆರವಣಿಗೆ' ಕಾದಂಬರಿಯಲ್ಲಿ ಮಂತ್ರಿಗಳು ಬರುವ ದಿನ ಚಪ್ಪರ ಹಾಕಿಸುವುದಕ್ಕೆ ಅಮಲ್ದಾರರು ಮಾಡಿದ ಪ್ರಯತ್ನವೆಲ್ಲಾ ವಿಫಲವಾಯಿತು. ಆಗ ಅವರು ಶ್ಯಾನುಭೋಗನ ಮೊರೆ ಹೊಕ್ಕಾಗ ಒಂದು ರಾತ್ರಿಯೊಳಗಾಗಿ ಮೂರು ಮೈಲಿಗಳವರೆಗೆ ಕಾಣುವ ಸುಂದರವಾದ ಪೆಂಡಾಲು ಸಿದ್ಧವಾಯಿತು! ಹಾಗಾದರೆ ಈ ಶ್ಯಾನುಭೋಗರ ವ್ಯವಹಾರ ಚತುರತೆಗೆ ಕಾರಣವೇನು? ಜನತೆಯ ಅಜ್ಞಾನ ಮತ್ತು ಮೇಲಾಧಿಕಾರಿಗಳ ದರ್ಪ ಎಂಬುದೇ ಉತ್ತರವಾಗುತ್ತದೆ. ಅಂದಿನ ಸಮಾಜಗ ಜನತೆಯ ಜ್ಞಾನದ ಮಟ್ಟವನ್ನು ಪರಿಚಯ ಮಾಡಿಕೊಡುವ ಗೊರೂರರ ಮಾತುಗಳು ಹೀಗಿವೆ; ''ಅಲ್ಲಿ ನೆರೆಯುವ ವಿದ್ವಾಂಸರೆಲ್ಲಾ ಸರಸ್ವತಿಯ ಅವತಾರಗಳೇ. ಒಬ್ಬನು ಮಿತಾಕ್ಷರಿ. ಒಬ್ಬನು ಹತಾಕ್ಷರಿ, ಒಬ್ಬನು ಅಕ್ಷರ ಲಂಬಕ, ಒಬ್ಬನು ಅಕ್ಷರ ಹಿಂಸಕ, ಇನ್ನೊಬ್ಬನು ಅಕ್ಷರ ಭಕ್ಷಕ. ಯಾರ ಬಾಯಲ್ಲೂ ಮಾತುಗಳು ಸರಿಯಾಗಿ ಹೊರಡುವುದಿಲ್ಲ. ಒಬ್ಬನ ಕೈಯಲ್ಲಿ ರುಜು ಹಾಕು ಎಂದು ಕಡ್ಡಿಕೊಟ್ಟರೆ ತೀರಿತು. ಮುಖವನ್ನು ವಿಕಾರ ಮಾಡಿಕೊಂಡು ಕಾಗದ ಹರಿಯುವಂತೆ ಸದ್ದು ಮಾಡುತ್ತಾ ರೊಯ್ ಶಬ್ದ ಹೊರಡಿಸುತ್ತಾನೆ''[೧] ಈ ಮಾತುಗಳಲ್ಲಿ ಗ್ರಾಮೀಣ ಪರಿಸರದ ಬದುಕಿನಲ್ಲಿ ಕಂಡುಬರುವ ಅವಿದ್ಯೆ ಹಾಗೂ ಅಜ್ಞಾನವನ್ನು ಲೇವಡಿ ಮಾಡಿದಂತೆ ಕಂಡು ಬಂದರೂ, ಗ್ರಾಮೀಣ ಜನರ ಬದುಕಿನಲ್ಲಿ ಆಗಬೇಕಾದ ಸುಧಾರಣೆಯ ಬಗ್ಗೆ ಗೊರೂರರು ಅಪಾರ ಕಾಳಜಿಯನ್ನು ವ್ಯಕ್ತಪಡಿಸುತ್ತಿರುವುದನ್ನು ಗಮನಿಸಬೇಕು.

**೪. ವ್ಯಕ್ತಿ ಸಮಾಜ**

ಗೊರೂರರು ಒಬ್ಬ ಸಾಹಿತಿ ಮಾತ್ರವಲ್ಲದೆ ಜಾನಪದ ಪರಿಸರ ಹಾಗೂ ಜನಪದ ಆಶಯಗಳನ್ನು ಪುನರ್ ನಿರ್ಮಿಸಿ ಕೊಡುವ ಜಾನಪದ ಚಿಂತಕರೂ ಆಗಿದ್ದಾರೆ. ಈ ಮಾತಿಗೆ ನಿದರ್ಶನವಾಗಿ ಅವರ ವೈಯ್ಯಾರಿ, ಉಸುಬು, ಶಿವರಾತ್ರಿ, ಕನ್ಯಾಕುಮಾರಿ- ಕಥಾಸಂಕಲನಗಳನ್ನು ಮೆರವಣಿಗೆ, ಪುನರ್ಜನ್ಮ ಮತ್ತು ಹೇಮಾವತಿ ಕಾದಂಬರಿಗಳನ್ನು ಹಳ್ಳಿಯ ಚಿತ್ರಗಳು, ನಮ್ಮೂರ ರಸಿಕರು, ಬೈಲಹಳ್ಳಿ ಸರ್ವೆ, ಗರುಡಗಂಬದ ದಾಸಯ್ಯ, ಬೆಸ್ತರ ಕರಿಯ, ಹೇಮಾವತಿಯ ತೀರದಲ್ಲಿ- ಇವೇ ಮೊದಲಾದ ಪ್ರಬಂಧ ಸಂಕಲನಗಳನ್ನು ಹೆಸರಿಸಬಹುದು. ಕನ್ಯಾಕುಮಾರಿ ಕಥಾಸಂಕಲನದ 'ಕ್ಷಮೆ' ''ಮುಳ್ಳುಗಿಡ' 'ಕಾಮಧೇನುವಿನ ಕೃಪೆ' ಮತ್ತು ಕಾನ್‌ಸ್ಟೇಬಲ್ ಕೆಂಪಯ್ಯನಿಗೆ ಬಿದ್ದ ತಪರಾಕು ಕಥೆಗಳು- ಇದನ್ನು ಸ್ಪಷ್ಟಪಡಿಸುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ನಗರೀಕರಣದಿಂದ ಆಗುವ ಗೊಂದಲ ಮತ್ತು ಅಪಾಯವನ್ನು ಚಿತ್ರಿಸಿಕೊಡುವಾಗ ನಗರ ಮತ್ತು ಗ್ರಾಮವನ್ನು ಎರಡು ಕೇಂದ್ರಗಳಲ್ಲಿಟ್ಟು ಪರಸ್ಪರ ಹೋಲಿಸಿ ವಿವೇಚಿಸುತ್ತಾರೆ. ನಗರ ಜೀವನದ ಅನುಭವವೂ ಇರುವ ಗೊರೂರರಿಗೆ, ಆ ಜೀವನ ಒಂದು ವೈಶಿಷ್ಟ್ಯ ಅಥವಾ ಸಂಸ್ಕೃತಿ ಎಂದು ಅನ್ನಿಸುವುದೇ ಇಲ್ಲ. ಅದು ನೀರಿನಂತೆ ಹರಿದು ಹೋಗುವ ಒಂದು ಜೀವನ ವಿಧಾನ ಎನಿಸುತ್ತದೆ. ಈ ಕಾರಣಕ್ಕಾಗಿಯೇ ಗೊರೂರರ ದೃಷ್ಟಿಯಲ್ಲಿ ವ್ಯಕ್ತಿತ್ವಗಳು ಹಳ್ಳಿಯಲ್ಲಿ

---

೧ ಮೆರವಣಿಗೆ. ಪು. ೭.

ಸೃಷ್ಟಿಯಾಗುತ್ತವೆ. ಪಟ್ಟಣಗಳಲ್ಲಿ ನಿರಸನ ಹೊಂದುತ್ತವೆ.

'ಕ್ಷಮೆ' ಕಥೆಯ ಹನಮಂತು ಈ ಕೇಂದ್ರಗಳ ಅಂತರದ ವಿಶಿಷ್ಟ ವ್ಯಕ್ತಿ ಎನಿಸಿಕೊಳ್ಳುತ್ತಾನೆ. 'ಅವನಿಗೆ ನೆಮ್ಮದಿ ಸಾಧ್ಯವಾಗುವುದು ತನ್ನ ತುಂಬು ನೆಲ ಮತ್ತು ಮುಕ್ತ ಪ್ರಜ್ಞೆಯಲ್ಲಿಯೇ. ಈ ಮುಗ್ಧ ಹಳ್ಳಿಯ ಗೃಹಿಣಿಯಲ್ಲಿ ಗೊರೂರರು ಗ್ರಾಮೀಣ ಭದ್ರತೆಯನ್ನು ಕಾಣುತ್ತಾರೆ. 'ಮುಳ್ಳುಗಿಡ' ಕಥೆ ಇದಕ್ಕೆ ಮತ್ತೊಂದು ಉದಾಹರಣೆ. ವಿದ್ಯೆ ಮತ್ತು ಸೌಂದರ್ಯದಲ್ಲಿ ವಿಶಿಷ್ಟತೆಯನ್ನು ಹುಡುಕದ ಈ ಕಥಾನಾಯಕ, ಅದರಿಂದ ಬಹುಬೇಗ ನಿರಾಶೆಗೆ ಒಳಗಾಗುತ್ತಾನೆ. ಆ ವಿದ್ಯೆಯ ಜ್ಞಾನ ಮತ್ತು ಚಟುವಟಿಕೆ ಅವನಿಗೆ ಒಂದು ಭಯವೇ ಆಗುತ್ತದೆ. ತುಂಬ ತುರ್ತಿನಲ್ಲಿ ಈ ಬದುಕಿನಿಂದ ಪಲಾಯನಗೊಂಡು ವಾಪಸ್ಸಾಗುವುದು, ತಾನೇ ಕಟ್ಟಿಕೊಂಡ ಮುಳ್ಳುಗಿಡದ ಕಡೆಗೆ. ಈ ಮುಳ್ಳುಗಿಡ ಕಥಾನಾಯಕಿಯೇ ಆಗಿದ್ದು, ಅವಳು ಮುಗ್ಧ ಪ್ರೇಮದ ನೆಮ್ಮದಿಯ ಬದುಕಿನ ಆಶಯವಾಗುತ್ತಾಳೆ. ಈ ಹಳ್ಳಿಯ ಹೆಣ್ಣಿನಲ್ಲಿ ಜೀವನ ನೆಮ್ಮದಿಯನ್ನು ಕಂಡು ಕೊಂಡ ನಾಯಕ ಒಂದರ್ಥದಲ್ಲಿ ಗೊರರರ ಚಿಂತನೆಗೆ ಶರಣಾದವನು. ಗ್ರಾಮೀಣ ಬದುಕಿಗೆ ಹೊರತಾಗಿ ಬದುಕುವಂತವರೆಲ್ಲಾ ಮತ್ತೆ ಒಳಗೆ ಬರುತ್ತಾರೆ.

ಸಾಂಪ್ರದಾಯಿಕ ಒತ್ತಾಯಕ್ಕಾಗಿ ಮುದುಕನನ್ನು ಮದುವೆಯಾದ 'ಪುಂಗಿ' ಕಥೆಯ ನಾಯಕಿ ಮೊದ ಮೊದಲಿಗೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದರೂ ನಂತರ ಗಂಡನಲ್ಲಿ ಪವಿತ್ರತೆಯನ್ನು ಕಾಣುತ್ತಾಳೆ. ಎಷ್ಟರಮಟ್ಟಿಗೆ ಎಂದರೆ ಅವಳ ಬಾಲ್ಯದ ಮತ್ತು ಯೌವ್ವನದ ಬದುಕು ಈಗಿನ ಬದುಕಿಗೆ ಸಂಪೂರ್ಣ ಬೇರೆ ಎಂಬಂತೆ. ಹೀಗೆ ಗೊರೂರರು ಹುಡುಕುವ ನೆಮ್ಮದಿಯ ಪುಣ್ಯಭೂಮಿ ಗ್ರಾಮಸಂಸ್ಕೃತಿಯೇ ಆಗಿರುತ್ತದೆ. ಮತ್ತೊಂದು ಅರ್ಥದಲ್ಲಿ ಒಪ್ಪಿತ ಭಾರತೀಯ ಸಂಸ್ಕೃತಿಯೇ ಆಗಿದೆ. ಹೀಗೆ ಪಾರಂಪರಿಕ ಜಾನಪದ ಆಶಯಗಳನ್ನು ಹೆಕ್ಕಿತೆಗೆದು ಮತ್ತೆ ಅವುಗಳನ್ನು ಪುನರ್‌ಸೃಷ್ಟಿಸುವ ರೀತಿಗೆ 'ಕಾಮಧೇನು' ಕಥೆ ಒಂದು ಸ್ಪಷ್ಟ ಉದಾಹರಣೆ. ಪುರಾಣ ಸಂಸ್ಕೃತಿಯ ಮಹತ್ವದ ಆಕಾಂಕ್ಷಿಯಾದ 'ಕಾಮಧೇನು' ಇಲ್ಲಿ ಒಬ್ಬ ಸಾಮಾನ್ಯ ಜನಪದನ ಕಾಮಧೇನುವಾಗಿ ರೂಪಾಂತರಗೊಂಡಿದೆ. ಬೆಳೆಯುತ್ತಿರುವ ಬದುಕಿನೊಡನೆ ಹೋಲಿಸಿದಾಗ ಒಂದು ಹಸು ಒಬ್ಬ ವ್ಯಕ್ತಿಗೆ ಒಂದು ಸಾಮಾನ್ಯ ಆದಾಯ. ಆದರೆ ಗೊರೂರರ ಜಾನಪದ ಪರಿಸರದೊಳಗೆ ಮತ್ತು ಅವರು ಕಂಡ ಗ್ರಾಮೀಣ ಬದುಕಿನಲ್ಲಿ ಆ ಹಸು ಕಾಮದೇನು. ಅದು ವ್ಯಕ್ತವಾಗಿರುವುದು ಒಂದು ಕುಟುಂಬದ ಅಭಿವೃದ್ಧಿಯ ಸಂಕೇತವೇ ಆಗಿದೆ. ಪುರಾತನ ಪುರಾಣವನ್ನು ಸಮಕಾಲೀನ ಸಂದರ್ಭಕ್ಕೆ ಸೃಷ್ಟಿಸಿಕೊಡುವ ಗೊರೂರರ ಈ ಮನೋಧರ್ಮದಲ್ಲಿ ಜನಪದ-ಜಾನಪದ ಪುನರ್ ಸೃಷ್ಟಿಯನ್ನು ಕಾಣಬಹುದು.

'ಕಾನ್‌ಸ್ಟೇಬಲ್ ಕೆಂಪಯ್ಯನಿಗೆ ಬಿದ್ದ ತಪರಾಕು' ಮೇಲು ನೋಟಕ್ಕೆ ಒಂದು ವಿವರದಂತೆ ಕಂಡು ಬಂದರೂ ಕೆಂಪಯ್ಯ ಗೊರೂರರ ತೆಕ್ಕೆಯೊಳಗೆ ಸೃಷ್ಟಿಯಾಗುತ್ತಾನೆ ಎಂದು ಒಮ್ಮೊಮ್ಮೆ ಅನಿಸಿದರೂ ಗ್ರಾಮೀಣ ಸಮಾಜದಲ್ಲಿ ನೌಕರ ವರ್ಗ ಉಂಟು ಮಾಡುವ ದಾಂಧಲೆಗೆ ಸಮರ್ಥವಾದ ಪ್ರತಿಕ್ರಿಯೆಯನ್ನು ನೀಡಿರುವ ಕಥೆ ಇದು. ಸ್ವಾತಂತ್ರ್ಯಪೂರ್ವದಲ್ಲಿ ಹಳ್ಳಿಗೆ ಪ್ರವೇಶ ಮಾಡಿದ ಚಿಕ್ಕ ನೌಕರ ವರ್ಗ ಶೋಷಣೆಯಲ್ಲಿ

ದೊಡ್ಡ ಯಜಮಾನ ವರ್ಗವಾದ ರೀತಿ ಇಲ್ಲಿನ ತಾತ್ವಿಕತೆ.

ಗ್ರಾಮಜೀವನವನ್ನು ಸದಾವಹಿಸಿಕೊಳ್ಳುವ, ಅದರ ಪರವಾಗಿ ನಿಲ್ಲುವ ಗೊರೂರರ ಮನೋಧರ್ಮ ಈ ನೌಕರ ವರ್ಗವನ್ನು ತರಾಟೆಗೆ ತೆಗೆದುಕೊಂಡಿದೆ ಎನ್ನಿಸುವುದೂ ಉಂಟು. ಆದರೆ ಇದು ವಾಸ್ತವ ಸ್ಥಿತಿ. ಹೀಗೆ ಗ್ರಾಮೀಣ ಸಂಸ್ಕೃತಿಯ ವಿಶಿಷ್ಟತೆಯನ್ನು ಚಲನೆಯನ್ನು ನೈತ್ಯಾತ್ಮಿಕ ನೆಲೆಯಲ್ಲಿ ನಮಗೆ ಚಿತ್ರಿಸಿಕೊಡುತ್ತದೆ. ಈ ಕಥಾ ಸಂಕಲನ.

ಗ್ರಾಮೀಣ ಜನರು ಹೊಸ ವ್ಯಕ್ತಿಗಳ ಬಗ್ಗೆ ಅಥವಾ ಹೊಸ ಅಂಶಗಳ ಬಗ್ಗೆ ವ್ಯಕ್ತಪಡಿಸುವ ಪ್ರತಿಕ್ರಿಯೆ ಹೇಗಿರುತ್ತದೆ? ಎಂಬುದಕ್ಕೆ ಗೊರೂರರ 'ಬೈಲಹಳ್ಳಿ ಸರ್ವೆ' ಒಂದು ಉತ್ತಮ ನಿದರ್ಶನ. ಊರಿಗೆ ಯಾರಾದರೂ ಹೊಸಬರು ಬಂದರೆ ಸಾಮಾನ್ಯವಾಗಿ ಅವರು ಯಾರು? ಯಾರ ಮನೆಗೆ ಬಂದಿದ್ದಾರೆ? ಎಂಬ ಕುತೂಹಲ ವ್ಯಕ್ತಪಡಿಸುವುದು ಹಳ್ಳಿಯವರ ಸ್ವಭಾವ. ಕೆಲವರು ತಾವೇ ಮುಂದುವರಿದು ಯಾವೂರಪ್ಪ? ಯಾರ ಮನೆಬೇಕು? ಎಂದು ಕೇಳುವುದು ಉಂಟು. ಆದರೆ ಊರಿಗೆ ಊರೇ ಬೆಕ್ಕಸ ಬೆರಗಾಗುವಂತೆ ನೋಡುವ ಅಪರಿಚಿತ ಆಸಾಮಿಗಳೂ ಬರುವುದು ಉಂಟು. ಅಂಥವರು ಸಾಮಾನ್ಯವಾಗಿ ಅಮಲ್ದಾರರೋ. ಶೇಕ್‌ದಾರರೋ ಅಥವಾ ಮೋಜಿನಿದಾರರೋ ಆಗಿರುತ್ತಾರೆ. ಸರ್ವೆ ಮಾಡಲು ಬೈಲಹಳ್ಳಿಗೆ ಬಂದ ಮೋಜನಿದಾರರ ಸ್ಥಿತಿಯೂ ಇದೇ ಆಗಿರುತ್ತದೆ. ಮೋಜಿನಿದಾರರ ವೇಷಭೂಷಣಗಳು ಬೈಲಹಳ್ಳಿಯ ಜನರಿಗೆ ಕುತೂಹಲದ ವಸ್ತುಗಳಾಗುತ್ತವೆ. ಅವರು ಊರಿಗೆ ಬಂದಿಳಿದಾಗ ಉಂಟಾದ ಕೋಲಾಹಲವನ್ನು ಗೊರೂರರು ಹೀಗೆ ಪರಿಚಯಿಸಿದ್ದಾರೆ.''ಮೋಜಿನಿದಾರರನ್ನು ನೋಡಲು ಹುಡುಗರೆಲ್ಲಾ ಊರ ಬಾಗಿಲಿನ ಅರಳಿ ಮರದ ಹತ್ತಿರ ಇಣಕಿ ನೋಡಲು ಪ್ರಾರಂಭಿಸಿದರು. ಊರು ಬಾಗಿಲಿನ ತಿಪ್ಪೆಯಲ್ಲಿ ಮೂರು ಜನ ರೈತರು ಕೆಲಸ ಮಾಡುತ್ತಿದ್ದರು. ಅವರು ಗೊಬ್ಬರವನ್ನು ಗಾಡಿಗೆ ತುಂಬುತ್ತಿದ್ದರು. ಕಸ್ರಗಿದ್ದ ಗೊಬ್ಬರದಿಂದ ವಾಸನೆ ಬರುತ್ತಿದ್ದಿತು. ಹ್ಯಾಟು ಬೂಟು ಹಾಕಿಕೊಂಡಿದ್ದ ವ್ಯಕ್ತಿಯನ್ನು ರೈತರು ಅದುವರೆಗೆ ನೋಡಿಯೇ ಇರಲಿಲ್ಲ. ಅವರು ಗೊಬ್ಬರದ ಕೆಲಸವನ್ನು ಅಲ್ಲಿಗೇ ಬಿಟ್ಟು ಮೋಜಿನಿದಾರರ ಕಡೆಗೆ ನೋಡುತ್ತಾ ನಿಂತುಕೊಂಡರು. ಊರೊಳಗಿಂದ ಗೊಬ್ಬರದ ಮಂಕರಿಗಳನ್ನು ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿದ್ದ ಐದು ಜನ ಹೆಂಗಸರು ಮಂಕರಿಯನ್ನು ತಲೆಯ ಮೇಲೆ ಇಟ್ಟುಕೊಂಡು ಮೋಜಿನಿದಾರರನ್ನು ನೋಡುತ್ತಾ ನಿಂತುಕೊಂಡರು. ಆರೇಳು ಹೆಂಗಸರು ತಲೆಯ ಮೇಲೆ ಗಂಡಂದಿರಿಗೆ ಕುಕ್ಕೆಯಲ್ಲಿ ಓಟ್ಟನ್ನೂ, ಕೈಯಲ್ಲಿ ಚಿಂಬಿನಲ್ಲಿ ನೀರನ್ನು ತೆಗೆದುಕೊಂಡು ಹೊರಟ್ಟಿದ್ದವರು ಮುಂದಕ್ಕೆ ಹೋಗದೆ ಮೋಜಿನಿದಾರರನ್ನು ನೋಡುತ್ತಾ ನಿಂತು ಬಿಟ್ಟರು''.[೧] ಗ್ರಾಮೀಣ ಪರಿಸರದ ಈ ಸ್ತಬ್ಧ ಚಿತ್ರ 'ಪಂಚ್' ವ್ಯಂಗ್ಯ ಚಿತ್ರಗಳನ್ನೂ, ಚಿತ್ರಕಾರ ಹೊಗಾತೇನ ಹಾಸ್ಯ ಚಿತ್ರಗಳನ್ನು ನೆನಪಿಗೆ ತರುತ್ತವೆ.

'ಹಳ್ಳಿಯ ಚಿತ್ರಗಳು' ಎಂಬ ಕೃತಿಯ 'ನಮ್ಮ ಜೋಡಿದಾರರ ಕೆಲವು ಚಿತ್ರಗಳು' ಎಂಬ ಪ್ರಬಂಧದಲ್ಲಿ ಜೋಡಿದಾರರು ಈಜಿಕೊಂಡು ಕೆರೆದಾಟುವಾಗ ಬಟ್ಟೆ ಒಗೆಯುತ್ತಿದ್ದ

---

೧ ಬೈಲ ಹಳ್ಳಿ ಸರ್ವೆ, ಪು. ೩೧೦.

ಗೌಡರ ಹೆಣ್ಣೊಂದು ಹಾರುವಯ್ಯ ನನ್ನನ್ನು ಓಡಿದುಕೊಳ್ಳಲು ಬರುತ್ತಿದ್ದಾನೆ ಎಂದು ಬಾಯಿ ಬಡಕೊಂಡದ್ದು. ಕ್ಷಣಾರ್ಧದಲ್ಲಿ ಜೇನು ಹುಳುಗಳು ಬೆನ್ನು ಹತ್ತಿ ಬರುವಂತೆ ಉಳುವವರು. ಬಾರು ಗೋಲನ್ನು ಓಡಿದು. ಆಗೆಯುವವರು ಹಾರೆ ಗುದ್ದಲಿಗಳನ್ನು ಓಡಿದುಕೊಂಡು ನೂರಾರು ಜನ ಓಡಿ ಬರುತ್ತಿರುವುದನ್ನು ಕಂಡು ಜೋಡಿದಾರರು ತಮ್ಮ ಮೈ ಮೂಳೆ ಒಂದೂ ಉಳಿಯುವುದಿಲ್ಲವೆಂದು ಕಾಲಿಗೆ ಬುದ್ಧಿ ಹೇಳಿದ ಪ್ರಸಂಗ. ಯಾವಾಗಲೂ ಬುದ್ಧಿ ಎಂದು ಕರೆಯುತ್ತಿದ್ದ ಹನುಮ ಹೆಂಡ ಕುಡಿದು. ಜೋಡಿದಾರರನ್ನು "ಏನ್ಲಾಮೊಗ ಅಲ್ಲೆ ನಿಂತ್ಕೊ ಒಂದು ಬೀಡಿ ಕೊಟ್ಟೆನಂತೆ' ಎಂದು ಯದ್ವಾತದ್ವಾ ಮಾತನಾಡತೊಡಗಿದಾಗ ಹೆದರಿದ ಜೋಡಿದಾರರು ಕಂಬಿ ಕೀಳುತ್ತಾರೆ. ಹನುಮ ಓಂಬಾಲಿಸಿ ಬಂದಾಗ ಅವನನ್ನು ಕೊಳಕ್ಕೆ ನೂಕುತ್ತಾರೆ. ಕೊಳದಿಂದ ಎದ್ದ ಹನುಮ. ಬುದ್ಧಿ ಎನ್ನುತ್ತಾನೆ. ಓಂಸೆ ಮತ್ತು ಮೋಹಕತೆ ಈ ಎರಡನ್ನೂ ಈ ಸಂದರ್ಭ ವ್ಯಕ್ತಪಡಿಸುತ್ತದೆ. ಜೋಡಿದಾರರಿಗೆ ಆದದ್ದು ಓಂಸೆ. ಪ್ರೇಕ್ಷಕರಿಗೆ ಬಂದ ಲಾಭ ಖುಷಿ.

ಗೊರೂರರ ಕೃತಿಗಳು ಒಂದು ಕಾಲದ ಜೀವನ ವಿಧಾನ ಹಾಗೂ ಅಲ್ಲಿಯ ಪರಿಸರವನ್ನು ಪರಿಚಯ ಮಾಡಿಕೊಡುವ ಸಾಹಿತ್ಯಿಕ ಕನ್ನಡಿ. ಸಾಹಿತ್ಯ ಸಮಾಜದ ಪ್ರತಿಬಿಂಬ ಮಾತ್ರವಲ್ಲ, ಗತಿಬಿಂಬವೂ ಹೌದು ಎಂಬ ಮಾತಿಗೆ ಗೊರೂರರ ಒಟ್ಟ ಸಾಹಿತ್ಯ ಒಂದು ಉತ್ತಮ ನಿದರ್ಶನ. ಜಗತ್ತಿನ ಸಂಸ್ಕೃತಿಯ ಒಂದು ಉತ್ತಮ ಭಾಗ ಹೇಮಾವತಿ ನದಿ ತೀರದ ಗೊರೂರಿನಲ್ಲಿ ದಾಖಲುಗೊಂಡಿದೆ.'ನದಿಯೇ ಹೀಗೆ ಒಂದು ಗ್ರಾಮಕ್ಕೆ ನಾಯಕಿಯಾಗುತ್ತಾಳೆ. ಈ ಹಳ್ಳಿ ಕರ್ನಾಟಕ ಜನಜೀವನದ ಸಾಹಿತ್ಯ, ಸಂಸ್ಕೃತಿ ಭಾಷೆ ಹಾಗೂ ಬದುಕಿನ ಒಂದು ಉತ್ತಮ ಮಾದರಿಯಂತಿದೆ. ಈ ಹಳ್ಳಿಯ ಜೀವಿತದಲ್ಲಾಗುತ್ತಿರುವ ಬದಲಾವಣೆಯನ್ನು ಗೊರೂರರು ಗುರುತಿಸಿದ್ದಾರೆ. ಹೀಗೆ ನಮಗೆ ಗೊರೂರರು ತಮ್ಮ ಬರವಣಿಗೆಯ ಮೂಲಕ ಒಂದು ಸಾಹಿತ್ಯ ಮಾದರಿಯನ್ನು ಸಾಂಸ್ಕೃತಿಕ ಮಾದರಿಯನ್ನು ಕೊಟ್ಟಿದ್ದಾರೆ.

# ಅಡವಿಯಲ್ಲಿ ಬಿಡದಿ ಮಾಡಿರುವ ಗೌಳಿಗರು

**ಪ್ರಮೋದ ಹೆಗಡೆ**

ಗೌಳಿಗು ಎಂದರೆ ದಣಗರ ಜನಾಂಗ ಅರ್ಥಾತ್ ಗೌಳಿಗರು, ಎಮ್ಮೆ, ದನಕರುಗಳನ್ನು ಸಾಕಿ ಅವುಗಳನ್ನು ಹೈನು, ಗೊಬ್ಬರಗಳಿಂದ ಉತ್ಪನ್ನ ಪಡೆಯುವುದೇ ಇವರ ಕಸುಬು. ಎಲ್ಲಾ ಗೌಳಿಗರು ಕುರಿತು ಸಮಾನವಾದ ವಿಚಾರ ಪ್ರಸ್ತಾಪಿಸಿದರೆ ಅಡವಿಯ ಮಧ್ಯದಲ್ಲಿ ಬದುಕುವ ದಣಗರ ಗೌಳಿಗರಿಗೆ ಅನ್ಯಾಯವಾದೀತು. ಬೆಂಗಳೂರಿನ ಜರ್ಸಿ ಆಕಳು ಸಾಕಿದ ಗೌಳಿ ಅಥವಾ ಹುಬ್ಬಳ್ಳಿಯ ಶಹರದ ಉತ್ತಮ ರಾಸು ಎಮ್ಮೆ ಸಾಕಿದ ಗೌಳಿಗೆ ಉತ್ತರ ಕನ್ನಡದ ಅಡವಿಯಲ್ಲಿ ಅಡವಿ ಪ್ರಾಣಿಗಳಂತೆ ಬದುಕುವ ಗೌಳಿಗರಲ್ಲಿ ತೀರಾ ಅಂತರವಿದೆ.

ಶ್ರೀ ಕೃಷ್ಣನ ಸಹಚರರೆಂದು ಹೇಳಿಕೊಳ್ಳುವ ಗೌಳಿಗರು ನಂದಗೋಕುಲದ ಸುತ್ತಮುತ್ತಲಿಂದ ನದಿ ನೀರಿಗೆ ಅವಲಂಬಿತರಾಗಿ ಉತ್ತರದಿಂದ ಇಲ್ಲಿಯವರೆಗೆ ವಲಸೆ ಬಂದಿರುವುದು ನಾವು ಗುರುತಿಸಬಹುದು. ಗೌಳಿಗರು ಬದುಕಿಗಾಗಿ ಕ್ಷೇತ್ರಗಳ ಬದಲಾವಣೆ ನಿರಂತರವಾಗಿ ಮಾಡುತ್ತ ಬಂದರೂ ಅವರ ಜೀವನ ವಿಧಾನ ಉಡಿಗೆ ತೊಡಿಗೆಗಳನ್ನು ಇಂದಿಗೂ ಹಳೇ ಶೈಲಿಯನ್ನೆ ಉಳಿಸಿಕೊಂಡಿದ್ದಾರೆ. ಈ ಗೌಳಿಗರು ಕೊಲ್ಹಾಪುರದಿಂದ ಇಲ್ಲಿ ಲಭ್ಯವಿರುವ ವಿಫುಲವಾದ ನೀರು ಹಾಗೂ ಹುಲ್ಲನ್ನು ಅರಸಿಕೊಂಡು ಹಳಿಯಾಳ, ಕಿರವತ್ತಿ ಮುಂಡಗೊಡ ಭಾಗದಲ್ಲಿ 40-45 ವರ್ಷಗಳಿಂದ ಹಿಂದೆ ತಳ ಊರಿದರು. ಪುಕ್ಕಟೆಯಾಗಿ ಸಿಗುವ ಪುಷ್ಟಿಯಾದ ಹುಲ್ಲು, ನೀರು ಹಾಗೂ ಅಡವಿಯ ಮರ ಮುಟ್ಟುಗಳಿಂದ ವಿಶಿಷ್ಟವಾದ ದಡ್ಡಿ (ಮನೆ) ಇವುಗಳಿಂದ ಜೀವನ ನಿರ್ವಹಣೆ ಅತೀ ಕಡಿಮೆ ವೆಚ್ಚದಲ್ಲಿ ಕ್ಷೀರ ಕ್ರಾಂತಿಗೆ ಕಾರಣರಾದರು. ಒಬ್ಬೊಬ್ಬ ಗೌಳಿಯ ಹತ್ತಿರ ಆರೋಗ್ಯಕರ ೫೦೦ ಎಮ್ಮೆಗಳ ಆಸ್ತಿ ಮಾಲೀಕರಾದರು. ಈ ಹಾಲನ್ನು ಪೇಟೆಗಳಿಗೆ ತಂದು ಮಾರಿ ಹಾಗೂ ಹೆಚ್ಚಾದ ಹಾಲು ಕಾಯಿಸಿ "ಖವಾ" ತಯಾರಿಸಿ ಪೂಣಾದವರೆಗೆ ಮಾರಾಟ ವ್ಯವಸ್ಥೆಯನ್ನು ಬೆಳೆಸಿಕೊಂಡರು. ಶೀಘ್ರದಲ್ಲಿ ಅನೇಕ ಲಕ್ಷಾಧೀಶ ಗೌಳಿಗರನ್ನು ಕಾಣುವಂತಾಯಿತು. ಅತಿ ಜಿಪುಣರಾದ ಇವರು ಕ್ರಮೇಣ ತಮ್ಮ ಸಾಂಪ್ರದಾಯಿಕ ಬೆಳ್ಳಿ ಆಭರಣಗಳಲ್ಲಿ ಹಣ ತೊಡಗಿಸಿದರು. ನಾಗರಿಕ ವ್ಯವಸ್ಥೆಯಿಂದ ಅತೀ ದೂರ ಉಳಿದ ಇವರು ಹಣವನ್ನು ಎಲ್ಲಿಯೂ ತೊಡಗಿಸದೆ ತಮ್ಮ ದಡ್ಡಿ ಗುಡಿಸಲುಗಳ 'ಗಳ'ದ ನಡುವೆ ಹಣ ಅಡಗಿಸಿ ಇಡುತ್ತಿದ್ದರು. ಮರದ ಗಳಗಳೇ ಇವರ ಆಭರಣ ಇರುವ ಖಜಾನೆಗಳಾಗಿದ್ದವು. ೧೯೭೨ ರಲ್ಲಿ ತೆಂಗಿನಗರಿಯಲ್ಲಿ ದಡ್ಡಿಗೆ ಬೆಂಕಿ ಬಿದ್ದಾಗ ಹಳಗಳ ನಡುವೆ ಲಕ್ಷರೂಪಾಯಿಗೆ ಮೇಲ್ಪಟ್ಟು ಬೆಳ್ಳಿ ಹಾಗೂ ನಗದು ಸುಟ್ಟು ಹೋದ ಜೀವಂತ ಉದಾಹರಣೆ ಇದೆ. ಇವರ ಎಮ್ಮೆ ಹಾಗೂ ಕರುಗಳ ಅಡವಿಯಲ್ಲಿ ಹುಲುಸಾದ ಪೌಷ್ಟಿಕಾಂಶಗಳಿಂದ ಕೊಬ್ಬಿ ಫಲವತ್ತಾದ ಉತ್ಪಾದನಾ ಸಾಮಾಗ್ರಿಗಳಾಗಿದ್ದವು. ಅಂದಿನ ಕಾಲದಲ್ಲಿ ಇವರ ಹಣಕಾಸಿನ ಪರಿಸ್ಥಿತಿ ಅರಿತ ಬ್ಯಾಂಕುಗಳು ಇವರಿದ್ದ ಹಳ್ಳಿಗಳಲ್ಲಿ ಶಾಖೆಗಳನ್ನು ತೆರೆಯಲು ತರಾತುರಿ ಮಾಡಿದವು. ಹಾಗಾಗಿ ಕಿರವತ್ತಿ, ಭಾಗ್ವತಿ ಅನೇಕ ಕಡೆ ಬ್ಯಾಂಕುಗಳು ಪ್ರಾರಂಭವಾದವು. ಒಬ್ಬೊಬ್ಬ ಗೌಳಿಗೆ ಲಕ್ಷಗಟ್ಟಲೇ ಹಣ ಡಿಪೊಸಿಟ ಇಟ್ಟ ದಾಖಲೆಗಳಿವೆ. ಇಂತಹ ತೃಪ್ತಿದಾಯಕ ಕುಟುಂಬಗಳಿಗೆ

ಸಿಡಿಲು ಬಡಿದಂತೆ ಇಲ್ಲಿಯ ಅಡವಿಗಳಲ್ಲಿ ಪಾರ್ಥೇನಿಯ ಹುಲ್ಲು ಅಟಂಬಾಂಬಿನಂತೆ ಪ್ರಸರಿಸ ಹತ್ತಿತು. ಇಡಿ ಅಡವಿಯಲ್ಲಿ ಹುಲ್ಲು ನಾಶವಾಯ್ತು ತುರಿಕೆ ತರುವ ಈ ಕಾಂಗ್ರೇಸ್ ಗಿಡ ರೋಗ ರುಜಿನಗಳನ್ನು ಹರಡಿದವು. ಪೌಷ್ಟಿಕ ಹುಲ್ಲು ಇಲ್ಲದೇ ಎಮ್ಮೆ ಕರುಗಳು ಸೊರಗಿದವು. ದಪ್ಪ ಹಾಲು ಕರಸಿ ನೀರು ಹಾಲು ಪೇಟೆಗೆ ಬರಲಾರಂಭಿಸಿತು. ಕಡೆಕಡೆಗೆ ಬಹುತೇಕ ಎಮ್ಮೆ ಕರುಗಳು ಅಸುನೀಗಿದವು. ಬ್ಯಾಂಕಿನಲ್ಲಿದ್ದ ಡಿಪೊಸಟ ಕರಗಿ ಗೌಳಿಗರು ಸಾಲಗಾರರಾದರು. ಶ್ವೇತಕ್ರಾಂತಿಗೆ ಕತ್ತಲು ಕವಿಯಿತು. ಆರ್ಥಿಕ ಶಕ್ತಿ ಕಳೆದುಕೊಂಡ ಗೌಳಿಗರು ಅದೇ ಅರಣ್ಯ ಇಲಾಖೆಯ ಕೂಲಿಗಳಾದರು. ಇಲಾಖೆ ಕೆಲಸ ಕಡಿಮೆಯಾದಾಗ ಗೋವಾ ಕಡೆಗೆ ಕೆಲಸಕ್ಕೆ ವಲಸೆ ಹೊರಟರು. ಅಳಿದುಳಿದ ಎಮ್ಮೆಗಳ ಜೊತೆ ಹೊಸ ಅರಣ್ಯ ಹುಡುಕುತ್ತ ಗೌಳಿಗರು ಮೈಸೂರು ಕಡೆ ಅರಣ್ಯಕ್ಕೆ ವಲಸೆ ಹೋದರು. ಅಲ್ಲಿ ಹೋದ ಗೌಳಿಗರು ಪುನಃ ಬದುಕನ್ನು ಚೆನ್ನಾಗಿ ಕಟ್ಟಿದರು. ಇಲ್ಲಿದ್ದ ಗೌಳಿಗರು ಇದ್ದ ಒಂದೆರಡು ಎಮ್ಮೆಗಳಿಂದ ಜೀವನ ಸಾಗಿಸಬೇಕಾಯಿತು. ಜೆಆರ್‌ಡಿಪಿ ಸಾಲದ ಎಮ್ಮೆಗಳು ಸಾಕುತ್ತ ಬದುಕುತ್ತ ಗೌಳಿಗರು ಅಸ್ತಿತ್ವವನ್ನು ಉಳಿಸುವ ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಗೌಳಿಗರು ಬದುಕಿಗಾಗಿ ಉತ್ತರಕನ್ನಡ ಅರಣ್ಯದ ಮಧ್ಯದಲ್ಲಿ ಅತಿಕ್ರಮಣ ಸಾಗುವಳಿ ಪ್ರಾರಂಭಿಸಿದ್ದಾರೆ. ಮಳೆಗಾಲದಲ್ಲಿ ಅತಿಕ್ರಮಣ ಸಾಗುವಳಿ ಮಾಡುತ್ತಾ ಬೇಸಿಗೆಯಲ್ಲಿ ಕೂಲಿ ಕೆಲಸ ಅರುಸುತ್ತಿರುತ್ತಾರೆ. ಉಳಿದ ಜನಾಂಗದ ಬಡತನ, ಅನಕ್ಷರತೆ ಹಿಂದುವಳಿಕೆಗಳ ಕುರಿತು ಸಾಕಷ್ಟು ಪ್ರಚಾರ ನಡೆಯುತ್ತಿರಬಹುದು. ಆದರೆ ನಿಜಕ್ಕೂ ಇಂದಿಗೂ ಅಡವಿಯ ಮಧ್ಯದಲ್ಲಿ ಅದೇ ಹಳೆ ಶೈಲಿಗಳಿಂದ ಅಡವಿಯ ಪ್ರಾಣಿಗಳಂತೆ ಬದುಕುವ ಗೌಳಿಗರು ಯಾವ ಮೀಸಲಾತಿ ವರ್ಗಕ್ಕೂ ಸೇರಿಲ್ಲ. ಒಬ್ಬರೂ ಶಿಕ್ಷಣವಂತರಿಲ್ಲದ ಇವರು ಇನ್ನು ಜನರಲ್ ಮೆರಿಟ್‌ನಲ್ಲಿ ಸ್ಪರ್ಧೆ ಮಾಡಬೇಕಾದ ಕರುಣಾಜನರ ಪರಿಸ್ಥಿತಿ ಇದೆ. ಇವರನ್ನು ಸರಕಾರ ಎಲ್ಲಾ ವಿಶೇಷ ಲಕ್ಷಣಗಳೊಂದಿಗೆ ಈ ಜನಾಂಗದ ಬದುಕಿನ ಕಡೆಗೆ ಲಕ್ಷ ವಹಿಸಬೇಕಾಗಿದೆ.

**ಗೌಳಿಗರ ಜನ ಜೀವನ ವಿಧಾನ**

ನಾನು ೧೯೭೭ರಲ್ಲಿ ಶಿಕ್ಷಣ ಮುಗಿಸಿ ನನ್ನ ಹಳ್ಳಿಗೆ ಬಂದಾಗ 'ಊರಿನ ಎಷ್ಟು ದೊಡ್ಡವನಾದರೂ ವಾರದಲ್ಲಿ ಒಂದು ದಿನ ದನಕಾಯುವ ಬಾರಿಗೆ ಹೋಗಲೇ ಬೇಕಾಗಿತ್ತು. ಆಗ ನಮ್ಮ ಪಾಳಿ ಬಂದಾಗ, ದನಕಾಯಲು ಇಡೀ ಊರಿನ ದನದೊಂದಿಗೆ ಅಡವಿಗೆ ಹೋದಾಗ ಗೌಳಿಗರ ಜೊತೆ ಒಡನಾಡುವ ಅನುಭವ ರೋಚಕವಾದದ್ದು. ೨೧ನೇ ಶತಮಾನಕ್ಕೆ ಹೋಗುವ ಕಾಲದಲ್ಲಿ ಗೌಳಿಗರಲ್ಲಿ ಅನೇಕರು ಇಂದಿಗೂ ಮಲ ವಿಸರ್ಜನೆ ನಂತರ ನೀರನ್ನು ಉಪಯೋಗಿಸುವ ವಿಧಾನವಿಲ್ಲ. ಅಡವಿಯ ಮಕ್ಕಳಾದ ಇವರು ಗಿಡಗಳ ಎಲೆಯನ್ನು ಸ್ವಚ್ಛಗೊಳಿಸುವ ಕ್ರಿಯೆಗೆ ಉಪಯೋಗಿಸುವರು. ಅಡವಿಯಲ್ಲಿ ಇವರಿಗೆ ಅಸಾಮಾನ್ಯ ಧೈರ್ಯ, ಆದರೆ ಪಟ್ಟಣದಲ್ಲಿ ತೀರಾ ಪುಕ್ಕಲರು, ಹಾಗಾಗಿ ಸುಲಭವಾಗಿ ಶೋಷಣೆಗೆ ಒಳಗಾಗುತ್ತಾರೆ. ಇವರ ದಿನಚರಿ ಪ್ರಾರಂಭವಾಗುವುದು ಬೆಳಿಗ್ಗೆ ೨ ಗಂಟೆಗೆ, ಆಗ ಎಮ್ಮೆ ಕರುಗಳನ್ನು ದೂರದ ಅಡವಿಗೆ ಮೇಯಲು ತೆಗೆದುಕೊಂಡು ಹೋಗುತ್ತಾರೆ. ಕರಾಳ ರಾತ್ರಿಯ ಅಡವಿಯಲ್ಲಿ ಹಿಂಡಿನಲ್ಲಿರುವ ಎಮ್ಮೆಗಳು ಬಹಳ ಸಲ ಹುಲಿಗೆ ಆಹಾರವಾಗುವುದುಂಟು. ಕಂಬಳಿ ಹೊದ್ದುಕೊಂಡು ಯಾವುದೇ ಬೆಳಕಿನ ಸಹಾಯವಿಲ್ಲದೇ

ಎಮ್ಮೆಯ ಹಿಂದೆ ಅಡವಿಗೆ ಹೋಗುವ ಇವರಿಗೆ ಕಾಲು ಕೆಳಗೆ ಸಿಗುವ ಹಾವಿನ ಭಯವಾಗಲಿ ಅಥವಾ ವನ್ಯ ಪ್ರಾಣಿಗಳ ಭಯ ಇರುವುದಿಲ್ಲ. ಬೆಳಿಗ್ಗೆ ೯ ಗಂಟೆಗೆ ಸೊಂಪಾಗಿ ಎಮ್ಮೆಗಳು ಹುಲ್ಲು ಮೇಯ್ದು ನಂತರ ದಡ್ಡಿಗೆ ಹಿಂತಿರುಗಿ ಭಾಕ್ರ (ರೊಟ್ಟಿ) ತಿನ್ನುವರು. ಬೆಳಿಗ್ಗೆ ಮುಖ ತೊಳೆಯುವ ಸಂಪ್ರದಾಯವಿಲ್ಲ. ದಡ್ಡಿ ಎಂದರೆ ಇಳಿಜಾರಾಗಿ ಕಟ್ಟಿರುವ ಉದ್ದ ಗೊಡಾವನ ಇದ್ದಂತೆ. ಮೇಲೆ ಹುಲ್ಲಿನ ಛಾವಣಿ ಅದಕ್ಕೆ ಮರಗಳೇ ಆಧಾರ. ಅಲ್ಲಲ್ಲಿ ಎಲೆಗಳಿಂದಲೇ ಕಂಪಾರ್ಟಮೆಂಟ. ಒಂದರಲ್ಲಿ ಅಡಿಗೆ ಮತ್ತೊಂದರಲ್ಲಿ ಮಲಗುವುದು. ಮತ್ತೊಂದರಲ್ಲಿ ಎಮ್ಮೆಗಳು ಮಲಗುವುದು. ಮಗದೊಂದು ಕರುಗಳ ಹಿಂಡಿನಿಂದ ತುಂಬಿರುತ್ತದೆ. ಅಲ್ಲಿಯೇ ಒಂದು ಕಡೆ ಎಮ್ಮೆಗಳ ಸಗಣಿ ಉಚ್ಚೆ. ಪಕ್ಕದಲ್ಲಿಯೆ ರೊಟ್ಟಿ(ಭಾಕ್ರಿ)ಯನ್ನು ಸ್ವಾಧಿಸುತ್ತಾರೆ. ರೊಟ್ಟಿ ಎಂದೂ ತೊಸೆಯದಿದ್ದ ಕಂಬಳಿ ಪಕ್ಕದಲ್ಲಿ ಸಗಣಿ ಎಲ್ಲವೂ ಒಂದೇ ವಾಸನೆಯಿಂದ ಕೂಡಿರುತ್ತದೆ. ೯ ರಿಂದ ೧೦ ಗಂಟೆಯ ಒಳಗೆ ಹಾಲು ಕರೆದಾದ ನಂತರ ಮನೆ ಕೆಲಸ ದನದ ಕೆಲಸ ಪುನಃ ಗಂಡಸರದ್ದು. ವಿಶೇಷವಾಗಿ ಹೆಂಗಸರು ಕ್ಯಾನ್‌ನಲ್ಲಿ ಹಾಲನ್ನು ಪೇಟೆಗೆ ಮಾರಲು ತೆಗೆದುಕೊಂಡು ಹೋಗುತ್ತಾರೆ. ಹೋಗುವಾಗ ಸರಕಾರಿ ಬಸ್ಸು ಲಭ್ಯವಿದ್ದರೂ ಹಣ ಉಳಿಸುವುದಕ್ಕಾಗಿ ಟ್ರಕ್ಕಿನ ಹಿಂದುಗಡೆಗೆ ಹತ್ತಿ ಪ್ರಯಾಣ ಮಾಡುತ್ತಾರೆ. ಇತ್ತೀಚಿಗೆ ಇವರ ಹಣದ ಬಿಕ್ಕಟ್ಟಿನಲ್ಲಿ ಮತ್ತೊಂದು ಶಾಪವೆಂದರೆ ಎಲ್ಲ ಗೌಳಿಗರೂ ಹೆಚ್ಚಾಗಿ ಸರಕಾರಿ ಸರಾಯಿಯ ಪ್ರಭಾವಕ್ಕೆ ಒಳಗಾಗಿದ್ದಾರೆ. ಹೆಂಗಸರ ಸಂಖ್ಯೆಯೂ ಕುಡಿತದಲ್ಲಿ ಕಡಿಮೆ ಇಲ್ಲ.

ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದ ಗೌಳಿಗರು ಗೋವಳದ ಉದ್ಯೋಗವನ್ನು ಬೆಳೆಸಿಕೊಂಡು ಬಂದಿದ್ದಾರೆ. ಇವರಲ್ಲಿ ಕಾಡುಗೌಳಿ, ಕಚ್ಚಾಗೌಳಿ, ಹಚ್ಚಿಕಾರರು, ದಡ್ಡಿಕಾರರು ಎಂಬ ಬೇರೆ ಬೇರೆ ಪಂಗಡಗಳಿವೆ. ಇವರ ಭಾಷೆ ಕೊಂಕಣಿ ಮಿಶ್ರಿತ ಮರಾಠಿ ಯಾಗಿ ಕೊಂಕಣಿ ಮತ್ತು ಮರಾಠಿ ಇಬ್ಬರಿಗೂ ಭಾಷೆಕಾರರಿಗೆ ಅರ್ಥವಾಗದ ಹೊಸ ಮಿಶ್ರಣ ಮಾಡಿಕೊಂಡಿದ್ದಾರೆ. ವೇಶ ಭೂಷಣದಲ್ಲಿ ಹಿಮಾಲಯ ಹಾಗೂ ಉತ್ತರ ಹಿಂದುಸ್ತಾನದಲ್ಲಿರುವ ಸಂಪ್ರದಾಯಕ ಆಭರಣಗಳು. ಕೈಕಟ್ಟು. ಮೂಗು ಹಾಗೂ ಕಿವಿ ಆಭರಣ. ಸೊಂಟದ ಪಟ್ಟಿ. ಕಾಲು ಗೆಜ್ಜೆ ಮುಂತಾದವುಗಳನ್ನು ಕಾಣಬಹುದು. ಕ್ಯಾಲೆಂಡರಿನಲ್ಲಿ ಕಾಣುವ ಉತ್ತರದ ಗಡಿಗಳ ವೇಷ ಭೂಷಣಗಳನ್ನು ಹೋಲುತ್ತವೆ. ದಾಂಡೇಲಿಯ ಸುತ್ತಮುತ್ತ ಹಳಿಯಾಳದ ಅಕ್ಕ ಪಕ್ಕದಲ್ಲಿ ಯಲ್ಲಾಪುರದ ಪೂರ್ವ ಭಾಗದಲ್ಲಿ, ಮುಂಡಗೋಡ ಸುತ್ತಮುತ್ತ ಕನಿಷ್ಠ ೧೦,೦೦೦ಕ್ಕೂ ಮಿಕ್ಕ ಜನಸಂಖ್ಯೆಯನ್ನು ಹೊಂದಿದ್ದಾರೆ. ಒಂದೊಂದು ಹಳ್ಳಿ ದಡ್ಡಿ ಎಂದರೆ ೨೫-೩೦ ಮನೆಗಳ ಗುಂಪು ಆಗಿರುತ್ತದೆ. ದಡ್ಡಿಯಲ್ಲಿ ಒಬ್ಬ ಜಾಂಟ್ಯಾ; ಎಂದರೆ ಮುಖ್ಯಸ್ಥ ಅಥವಾ ಧುರಿಣನಿರುತ್ತಾನೆ. ಸಾಮಾನ್ಯವಾಗಿ ಈ ಮುಖ್ಯಸ್ಥರು ವಿಕೇಂದ್ರಿಕರಣ ನೀತಿಯ ನ್ಯಾಯಾಂಗದ ಮುಖ್ಯಸ್ಥನಂತೆ ವರ್ತಿಸುತ್ತಾನೆ. ನ್ಯಾಯದಾನ ನೀಡುವದು. ಲಗ್ನ ಇನ್ನಿತರ ಮುಖ್ಯ ಕಾರ್ಯಗಳಲಿ ಜವಾಬ್ದಾರಿ ತೆಗೆದುಕೊಳ್ಳುವದು. ಅನಾರೋಗ್ಯದ ಕುರಿತು ಹಳೆ ಶೈಲಿಯ ಉಪದೇಶ ಮಾಡುವದು ಇರುತ್ತದೆ. ಇದೇ ಮುಖ್ಯಸ್ಥರು ಒಳ್ಳೆಯ ನ್ಯಾಯನೀಡುವ ಉದಾಹರಣೆ ಇದ್ದರೂ ಬಹಳ ಸಂದರ್ಭದಲ್ಲಿ ಉಳಿದ ಬಡ ಗೌಳಿಗರನ್ನು ಶೋಷಣೆ ಮಾಡಿ ಶ್ರೀಮಂತರಾದ ಉದಾಹರಣೆ ಸಾಕಷ್ಟಿದೆ. 'ಜಾಂಟ್ಯ' ಅಂದರೆ ಈ ಮುಖ್ಯಸ್ಥನು ಪರಸ್ಪರ ಬೇರೆ ಬೇರೆ ಊರುಗಳ ಸಮಸ್ಯೆ

ಬಗೆಹರಿಸಲು ಹೋಗುತ್ತಾರೆ. ೩-೪ ಪ್ರದೇಶಗಳ ಮುಖ್ಯಸ್ಥರು ಸೇರಿ ಪಂಚಾಯ್ತಿ ನಡೆಸುವರು. ಎರಡೂ ಪಕ್ಷಗಳ ಹೇಳಿಕೆ ಪಡೆಯುವರು. ೮-೧೦ ತಾಸು ನಡೆಯುವ ಪಂಚಾಯ್ತಿ ಕೊನೆಯಲ್ಲಿ ನಿರ್ಣಯ ನೀಡಿ ತಪ್ಪಿತಸ್ಥರಿಗೆ ದಂಡ ವಿಧಿಸುವರು.

ಗೌಳಿಗರ ಸಮಾಜದಲ್ಲಿ ಇಂದಿಗೂ ಬಾಲ ವಿವಾಹ ಪದ್ಧತಿ ಜೀವಂತವಾಗಿದೆ. ೫-೬ ವರ್ಷದ ಮಕ್ಕಳಿಗೆ ಪೂರ್ಣ ವಿಧಿ ವಿಧಾನಗಳಂತೆ ಲಗ್ನ ಮಾಡುತ್ತಾರೆ. ವಿಶೇಷವೆಂದರೆ ಇವರಲ್ಲಿ ವರದಕ್ಷಿಣೆ ಬದಲು ವಧುದಕ್ಷಿಣೆ ಇದೆ. ೫೦೦ ರೂ ಯಿಂದ ೧,೦೦೦-೦೦ ರೂ ಹೆಣ್ಣಿನ ತಂದೆಗೆ ಹಣ ನೀಡಬೇಕಾಗುತ್ತದೆ. ಪ್ರಾಯಸ್ಥರಾಗುವವರೆಗೆ ಹೆಣ್ಣು ತವರು ಮನೆಯಲ್ಲೆ ಉಳಿಯುತ್ತಾಳೆ. ಲಗ್ನದ ಮೊದಲು ಎರಡೂ ಸಂಬಂಧಿಕರಲ್ಲಿ ದೀರ್ಘ ಮಾತುಕತೆ ನಡೆಯುತ್ತದೆ. ಎರಡೂ ಪಕ್ಷದವರು ಏಕ ಕಾಲಕ್ಕೆ 'ಜವಳಿ' ಖರೀದಿಸಬೇಕು. ಅಂದೇ ಸಾಕಷ್ಟು ಎರಡೂ ಪಕ್ಷದವರು ಸರಾಯಿ ಕುಡಿಯುತ್ತಾರೆ. ಆಗ ಅನೇಕ ಸಂದರ್ಭಗಳಲ್ಲಿ ಜಗಳ ಉದ್ಭವವಾಗುವುದು. ಸಹಜವಾಗುತ್ತದೆ. ಬಾಲವಿವಾಹದ ದುರಂತದ ಭಾಗವೆಂದರೆ ಗಂಡು ಏನಾದರೂ ಕಾರಣದಿಂದ ಹೆಣ್ಣನ್ನು ಸೋಡಚೀಟಿ ಕೊಡುವ ಅನೇಕ ಉದಾಹರಣೆಗಳಿವೆ. ಆಗ ಹೆಣ್ಣನ್ನು ಪುನಃ ವಿವಾಹ ಮಾಡುವ ಸಂಪ್ರದಾಯವಿದೆ. ಆಗ ಪುನಃ ಪಂಚಾಯ್ತಿ ನಡೆದು ತಪ್ಪಿತಸ್ಥರು ಮೊದಲಿನ ಮದುವೆ ಖರ್ಚನ್ನು ದಂಡವಾಗಿ ನೀಡಬೇಕಾಗುತ್ತದೆ.

ಶ್ರೀ ಕೃಷ್ಣ ವಂಶಸ್ಥರಾದ ಇವರ ಆರಾಧ್ಯದೈವ ಪಂಡರಾಪುರದ ವಿಠೋಬ. ವರ್ಷಕ್ಕೊಮ್ಮೆ ಪಂಡರಾಪುರಕ್ಕೆ ಭೇಟಿ ನೀಡುವುದೆಂದರೆ ಮಹಾಕಾರ್ಯ ಮಾಡಿದ ತೃಪ್ತಿ ಉಂಟಾಗುವುದು. ಇವರಲ್ಲಿ ಸಿಂಧೆ ಪಟಕಾರೆ, ಕೊಕರೆ, ಎಡಗೆ, ಮಳ್ಳೊ ಅನೇಕ ಹೆಸರಿನ ಪಂಗಡಗಳಿವೆ. ಇವರಿಗೆ ದಸರಾ ದೊಡ್ಡ ಹಬ್ಬ. ಇವರ ದಸರಾ ಹಬ್ಬದ ಸಾಂಸ್ಕೃತಿಕ ಕಾರ್ಯಕ್ರಮ ಬಹಳ ಮಹತ್ವದ ಜಾನಪದ ಕಲೆಯಲ್ಲಿ ಸ್ಥಾನ ಪಡೆಯಬಹುದಾಗಿದೆ. ಕೊಳಲು ಊದುವದು, ಕೋಲಾಟ, ಗುಮ್ಮಟ ಹಾಗೂ ಡೊಳ್ಳು ಬಾರಿಸುತ್ತಾ ಹಾಡು ಹೇಳುತ್ತ ಕುಣಿಯುತ್ತಾರೆ.

ಗೌಳಿಗಳ ವೇಷಭೂಷಣ ಬಹಳ ವೈಶಿಷ್ಟಪೂರ್ಣವಾದದ್ದು. ಗೌಳಿ ಹೆಂಗಸರು ಹಣೆಯ ತುಂಬ ಅಡ್ಡ ಕುಂಕುಮ ಪಟ್ಟಿ ಬರೆದುಕೊಂಡಿರುತ್ತಾರೆ. ಹೆಂಸಗರು 'ಖಣ'ದ ಬಟ್ಟೆಯ, ಕುಪ್ಪಸ ಹಾಗೂ ೧೮ ಮೊಳದ ಸೀರೆಯಿಂದ ಮೊಳಕಂಡೆಯವರೆಗೆ ಕಚ್ಚಿ ಬಿಗಿದು ಸೀರೆ ಉಡುತ್ತಾರೆ. ಕೊರಳು, ಕಿವಿ, ಮೂಗು ಕೈಕಾಲುಗಳನ್ನು ನಾನಾ ವಿಧದ ಬೆಳ್ಳಿ ಆಭರಣಗಳಿಂದ ಅಲಂಕಾರ ಮಾಡಿಕೊಂಡಿರುತ್ತಾರೆ. ಗಂಡಸರು ಅಡ್ಡ ಪಂಚೆ, ಜಾಕೇಟು, ಶರ್ಟಿನ ಜೊತೆಗೆ ರುಮಾಲು, ಒಂದು ಕಂಬಳಿ, ನಾಣ್ಯಗಳ ಸರ. ಕಿವಿಗೆ ರಿಂಗು ಹಾಗೂ ಇನ್ನಿತರ ಬೆಳ್ಳಿ ಆಭರಣ ತೊಡುತ್ತಾರೆ. ಇವರಿಗೆ ಕೆಟ್ಟ ಚಳಿ ದಿನ ಇರಲಿ ಅಥವಾ ಕಟ್ಟಾ ಬಿಸಿಲಿನ ಜಳವಿರಲಿ ಕಂಬಳಿಯೆಂದು ಹೆಗಲ ಮೇಲೆ ಕಡ್ಡಾಯವಾಗಿರುತ್ತದೆ. ಬಾಯಲ್ಲಿ ಹೆಂಗಸರು ಗಂಡಸರಿನ ಯಾವಾಗಲೂ ಕವಳದ (ಕಲೆ ಅಡಿಕೆ)ಸ್ವಾದ ನಿರಂತರವಾಗಿ ಜರಗೇ ಇರುತ್ತದೆ. ಗಂಡಸರಿಗೆ ಮೀಸೆ ವಿಶೇಷ ಶೈಲಿಯಲ್ಲಿ ಪ್ರತಿಬಿಂಬಿಸಿರುತ್ತದೆ. ಅನ್ನ ಒಣ ರೊಟ್ಟಿ ಹಣಸಿದ ಸಾರು, ಒಣ ಮೀನು ದಿನ ನಿತ್ಯದ ಆಹಾರವಾಗಿದೆ. ಜಗತ್ತಿಗೆ ಹಾಲು ಕುಡಿಸುವ

ಗೌಳಿಗರು ಸ್ವತಃ ಹಾಲು ಉಪಯೋಗಿಸುವುದಿಲ್ಲ. ಎಳೆಯ ಮಕ್ಕಳಿಗೆ ತಾಜಾ ನೊರೆ ಹಾಲು ಕುಡಿಸುತ್ತಾರೆ. ಕನ್ನಡ ನೆಲದಲ್ಲಿ ಉಳಿದರೂ ಕನ್ನಡ ಕಲಿಯದ ಇವರು ತಮ್ಮ ಅರೆ ಮರಾಠಿ ಭಾಷೆ ಮುಂದುವರೆಸಿದ್ದಾರೆ. ಇವರ ಹೆಸರು ಮಾಂಬ್ಯಾ, ಜನ್ನು, ಎಡಗ್ಯಾ, ಗಂಗ್ಯಾ, ಪದ್ದು ವಿಠು, ಲಾಂಬುರ್ಯಾ, ಎಂಬ ಅನೇಕ ರೀತಿಯಲ್ಲಿರುತ್ತದೆ.

ಅರಣ್ಯದಲ್ಲಿ ನಿರ್ಭಯರಾದ ಇವರು ನಾಗರಿಕ ಜನರನ್ನು ನೋಡಿ ಹೆದರುತ್ತಾರೆ. ೧೦ ವರ್ಷದ ಹಿಂದೆ ಗೌಳಿ ದಡ್ಡಿಗೆ ಜೀಪ್ ವಾಹನ ಹೋದಲ್ಲಿ ಹೆದರಿ ಓಡಿ ಹೋಗುತ್ತಿದ್ದರು. ಭಯ ಭೀತಿಯಿಂದ ಗೌರವ ಕೊಡುವ ಇವರು 'ರಾಮ್‌ರಾಮ್' ಎಂದು ನಮಸ್ಕರಿಸುತ್ತಾರೆ. ಗೌಳಿಗರ ಸಂಬಂಧಿಕರು ಭೆಟ್ಟಿಯಾದಾಗ ಹೆಂಗಸರ ಅಥವಾ ಗಂಡಸರೂ ಪರಸ್ಪರ ಪೂರ್ಣ ಆಲಿಂಗನ ಮಾಡಿಕೊಳ್ಳುತ್ತಾರೆ. ಕಾಲಿಗೆ ಚರ ಪರ ಶಬ್ಧ ಹೊರಡುವ ಚಪ್ಪಲಿ ಧರಿಸುತ್ತಾರೆ.

ಶಿಕ್ಷಣದಿಂದ ವಂಚಿತರಾಗಿ, ಪ್ರಕೃತಿ ವೈಚಿತ್ರದಿಂದ ಹುಲ್ಲು ನಾಶದಿಂದ ಬಡವರಾಗಿ, ಸರಕಾರದ ಸವಲತ್ತುಗಳನ್ನು ಪಡೆಯದ ಇವರಿಗೆ ನಾಗರಿಕರಾಗಿ ಮನುಷ್ಯರಾಗಿ ಬದುಕಿಸುವ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ದಿವಂಗತ ನಜೀರ ಸಾಬರ ಪರಿಕಲ್ಪನೆಯಿಂದ, ಮಾನ್ಯಶ್ರೀ ರಾಮಕೃಷ್ಣ ಹೆಗಡೆ ಹಾಗೂ ಶ್ರೀ ಆರ್. ವಿ. ದೇಶಪಾಂಡೆಯವರ ಪ್ರಯತ್ನದಿಂದ ಗೌಳಿಗರಿಗೆ ಕುಡಿಯಲು ಬೋರವೆಲ್ ನೀರು, ಮನೆಗಳಿಗೆ ಹೆಂಚಿನ ಸವಲತ್ತು ನೀಡಿದ್ದು ಉತ್ತಮ ಬೆಳವಣಿಗೆಯಾಗಿದೆ.

ಈ ದನ ಕಾಯುವ, ಸಾರುವ ಗೊಲ್ಲ ಗೌಳಿಗರನ್ನು ಅವರ ಮಕ್ಕಳನ್ನು ೨೧ನೇ ಶತಮಾನಕ್ಕೆ ಹೋಗುತ್ತಿರುವ ಜಗತ್ತಿನಲ್ಲಿ ಉತ್ತಮ ಬದುಕಿಗೆ ತರಬೇಕೆಂಬುದೇ ಅಪೇಕ್ಷೆ.

* * * * *

## ಈ ಸಂಚಿಕೆಯ ಲೇಖನದಾರರು

೧. ಜಿ. ಎಸ್. ಭಟ್ಟ,
ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು -೬

೨. ಎನ್. ಹುಚ್ಚಪ್ಪ ಮಾಸ್ತರ್
ಹಿರೇಮನೆ

೩. ಶ್ರೀ ಅಭಯಕುಮಾರ್
ಯಲ್ಲಾಪುರ

೪. ಡಾ. ಮೃತ್ಯುಂಜಯ ಹೊರಕೇರಿ
೧೫. ಕೆ. ಹೆಚ್. ಬಿ. ಕಾಲೋನಿ, ಸೊಂಡೂರು - ೫೮೩ ೧೧೯

೫. ಸಿ. ಜಿ. ವೆಂಕಟಯ್ಯ
ಅಧ್ಯಾಪಕ - ಸಂಶೋಧಕ, ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು - ೫೭೦೦೦೬.

೬. ಪ್ರಮೋದ ಹೆಗಡೆ
ಯಲ್ಲಾಪುರ

## ಅಕಾಡೆಮಿ ಪ್ರಕಟಣೆಗಳು

೧ ಆರಂಭದೆತ್ತು ಐನೂರು
೨ ಆನೆ ಬಂತೊಂದಾನೆ
೩ ಗಾದೆಗಳು
೪ ಪಂಚಲೋಪದ ಕುದುರೆ
೫ ಕರ್ನಾಟಕ ಜಾನಪದ
೬ ಜಾನಪದ ಅಧ್ಯಯನ ವೈಜ್ಞಾನಿಕ ನೆಲೆಗಳು
೭ ಪ್ರಶಸ್ತಿ ಪಡೆದ ಮಹನೀಯರು
೮ ಜನಪದ ಆಟಗಳು
೯ ಗೆಜ್ಜೆ ಮಾತಾಡುತಾವೆ
೧೦ ಜಾನಪದ ಮತ್ತು ಸಮೂಹ ಮಾಧ್ಯಮ
೧೧ ಜಾನಪದ ಸಮಾಲೋಚನ
೧೨ ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು
೧೩ ಜಾನಪದ : ೧೯೯೧
೧೪ ದಕ್ಷಿಣ ಕರ್ನಾಟಕದ ಒಡಪುಗಳು
೧೫ ಗಾದೆಯ ಕಥೆಗಳು
೧೬ ಲಂಬಾಣಿ ಜಾನಪದ ಕಥೆಗಳು
೧೬ ನಡಕೆರಿಯಂಡ ಚಿನ್ನಪ್ಪ
೧೭ ಶ್ರೀಕಂಠೇಶಗೌಡರ ಜಾನಪದ ಕೊಡುಗೆ

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಅಧ್ಯಕ್ಷರು: ಡಾ. ಜೀ. ಶಂ. ಪರಮಶಿವಯ್ಯ

ಸದಸ್ಯರು

| | |
|---|---|
| ಡಾ. ಡಿ. ಕೆ. ರಾಜೇಂದ್ರ | ಶ್ರೀ ಕಾಗೋಡು ಅಣ್ಣಪ್ಪ |
| ಶ್ರೀ ಡಿ. ಜೆ. ಪದ್ಮನಾಭ | ಶ್ರೀಮತಿ ಜಯಶ್ರೀ ಗುತ್ತಲ |
| ಶ್ರೀ ಶಿವನಗೌಡ ಮಲ್ಲಪ್ಪ ಕೋಟಿ | ಶ್ರೀ ಬೆಳಗಲ್ ವೀರಣ್ಣ |
| ಶ್ರೀ ಉಪ್ಪಳ ಕೃಷ್ಣಮಾಸ್ತರ | ಶ್ರೀ ಎ. ಕೆ. ರಾಮೇಶ್ವರ |
| ಶ್ರೀ ಬಸವರಾಜ ನೆಲ್ಲಿಸರ | ಶ್ರೀ ರಂಗಾರೆಡ್ಡಿ ಕೋಡಿರಾಂಪುರ |
| ಶ್ರೀ ಕೃಷ್ಣಪ್ಪ ಕುರುಡಿ | ಶ್ರೀ ಅಪ್ಪಗೆರೆ ತಿಮ್ಮರಾಜು |
| ಡಾ. ಎಚ್. ಜೆ. ಲಕ್ಕಪ್ಪಗೌಡ | ಡಾ. ಸಿದ್ಧಲಿಂಗಯ್ಯ |
| ಡಾ. ಎಂ. ಜಿ. ಈಶ್ವರಪ್ಪ | ಶ್ರೀ ಹ. ಕ. ರಾಜೇಗೌಡ |
| ಡಾ. ಬಿ. ಎ. ವಿವೇಕ ರೈ | ಪುಟ್ಟಸ್ವಾಮಾಚಾರ್ |
| ಶ್ರೀ ಗೋವಿಂದ ಮುಕುಂದ ನಾಯಕ | ಶ್ರೀ ಜಗನ್ನಾಥ್ ಹೆಬ್ಬಾಳೆ |
| ಡಾ. ಜ್ಯೋತಿ ಹೊಸೂರ | ಶ್ರೀ ಹಿರಿಯಡಕ ಗೋಪಾಲರಾವ್ |
| ಡಾ. ಸೋಮಶೇಖರ ಇಮ್ರಾಪುರ | ಡಾ. ಎಸ್. ಎಸ್. ಭದ್ರಾಪುರ |

ಲೆಕ್ಕಾಧಿಕಾರಿ : ಬಿ. ಎನ್. ಭದ್ರಪ್ಪ

ರಿಜಿಸ್ಟ್ರಾರ್ : ಎಂ. ಎಸ್. ಸಿದ್ದೇಗೌಡ